TIGHT BINDING BOOK

# ಥರ್ಡಕ್ಲಾಸ ವೇಟಿಂಗ ರೂಮು

ಬೀChi

ಸುದರ್ಶನ ಪ್ರಕಾಶನ
ತಾರಾನಿವಾಸ :: ತಿಪಟೂರು
ಸಾಹಿತ್ಯ ಭಂಡಾರ

ಸುದರ್ಶನ ಪ್ರಕಟಣೆ ಎಪ್ಪತ್ತಮೂರು

ಸುದರ್ಶನ ಪ್ರಥಮ ಮುದ್ರಣ: ಫಬ್ರವಂ ೧೯೬೦



ಬೆಲೆ: ಒಂದೇ ರೂಪಾಯಿ

ಮುದ್ರಣ:
ಇಂಡಿಯಾ ಪ್ರೆಸ್, ಮೈಸೂರು

ಅರ್ಪಣ

ಗಾಳಿಗೆ ಹೋದ ಅರಳ ಹಿಟ್ಟು

ಕೃಷ್ಣಾರ್ಪಣ

## ಸಂಪಾದಕ ಉವಾಚ

" ತಿಂಮಾ, ಬಹಳ ಚೆನ್ನಾಗಿದ್ದಿತೋ ನಿನ್ನ ಕತೆ. ಒಳ್ಳೆಯ ಕತೆಯನ್ನು ಹೇಳಿ ಉಪಕಾರ ಮಾಡಿದಿಯೋ " ಎಂದು ಯಾರೋ ಎಂದಾಗ ತಿಂಮ ಉತ್ತರಿಸಿದ್ದನಂತೆ :

" ಇದೆಲ್ಲ ಏನು ಉಪಕಾರ ಸ್ವಾಮೀ ? ಬರೀ ಉಪಚಾರಕ್ಕೆ ಹೇಳಬೇಡಿ. ನನ್ನದಲ್ಲ ಉಪಕಾರ, ನಿಮ್ಮದು—ಹೇಳಿದಷ್ಟು ಹೊತ್ತೂ ಕುಳಿತು ಕೇಳಿದ್ದು. ಕತೆ ಏನು ಕಣ್ರೀ, ಯಾರಾದರೂ ಹೇಳುತ್ತಾರೆ; ಹೂಂಗುಟ್ಟುವವರೊಂದು ಸಿಕ್ಕಬೇಕಲ್ಲ ? " ಎಂದಿದ್ದನಂತೆ ತಿಂಮ.

ಹೂಂಗುಟ್ಟುವವರೇ ಇಲ್ಲದಾಗ ಏನಾಗಬೇಕು ಕತೆ ಹೇಳುವವನ ಗತಿ ? ರೇಡಿಯೋ ನಿಲ್ದಾಣದ ಕೋಣೆಯೊಂದರಲ್ಲಿ ಕುಳಿತು ಜೇನಹುಟ್ಟಿನಂತಹ ಕಬ್ಬಿಣದ ತುಂಡಿನ ಮುಂದೆ ಭಾಷಣ ಮಾಡುವದೂ ಹೀಗೆಯೇ. ಅನೇಕರು ತಂತಮ್ಮ ಮನೆಗಳಲ್ಲಿಯೋ ಪಾರ್ಕು ಹೋಟೆಲುಗಳಲ್ಲಿಯೋ ಕುಳಿತು ಕೇಳುತ್ತಿರಬಹುದು ಎಂಬ ಕಲ್ಪನೆಯೊಂದೇ ರೇಡಿಯೋ ಭಾಷಣಕಾರರಿಗೆ ಸಮಾಧಾನ. ಒಂದೊಂದು ಬಾರಿ ಇದೇ ಮೇಲು ಇರಬಹುದು. ಸಪ್ತ ಸಭಿಕರಿಗೆ—ನಾಲ್ಕು ಗೋಡೆಗಳಿಗೆ ಮತ್ತು ಮೂರು ಬರೀ ಕುರ್ಚಿಗಳಿಗೆ—ಭಾಷಣ ಮಾಡುವಷ್ಟು ನಿರಾಶಾದಾಯಕವಂತೂ ಇಲ್ಲವಲ್ಲ ? ಆದರೂ ಸಭೆಗಳಲ್ಲಿ ನಿಂತು ಮಾತನಾಡುವ ಅಭ್ಯಾಸ ಉಳ್ಳವರಿಗೆ ಬಾನುಲಿ ಭಾಷಣವೆಂದರೆ ಕೊಂಚ ಹಪಹಪವೇ ಇರಬೇಕು—ಉಪ್ಪಿಲ್ಲದ ಸಾರು ಉಂಡಂತೆ. ಕೇಳುವವರ ಮುಖ ಕಾಣುತ್ತಿರಬೇಕು, ಅವರು ತಮ್ಮನ್ನೇ ನೋಡುತ್ತಿರುವದನ್ನು ತಾವು ನೋಡಬೇಕು, ಸಭಿಕರು ನಕ್ಕದ್ದು ತಮ್ಮ ಕಿವಿಗೆ ಬೀಳಬೇಕು, ಕೈ ತಟ್ಟುವದು ಕಾಣಿಸಬೇಕು, ಕೇಳಿಸಬೇಕು. ಇವೆಲ್ಲವೂ ಭಾಷಣಭೂಪನಿಗೆ ಬೆನ್ನು ಚಪ್ಪರಿಸಿದಂತೆ. ಆದರೆ ಇಲ್ಲೇನಿದೆ ? ಕತ್ತಲಲ್ಲಿ ಕುಳಿತು ಸಿಗರೇಟು ಎಳೆದಂತಾಗುತ್ತದೆ; ಬಾಯಿಂದ ಹೊರಬಿದ್ದ ಹೊಗೆಯೇ ಕಣ್ಣಿಗೆ ಕಾಣುವಂತಿಲ್ಲ. ಇದೆಲ್ಲವೂ ಅಲ್ಲದೆ ಇನ್ನೊಂದು ಬೇರೆ ! ಬಾಯಿಗೆ ಬಂದುದೇ ಮಂಗಳಾಷ್ಟಕವಾಗುವಂತಿಲ್ಲ ಇಲ್ಲಿ. ಮುಂಚಿತವಾಗಿ ಬರೆದಿಟ್ಟುಕೊಂಡುದನ್ನು ಓದಬೇಕು, ಸ್ವಾರಸ್ಯವಾಗಿ; ಅದೂ ಹದಿನಾಲ್ಕೋವರೆ ಮಿನಿಟುಗಳಲ್ಲಿಯೇ. ಬರೆದು ಓದುವ ಭಾಷಣಗಳಲ್ಲಿ ಎಂತಹ ದಡ್ಡರಾದರೂ ತಪ್ಪುಗಳನ್ನು ಕಡಿಮೆ ಮಾಡಬಹುದು ಎಂದೊಂದು ನಂಬಿಕೆ. ಮಾತನಾಡುವಾಗ ನಾಲಗೆ ಜಾರುವದುಂಟು ಅನೇಕರಿಗೆ. ಅನುಗಾಲವೂ ನಾಲಗೆ

ತೀವದಲ್ಲಿಯೇ ಓಡಾಡುವದೆ ಇದಕ್ಕೆ ಕಾರಣವಿದ್ದರೂ ಇರಬಹುದೇನೋ! ಅನೇಕ ಅಚಾತುರ್ಯಗಳು ಆಗುತ್ತವೆ ಅಪರೀಕ್ಷಿತವಾಗಿ. ಶಕುಂತಲೆಯ ಬಗ್ಗೆ ಸಹಾನುಭೂತಿಯಿಂದ ಹೇಳುವಾಗೊಬ್ಬ ಪುಣ್ಯಾತ್ಮರು "**ದೂರ್ವಾಸನ ಶಾಪ ದಿಂದ ಗರ್ಭವತಿಯಾಗಿದ್ದ** ಶಕುಂತಲೆಗೆ ಎಂತೆಂತಹ ಸಂಕಷ್ಟಗಳು ಬಂದೊದ ಗಿದವು, ಬಲ್ಲಿರಾ?" ಎಂದಿದ್ದರು. ಇನ್ನೊಬ್ಬರು "**ನಮ್ಮ ಕೋರಿಕೆಯ ಮೇರೆಗೆ ದಿವಂಗತರಾದ ಕೈಲಾಸಂ**ರವರ ದಿನಾಚರಣೆಗಾಗಿ ಶ್ರೀ ಬೀಚಿ ಯವರು ಬಂದುದಕ್ಕೆ ನಾವು ತುಂಬಾ ಋಣಿಗಳು" ಎಂದು ಆಭಾರ ಮನ್ನಣೆ ಮುಗಿಸಿದ್ದರು. ಇಂತಹ ಅವಾಂತರಗಳು ಬಹುಮಟ್ಟಿಗೆ ಇಲ್ಲದಾಗಬಹುದು ಬರೆದು ಓದುವ ಭಾಷಣಗಳಲ್ಲಿ. ಅಂತೂ ಹೇಗೆ ಹೇಗೋ, ರೇಡಿಯೋ ಭಾಷಣ ಎಂದರೆ ಎಂದಂತಾಯಿತು ಒಟ್ಟಾರೆ. ಗಾಳಿಗೆ ಹೋದ ಇಂತಹ ಭಾಷಣಗಳನ್ನು ಹಿಡಿದು ಮೂಡಿಸಿದ್ದೇವೆ ಇಲ್ಲಿ.

ಕೆ. ಪಿ. ಸಿ. ಸಿ. ಯ ಹಿಂದಿನ ಮತ್ತು ಇಂದಿನ ಅಧ್ಯಕ್ಷರು ಮಾಡಿರುವ ಸತ್ಕಾರ್ಯಗಳಲ್ಲಿ ಮುಖ್ಯವಾದುದೆಂದರೆ ಒಂದು ಬಾವಿಯ ಉದ್ಘಾಟನೆ. ಈ ಬಾವಿಯನ್ನು ಪಡೆದ ಪುಣ್ಯಭೂಮಿ ಅಮರಗೋಳ. ಈ ಸುಪ್ರಸಿದ್ಧ ಅಮರ ಗೋಳದ ಆ ಬದಿ ಇರುವದೇ ಧಾರವಾಡ. ಅಲ್ಲಿಯೇ ಇದೆ ಬಾನುಲಿಕೇಂದ್ರ; ಅದಕ್ಕೆ ಸರಕಾರೀ ಶಂಖವೆಂದೂ ಅನ್ನುತ್ತಾರೆ ತೀಮನಂತಹ ಶತಮೂರ್ಖರು. ಈ ಚಿಕ್ಕ ಹೊತ್ತಗೆಯಲ್ಲಿ ಪ್ರಕಟವಾಗಿರುವ ಅಷ್ಟ ಭಾಷಣಗಳೂ ಆ ಸರಕಾರೀ ಶಂಖದಿಂದ ಹೊರಬಂದ ತೀರ್ಥಗಳೇ. "ಒರೆಗಲ್ಲಿನ ಮೇಲೆ" ಮತ್ತು "ನಗೆ ಇರದ ಎಡೆ ಇಲ್ಲ" ಎಂಬೆರಡು ಭಾಷಣಮಾಲೆಗಳಲ್ಲಿ ಇವು ಗಂಟಲಿಸ ಲ್ಪಟ್ಟವು. ಈ ಭಾಷಣಗಳೆಲ್ಲವೂ ಹೇಗೆಯೋ ಇರಲಿ, ಇವುಗಳಲ್ಲಿ ಹಲವುಗಳ ಬ್ರಹ್ಮರಂತೂ ಸರ್ವೇಸಾಮಾನ್ಯರಲ್ಲ. ಬೇಂದ್ರೆಯವರೆಂದರೆ ಯಾರಿಗೆ ಗೊತ್ತಿಲ್ಲ? ಇವರ 'ಕರಿಮರಿ ನಾಯಿ'ಯು ಕಳವಾಗಿ ಇಂಗ್ಲೀಷು ಪತ್ರಿಕೆಯೊಂದರಲ್ಲಿ ಸಿಕ್ಕಿದ್ದಿತು. ಶ್ರೀರಂಗರ (ಸದ್ಯ ಆದ್ಯ ರಂಗಾಚಾರ್ಯರ) ನೆನಪು ಇನ್ನೂ ಇರಬಹುದು ಅಲ್ಲಲ್ಲಿ. ಒಂದಾನೊಂದು ಕಾಲಕ್ಕೆ ನಗೆಯ ಗುತ್ತಿಗೆಯನ್ನು ಪೂರ್ತಿ ಇವರೇ ಹೊತ್ತಿದ್ದರೆಂಬ ಅಪವಾದವೂ ಇದೆಯಂತೆ. ತಲಚೇರಿಕರರು ಓದುಗರಿಗೆ ಸುಪರಿಚಿತರು. ಬೀಚಿಯವರ ಬಗ್ಗೆ ನಾವೇನೂ ಹೇಳಬಯಸುವದಿಲ್ಲ; ಅಮರನಾದ ಅವರ ತಿಂಮನೇ ಹೇಳಲಿ. ಈ ಎಲ್ಲ ಸುಪ್ರಸಿದ್ಧ ಸಾಹಿತಿಗಳು ಬರೆದುದೆಲ್ಲವೂ ಅತ್ಯುತ್ತಮವಾಗಿಯೇ ಇರುತ್ತದೆ ಎನ್ನುವ ಹಟ ಮಾತ್ರ ಯಾರಿಗೂ ಇಲ್ಲ—ಎಂಗಿದ್ದಿತ್ತು ಬೇಂದ್ರೆ ಕೃತಿ ಅಗಲುವ ಬಟ್ಟಪಟ್ಟೆಯೂ,

ರಂಗಾಚಾರ್ಯ ವಿರಚಿತ ಹಾಲಿನ ಲೆಕ್ಕವೂ, ಬೀಚಿ ಸೃಷ್ಟಿಸುವ ಸಿಗರೇಟ ಕಥಾವಣಿಯೂ ಸಾಹಿತ್ಯವಾಗಿಯೇ ಸಾಯಬೇಕಿತ್ತು. ಕಂಟ್ರೋಲ್ ಭಾಷಣ ಗಳ ಮಾದರಿಯೂ ಒಂದು ಇರಲಿ ವಾಚಕರ ಮುಂದೆ ಎಂದು, ಈ ಸಪ್ತಋಷಿ ಗಳು ಗಾಳಿಯಲ್ಲಿ ತೂರಿದ ಅಷ್ಟಭಾಷಣಗಳನ್ನು ಹಿಡಿದು ಅಚ್ಚಿನಲ್ಲಿ ಇಳಿಸಿದ್ದೇವೆ. ಬಟ್ಟಬಯಲಿನಲ್ಲಿ ಹೂಮಾಲೆ ಹಾಕಿಕೊಂಡು ನಿಂತು ಸಭೆಯು ಖಾಲಿಯಾದರೂ ಗಟ್ಟಿಗಟ್ಟಿಯಾಗಿ ಕೂಗಿ ಗಂಟೆಗಟ್ಟಲೆ ಭಾಷಣ ಮಾಡಿದಂತಲ್ಲ ರೇಡಿಯೋ ಭಾಷಣವೆಂದರೆ, ಬಾನುಲಿಕೇಂದ್ರದ ಅಳತೆಪಟ್ಟಿ, ಔನ್ಸು ಗ್ಲಾಸು, ತಕ್ಕಡಿ ಕಲ್ಲು, ಉಷ್ಣಮಾಪಕಗಳಿಂದ ಪಾಸು ಮಾಡಿಸಿಕೊಂಡು ಬಂದಿವೆ ಇವು ಎಂಬುದನ್ನಿಷ್ಟು ವಾಚಕರು ಗಮನದಲ್ಲಿರಿಸಿಕೊಳ್ಳಬೇಕು, ದಯವಿಟ್ಟು. ಈ ಭಾಷಣಗಳನ್ನು ಮಾಡಿದ ಮಹನೀಯರಿಗೆ ಬಾನುಲಿ ಕೇಂದ್ರವು ಋಣಿಯಾಗಿದ್ದಿತು, ಇವನ್ನು ಪ್ರಕಟಿಸಲು ಅನುಮತಿ ಇತ್ತ ಬಾನುಲಿ ಕೇಂದ್ರಕ್ಕೆ ನಾವು ಉಪಕೃತರು.

ನಮ್ಮ ತಿಂಮ ಸಾಹಿತ್ಯಮಾಲೆಯ ಬಗ್ಗೆಯೂ ಒಂದೆರಡು ಮಾತುಗಳನ್ನು ಹೇಳಿಕೊಳ್ಳದಿದ್ದರೆ ಪುಟಗಳು ತುಂಬುವಂತಿಲ್ಲ. ಮೂಲೆಯಲ್ಲಿದ್ದ ನಾವು ಮಾಲೆಯನ್ನೇನೋ ಹೊರಡಿಸಿಬಿಟ್ಟೆವು ಬಡ ಕನ್ನಡಿಗರ ಮೇಲೆ ತಿಂಮನ ಭಾರವನ್ನೆಲ್ಲ ಹೇರಿ. 'ಹುಚ್ಚಪ್ಪಯ್ಯನ ತೇರು ನಿಂತಲ್ಲಿಗೇ ಸೈ' ಎಂಬಂತ ಗಾದೆ ಮಾತಿನ ನೆನಪೂ ಇದ್ದಿತು ನಮಗೆ. ಆದರೆ ಈ ಧೈರ್ಯವೂ ಇದ್ದಿತು—'ಕೈ ಹಿಡಿದ ತಿಂಮ ಸುಡುಗಾಡಿಗೆ ಹೋದರೂ ಬಿಡ' ಎಂದು. ಅಂತೂ ಇಂತೂ ಎರಡು ವರ್ಷಗಳಲ್ಲಿ ಆರು ಮುತ್ತುಗಳನ್ನು ಸಲ್ಲಿಸಿ ಮಾತಿಗೆ ನಿಲ್ಲುವ ಪುಣ್ಯವನ್ನು ಮಾಲೆ ಗಳಿಸಿಕೊಂಡಿತು, ರಸಿಕ ವಾಚಕರ ಸಹೃದಯತೆ ಯಿಂದ. ಮೂರನೆಯ ವರ್ಷದ ಭವಿಷ್ಯ ಹೇಗಿದೆಯೋ! ಸೇವೆ ತಿಂಮನದು, ಸ್ವೀಕಾರ ತಮ್ಮದು. ಮಧ್ಯೆ ನಾನಾರು?

ಬಳ್ಳಾರಿ

**—ಸಂಪಾದಕ**

# ಮಾತಿಗೆ ಮೊದಲು

---

# ಥರ್ಡಕ್ಲಾಸ ವೇಟಿಂಗ ರೂಮು

ನಗೆ ಬಲ್ಲ ಎಲ್ಲರಿಗೂ ನಮಸ್ಕಾರ—ತಿಂಮನ ಪರವಾಗಿ. ನಗೆಯಿರದ ಎಡೆಯಿಲ್ಲ ಎನ್ನುವದಕ್ಕೆ ಒಂದೇ ಒಂದು ಆಧಾರ—ನಗೆಯಿರದ ಎದೆಯೂಯಿಲ್ಲ. ಒಂದು ವೇಳೆ ನಗೆಯಿರದ ಎದೆ ನನಗೇ ಇದೆ ಎಂದು ಯಾರಾದರೂ ತಿಂಮ ನೊಟ್ಟಿಗೆ ವಾದ ಹೂಡಿದರೆ, ಅದು ನಗೆಯಿಲ್ಲದ ಎದೆ ಮಾತ್ರವೇ ಅಲ್ಲ; ನಗಿಸಿಕೊಳ್ಳುವ ಎದೆಯೂ ಅಹುದು. ಅಂತೆಯೇ ನಗೆಯಿಲ್ಲದ ಎಡೆಯಿಲ್ಲವೇ ಇಲ್ಲ. ನಾವು ನಗೆಯನ್ನು ಎಲ್ಲೆಲ್ಲಿಯೂ ಕಾಣುತ್ತಲೇ ಇರುತ್ತೇವೆ, ಕಾಣುವ ಇಚ್ಛೆ ಮಾತ್ರ ಇರಬೇಕು. ಅಷ್ಟೇ.

ಈ ಥರ್ಡಕ್ಲಾಸ ವೇಯಿಟಿಂಗ ರೂಮು ಎನ್ನುವುದು ಇದೆಯೇ ಎಲ್ಲಿ ಯಾದರೂ ಎಂಬುದೂ ಒಂದು ಪ್ರಶ್ನೆ. ಏಕೆಂದರೆ ಬಹುಕಾಲದಿಂದಲೂ ವಾಡಿಕೆಯಲ್ಲಿದ್ದುವು ಫಸ್ಟ ಎಂಡ್ ಸೆಂಕೆಡ್‌ಕ್ಲಾಸ್ ಜಂಟಲ್‌ಮನ್ಸ ವೆಯಿಟಿಂಗ ರೂಮು ಮತ್ತು ಥರ್ಡಕ್ಲಾಸ ಪ್ಯಾಸಿಂಜರ್ಸ್ ಷೆಡ್, ಒಂದು ಕಾಲದಲ್ಲಿ ಥರ್ಡ ಕ್ಲಾಸಿನವರು ಬರೀ ಪ್ಯಾಸಿಂಜರ್ಸ್ ಮಾತ್ರವೇ ಆಗಿದ್ದರು. ಆ ಮಾತು ಹಾಗಿರಲಿ, ಈ ವೆಯಿಟಿಂಗ ರೂಮಿನಲ್ಲಿ ನಗೆಗೆ ಎಡೆಯಿದೆಯೇ ಎಂದು ಪ್ರತ್ಯೇಕ ವಾಗಿ ಕೇಳಬೇಕೆ ? ಸತ್ತವರ ಮನೆಯಲ್ಲಿ ಸ್ವಾರ್ಥಿಗಳು ತಂತಮ್ಮ ಸಲುವಾಗಿ ಅಳುವಾಗಲೂ ನಗೆಗೆ ಎಡೆಯಿರುವಾಗ ಇಲ್ಲಿ ಮಾತ್ರ ನಗೆಗೆ ಅಡಿಚಣಿಯೆ ? ಸರ್ವವ್ಯಾಪಕವಾದ ತಿಂಮತಲೆಯಲ್ಲಿಯೂ ಇದೆ—ನಗಲಿಕ್ಕೆ ಮತ್ತು ನಗಿಸಿ ಕೊಳ್ಳಲಿಕ್ಕೆ. ಥರ್ಡಕ್ಲಾಸ ವೆಯಿಟಿಂಗ ರೂಮು ಎನ್ನುವುದು, ತನ್ನದೇ ಆದ ಚಿಕ್ಕ ಪ್ರಮಾಣದಲ್ಲಿ ಒಂದು ಪುಟ್ಟ ಜಗತ್ತು ಎನ್ನುವುದನ್ನು ಅರಿತವರಿಗೆ, ಇದರಲ್ಲಿ ಎಲ್ಲ ಬಗೆಯ ಮೋಜುಗಳೂ ಕಾಣಬರುತ್ತವೆ. ಯಾವುದೊಂದು ಸಂಘ, ಸಂಸ್ಥೆ, ಮಠ, ಗುಂಪುಗಳಲ್ಲಿ ಹೊಂದಿಕೊಳ್ಳಲಾರದ ಅಥವಾ ಎಲ್ಲದರಲ್ಲಿ ಹೊಂದಿ ಕೊಳ್ಳಬಲ್ಲ ನಾನಾಬಗೆಯ ಜನರು ಒಂದೇ ಬಾರಿಗೆ ಒಂದೇ ಸ್ಥಳದಲ್ಲಿ ದೊರೆ ಯುವದೆಂದರೆ ಇಲ್ಲಿಯೇ. ರಘುಪತಿ ರಾಘವ ರಾಜಾರಾಂ ಎಂದು ಕೈತಟ್ಟಿ

ಹಾಡುವ ಸಾಧುಗಳಿಂದ ಹಿಡಿದು ಪತಿತ ಪಾವನ ಪೈಸಾರಾಂ ಎಂದು ಇತರರ ಹಣದ ಚೀಲವನ್ನು ಹೊಡೆಯುವ ಪುಣ್ಯಾತ್ಮರೂ ಇಲ್ಲಿರುತ್ತಾರೆ. ಸಿನೇಮಾ, ನಾಟಕ, ನೃತ್ಯಗಳಂತೆ ಈ ವೆಯಿಟಿಂಗ ರೂಮು ಕೂಡ ರಾತ್ರಿಯಲ್ಲಿಯೇ ಹೆಚ್ಚು ಪ್ರೇಕ್ಷಣೀಯ. ಆಗಲೇ ಇದರಲ್ಲಿ ಹೆಚ್ಚು ಜೀವಕಳೆ. ಇದರ ರಸಸ್ವಾದವನ್ನೂ ಸಂಪೂರ್ಣವಾಗಿ ಸವಿಯಲು ರಾತ್ರಿಯಂತಹ ಸಮಯವು ಬೇರೊಂದಿಲ್ಲ. ಗೋಡೆಗೆ ಆತು ಒಂಟಿಗಾಲಮೇಲೆ ನಿಂತು ಗೂರಕೆ ಹೊಡೆಯುವ ಪುಣ್ಯಾತ್ಮರೂ ಕಾಣುತ್ತಾರೆ; ಮಾರ್ಫಿಯಾ ಇಂಜೆಕ್ಷನ್ ಕೊಟ್ಟು ತೊಟ್ಟಿಲಲ್ಲಿ ಹಾಕಿ ತೂಗಿದರೂ ನಿದ್ರೆ ಬಾರದಿದ್ದರೂ ಸಂಪೂರ್ಣ ಆರಡಿ ಕೈಕಾಲು ತಲೆ ಚಾಚಿ ಜಾಗೆ ಹಿಡಿದು ಮುಸುಕಿಕ್ಕಿ ಗತ್ತು ಹಿಡಿದು ನಿದ್ರೆಯ ಸೋಗು ಹಾಕುವ ಸಂಪನ್ನರೂ ಸಿಗುತ್ತಾರೆ. ಗುಂಪಿನಲ್ಲಿ ಓರ್ವನು ಆಕಳಿಸಿ ಬಾಯಿಯ ಮುಂದೆ ಚಿಟಿಕೆ ಹೊಡೆದಾಗ ನೋಡಬೇಕು, ಎದುರಿಗಿದ್ದವನ ಮುಖವನ್ನು,—ಬಾಯಿ ತೆರೆದು ತೂಕಡಿಸುತ್ತಿದ್ದವನು ಬೆಚ್ಚಿಬಿದ್ದು ಕಕ್ಕಾಬಿಕ್ಕಿ ಆಗುತ್ತಾನೆ, ತನ್ನ ಬಾಯಿ ಮುಂದೆ ಅವನೇಕೆ ಚಿಟಿಕೆ ಹೊಡೆದನೆಂದು. ವೇಯಿಟಿಂಗ್ ರೂಮಿನಲ್ಲಿ ಚರ್ಚೆಗೆ ಬಾರದ ವಿಷಯವೇ ಇಲ್ಲ ಜಗತ್ತಿನಲ್ಲಿ. ದೇವರಿಂದ ಹಿಡಿದು ದೆವ್ವದವರೆಗೂ, ಸಾಹಿತ್ಯದಿಂದ ಹಿಡಿದು ಸದಾರಮೆಯವರೆಗೂ, ಆನೆಯಿಂದ ಹಿಡಿದು ಆಮೆಯವರೆಗೂ, ಆಕಾಶದಿಂದ ಹಿಡಿದು ಅನ್ನದವರೆಗೂ ಎಲ್ಲ ವಿಷಯಗಳೂ ಬಂದು ಓಡುತ್ತವೆ. ಒಂದು ಬಾರಿ ನಾಲ್ವರ ನಡುವೆ ನಡೆದ ಒಂದು ಸಂಭಾಷಣೆಯು ಕಿವಿಗೊಟ್ಟು ಕೇಳುವಂತಿದ್ದಿತು.

"ಕಳ್ಳರ ಕಾಟವಾದರೂ ಎಷ್ಟಾಗಿದೆರೀ ನಮ್ಮೂರಲ್ಲಿ?" ಎಂದೊಬ್ಬ ಪುಣ್ಯಾತ್ಮ ಸಂಭಾಷಣೆಗೆ ಶ್ರೀಕಾರ ಹಾಕಿದ.

"ಕಳ್ಳರೆಂದರೆ ನೆನಪಾಯಿತು" — ಹಿಂದೆಯೇ ಎತ್ತಿದ ಇನ್ನೊಬ್ಬ. "ಮೊನ್ನೆ ನಮ್ಮೂರ ಮುಂದಿನ ಹನುಮಪ್ಪನ ಬೆಳ್ಳಿಯ ಮೀಸೆಯನ್ನು ಯಾವ ಪಾಪಿಷ್ಠರೋ ಕದ್ದುಬಿಟ್ಟಿದ್ದಾರೆ ನೋಡಿ-ಇದೆಂತಹ ಅನ್ಯಾಯ?"

"ಹನುಮಪ್ಪನ ಮೀಸೆಯನ್ನು ಕದ್ದವನದು ಏನು ಮಹಾಧೈರ್ಯ ಬಿಡಿ—ರಾಮದೇವರ ಗುಡಿಯಲ್ಲಿಯೇ ರಾತ್ರಿ ತೂರಿ, ಯಾರೋ ಚಾಂಡಾಲರು ದೇವರ ಹುಬ್ಬನ್ನೆ ಎಗರಿಸಿಬಿಟ್ಟಿದ್ದಾರೆ ಎಂದರೆ ನಮ್ಮೂರಲ್ಲಿ" ಎಂದು ಕುಳಿತಲ್ಲಿಯೇ ಉಗುಳಿಕೊಂಡ ಇನ್ನೊಬ್ಬ.

" ಇದರಲ್ಲಿ ಮೊದಲ ತಪ್ಪು ನಮ್ಮದೇ ನೋಡಿ. ಬೆಳ್ಳಿ, ಚಿನ್ನದ ಆಭರಣ ಏಕೆ ಕಣ್ರಿ ಬೇಕು ದೇವರಿಗೆ ? ವಸ್ತ್ರ-ವಡವೆಗಳಿಗಾಗಿ ಆಶೆಪಡಲು ದೇವರೇನು ಸ್ತ್ರೀಯೆ ? "

" ಸ್ತ್ರೀ ಎಂದರೆ ನೆನಪಾಯಿತು " ಎಂದು ವಿಷಯವನ್ನು ಡೊಂಕು ಮಾಡಿದ, ಮೊದಲು ಮಾತನಾಡಿದ ಮಹಾರಾಯ. " ನೀವು ಏನೇ ಹೇಳಿರಿ- ಸ್ತ್ರೀಯರೆನ್ನಬೇಕು, ಇಂದಿನ ಕಾಲದ ಸ್ತ್ರೀಯರಿಗೇ. ಹಳೇಕಾಲದ ಹೆಂಗಸರೇನ್ರಿ ಸ್ವಾಮಿ ! ಒಂದೊಂದು ಬಂಗಾಲಿ ಮಣದಷ್ಟು ಚಿನ್ನವನ್ನು ಕೂಲಿ ಸಹ ಕೇಳದೆ ಹೊತ್ತು ತಿರುಗುತ್ತಿದ್ದರು. ಈಗಿನವರು ಹಾಗೆಲ್ಲ ದಾಗೀನೆಗಳನ್ನು ಧರಿಸುವರೇ ? ಛೆ ! ಛೆ !! ಒಂದು ಎಳೆ ಚಿನ್ನದ ಚೈನು, ಇನ್ನೂ ಬೇಕಾದರೆ ಒಂದು ಕಳ್ಳ ಚಿನ್ನದ ಕನ್ನಡಕ."

"ಅಹುದು" ಮತ್ತೊಬ್ಬ ಮೂಗೆಳೆದ. " ಕನ್ನಡಕವೆಂದರೆ ನೆನೆಪಾಯಿತು. ಇದೇನು ಸ್ವಾಮಿ, ಕಣ್ಣಿದ್ದವರೂ ಸಹ ಕನ್ನಡಕ ಇಟ್ಟುಕೊಳ್ಳುತ್ತಾರೆ. ಈ ಕಾಲದಲ್ಲಿ."

" ಏನು ನಿಮ್ಮುಲೆ ಹಾಗಂದ್ರೆ! ಕಣ್ಣಿದ್ದವರಿಗೇ ಕನ್ನಡಕ ಬೇಕು. ಹುಟ್ಟು ಗುರುಡರು ಇಟ್ಟುಗೊಳ್ಳಬೇಕೇನು ಮತ್ತೆ ? "

"ಹಾಗಲ್ಲರೀ ಅವರ ಅಭಿಪ್ರಾಯ. ಕನ್ನಡಕ ಇಟ್ಟುಕೊಳ್ಳುವುದು ಕಿವಿಗಳಿಗೆ ಮತ್ತು ಕೊಂಚ ಮೂಗಿಗೆ ಎಂದು ಅವರ ಕಲ್ಪನೆಯಿದ್ದಂತಿದೆ."

" ಹ್ಯಾ ! ಹ್ಯಾ !! ನೀವೊಬ್ಬರೇ ಜಾಣರು ನೋಡಿ ! ಬರೀ ಕಿವಿಯಿದ್ದರೆ ಕನ್ನಡಕವನ್ನು ಧರಿಸಲು ಬರುತ್ತದೆ ಎಂದು ತಿಳಿದುಬಿಟ್ಟಿರೇನು ? ಮುಖ್ಯವಾಗಿ ತಲೆಯಿರಬೇಕು ಕಣ್ರೀ, ಕನ್ನಡಕ ಕಿವಿಹಿಂದೆ ನಿಲ್ಲುವದಕ್ಕೆ. ಅದು ಎಲ್ಲರಿಗೂ ಸಾಧ್ಯವಿಲ್ಲ. ಎಲ್ಲಿ ! ನೀವಿಟ್ಟುಕೊಳ್ಳಿ ನೋಡೋಣ."

ಅಂದರೆ ನೀವನ್ನುವುದು ನನಗೆ ತಲೆಯೇ ಇಲ್ಲವೆಂದೋ ?' ಕಂಣು ಕೆಂಪು ಮಾಡಿ ಕೈಯನ್ನೆ ಎತ್ತಿಬಿಟ್ಟು ಸಿಟ್ಟಿಗೆ ಬಂದ ಪುಣ್ಯಾತ್ಮ. ಈ ಕೈಗಳು ಬೀಳುವ ಮುನ್ನವೇ ರೈಲ್ವೆ ನಿಲ್ದಾಣದ ಮಹದ್ವಾರದಲ್ಲಿದ್ದ ಬಣ್ಣದ ಕೈಬಿದ್ದು ಗಾಡಿ " ಕೂ " ಎಂದಿತು. ಎಲ್ಲರೂ ದಬದಬ ಓಡಿದರು, ತಲೆಯ ಮಾತನ್ನು ಮರೆತು.

* * * *

ಹಂಪೆ ಜಾತ್ರೆಯ ಮುಂಚೆ ಹೊಸಪೇಟೆಯ ವೆಯಿಟಿಂಗ ರೂಮಿನಲ್ಲಿ ಸಹಸ್ರಾರು ಪ್ರಯಾಣಿಕರೊಂದಿಗೆ ಅರ್ಧ ನಿಂತೇ ನಿದ್ರಿಸುತ್ತಿದ್ದ ತಿಂಮನಿಗೆ ಒಂದು ಬಾರಿ ತಲೆ ತುರಿಸಿಕೊಳ್ಳಬೇಕಾಯಿತು. ತಲೆಯಿದ್ದವರಿಗೆ ಮಾತ್ರವೇ ತಲೆ ಕೆರೆದುಕೊಳ್ಳುವ ಪ್ರಸಂಗವು ಬರುವುದುಂಟು ಅನ್ನಿ. ನಿದ್ದೆಗಂಣಿನಲ್ಲಿ ಅರ್ಧಗಂಟೆ ಪರಪರ ಕೆರೆದ ತಿಂಮ ತಲೆಯನ್ನು. ಆಮೇಲೆ ಬಂದಿತಂತೆ ಮೆಲ್ಲನೆ ಒಂದು ದನಿ–" ಸುಮ್ಮನೆ ಮಲಗೋ ತಿಂಮ, ನನ್ನ ತಲೆಯನ್ನೇಕೆ ಕೆರೆಯುತ್ತಿ?" ಎಂದು. ದಟ್ಟವಾದ ಆ ಜನಸಂದಣಿಯಲ್ಲಿ ಅಸ್ತವ್ಯಸ್ತವಾಗಿ ಬಿದ್ದಿದ್ದ ಆ ಮಾನವ ರಾಶಿಯಲ್ಲಿ ತಿಂಮನ ಕೈಗೆ ತನ್ನ ತಲೆಯಕಿಂತಲೂ ಇನ್ನೊಬ್ಬನ ತಲೆಯೇ ಹೆಚ್ಚು ಸುಲಭವಾಗಿ ದೊರೆತಿರಬೇಕು. ಬಹುಶಃ ಆಗ ಎಲ್ಲರೂ ಬಿದ್ದು ಬಿದ್ದು ನಕ್ಕರಂತೆ. ಆಮೇಲೆ ತಿಂಮನೂ ನಕ್ಕನಂತೆ.

*        *        *        *

ಅದರ ಹೆಸರೇ ಮೂರನೇ ವರ್ಗದವರ ಕಾಯುವ ಕೋಣೆ ಎಂದ ಮೇಲೆ ಕಾದು ಕಾದು ಬೇಸತ್ತೆ ಎಂಬುದರಲ್ಲಾದರೂ ಏನರ್ಥವಿದೆ ? ಆದರೂ ಒಂದು ಸ್ವಾರಸ್ಯ. ಅಲ್ಲಿ ಬೇಸರವಾಗುವುದು ಎಷ್ಟು ಸಹಜವೋ ಅದನ್ನು ಕಳೆದು ಕೊಳ್ಳುವುದು ಅಷ್ಟೇ ಸುಲಭ. ಅಲ್ಲಿಯಿಲ್ಲಿ ಕುಳಿತು ಬೇಸತ್ತ ತಿಂಮ ಒಂದು ಬಾರಿ ಬಂದು ಗೋಡೆಗೆ ಆತು ನಿಂತನಂತೆ. ಕೂಡಲೆ ಎಲ್ಲರೂ ಅವನನ್ನು ಕಂಡು ಫಕ–ಫಕ ನಗಹತ್ತಿದರಂತೆ. ಎಲ್ಲವನ್ನೂ ಅರಿತ ತಿಂಮನಿಗೆ ಏನೂ ಅರ್ಥವಾಗಲಿಲ್ಲ. ಇವರೆಲ್ಲರೂ ನಗುವುದು ಏಕೆ ಎಂಬುದು ತಿಳಿದರೆ ನಾನು ಕೊಂಚ ನಕ್ಕೇನು ಎಂದು ಹಾತೊರೆಯುತ್ತಿದ್ದ ತಿಂಮ ಸುತ್ತಲೂ ನೋಡಿ ಮೇಲೆ—ನೋಡಿದಾಗ ಅವನ ತಲೆಯ ಮೇಲೇ ನೇತಾಡುತ್ತಿದ್ದಿತು ದೊಡ್ಡ ದೊಂದು ಬೋರ್ಡು—" ಇಲ್ಲಿ ಉಗಳಬಾರದು " ಎಂದು ಬರೆದುಕೊಂಡು. ನೇರವಾಗಿ ಅದರ ಬುಡದಲ್ಲಿಯೇ ನಿಂತಿದ್ದ ಹೆಡ್ಡ ತಿಂಮ ! ಕೂಡಲೆ ಜಾಣನಾಗಿ ಜಾಗ ಬಿಟ್ಟು ಬೇರೆ ಎಡೆ ಬಂದು ಕುಳಿತನಂತೆ. ಆಗ ನಕ್ಕವರ ನಗು ಇನ್ನೂ ಹೆಚ್ಚು ಹೆಚ್ಚು ಆಗಹತ್ತಿತು. ತಿಂಮನ ಮುಂದಿದ್ದ ಬಕೀಟಿನ ಮೇಲೆ " ಇಲ್ಲಿ ಉಗಳಿರಿ " ಎಂದಿರಬೇಕೇ ಪಾಪ !

*        *        *        *

ಗುಂಡಗಲ್ಲ ವೆಯಿಟಿಂಗ ರೂಮಿನಲ್ಲಿ ಕಾಲಾಡಿಸುತ್ತ ಕಾಲ ಕಳೆಯುತ್ತಿದ್ದ ತಿಂಮ ರೇಲ್ವೆ ಅಧಿಕಾರಿಯೊಬ್ಬರನ್ನು ಕಂಡೊಡನೆಯೇ ಓಡಿ ಬಂದು ಕೇಳಿದ ಒಂದು ಬಾರಿ.

" ಈಗ ಬಳ್ಳಾರಿಗೆ ಹೊರಡುವ ಗಾಡಿಯಿದೆ ಏನ್ರೀ " ಎಂದು.

" ಈಗಲೇ ಹೋಯಿತಲ್ಲೋ ತಿಂಮ, ಇನ್ನೆಲ್ಲಿದೆ ನಿನಗೆ ಬಳ್ಳಾರಿಯ ಗಾಡಿ ? " ಎಂದರವರು.

" ಹಾಗಾದರೆ ಬೆಂಗಳೂರು ಕಡೆಗೆ ? " ಎಂದು ಮುಖ ನೋಡಿದ.

" ಬೆಂಗಳೂರು ಗಾಡಿಗೆ ಇನ್ನು ಬಹಳ ಸಮಯವಿದೆಯೊ " ಎಂದುತ್ತರ ಬಂದಿತು.

" ಮದ್ರಾ[illegible] ? " ಎಂದು ಮುಂಗೈ ಹಿಸುಕು[illegible].

" ಮದ್ರಾಸಿನಿಂದ ಮುಂಬೈಗೂ ಇಲ್ಲ ಮುಂಬೈಯಿಂದ ಮದ್ರಾಸಿಗೂ ಇಲ್ಲ. ಸಂಜೆಯವರೆಗೂ ಯಾವ ಗಾಡಿಯೂ ಇಲ್ಲ."

" ಹಾಗಾದರೆ ಯಾವುದಾದರೂ ಮಾಲು ಗಾಡಿಯೂ ಇಲ್ಲವೇನ್ರಿ ಸಾಹೇಬರೆ ? " ತಿಂಮ ಅಂಗಲಾಚಿದ.

" ಒಂದೂ ಇಲ್ಲವೋ ತಿಂಮ."

" ಮಿಲಿಟ್ರಿ ಸ್ಪೆಷಲ್ ಕೂಡ ಇಲ್ಲವೆ ? "

" ಇಲ್ಲವೋ ತಿಂಮ."

" ಒಂದು ಟ್ರಾಲಿಯಾದರೂ ಹೋಗುತ್ತದೋ ? "

ತಿಂಮ ಪುನಃ ಕೇಳಿದ.

" ಅದೂ ಇಲ್ಲವೋ. ಏಕೋ ತಿಂಮ, ಎಲ್ಲಿ ಹೋಗಬೇಕಿತ್ತು ? " ಅಧಿಕಾರಿಗಳು ಕನಿಕರದಿಂದ ವಿಚಾರಿಸಿದರು.

" ಎಲ್ಲಿಗೂ ಇಲ್ಲ—ಈ ರೇಲ್ವೆ ಲೈನ್ ದಾಟಿ ಆ ಬದಿಗೆ ಹೋಗಬೇಕಿತ್ತು ಅಷ್ಟೆ " ಎಂದು ತಿಂಮ ಮುಂದೆ ಸಾಗಿದನಂತೆ.

*    *    *    *

ರೇಲ್ವೆ ಪ್ರವಾಸದ ಅನುಭವವಿಲ್ಲದ ಹಲವರಿಗಂತೂ ಗಾಡಿಗೆ ಹೋಗುವುದೆಂದರೆ, ಬರೀ ಗಡಿಬಿಡಿಯೋ ಗಡಿಬಿಡಿ. ಗೀತೆಯುಕಿಂತಲೂ ಹೆಚ್ಚು ಜನಪ್ರಿಯ

ವಾದ ರೇಲ್ವೆ ಗೈಡ್ ಎಂಬ ಗ್ರಂಥವಿದೆಯೆಂಬುದು ಅವರಿಗೇನು ಗೊತ್ತು ಪಾಪ! ಆರೆಂಟು ತಾಸುಗಳ ಮುನ್ನವೇ ಬಂದು ವೆಯಿಟಿಂಗ ರೂಮಿನಲ್ಲಿ ಭೂಶಯನ ಹಾಕುವ ಭೂಪರೂ ಇದ್ದಾರೆ. ಓಡಿಬಂದವನೇ ಒಬ್ಬ ಟಿಕೇಟ ಮಾಸ್ತರನನ್ನು ಕೇಳಿದನಂತೆ, "ಬೆಂಗಳೂರಿನ ಗಾಡಿಗೆ ಇನ್ನೂ ಎಷ್ಟು ಹೊತ್ತು ಇದೇ ಮಾಸ್ತರರೇ" ಎಂದು.

"ಸುಖವಾಗಿ ಮಲಗು ಮಹಾರಾಯಾ ಇನ್ನು ಎಂಟು ತಾಸಿನವರೆಗು ನಿನಗೆ ಗಾಡಿಯಿಲ್ಲ" ಎಂದು ಮಾಸ್ತರರು ಹೇಳಿದರಂತೆ. "ಸರಿ ಹಾಗಾದರೆ" ಎಂದವನೇ ಆ ಅಡ್ವಾನ್ಸ ಪ್ರಯಾಣಿಕ ಕಾಲು ಚಾಚಿ ಕಣ್ಣು ಮುಚ್ಚಿದನಂತೆ, ಬಿಮ್ಮನೆ ಮುಸುಗಿಕ್ಕಿ. ಐದೇ ನಿಮಿಷಗಳಲ್ಲಿಯೇ "ಕೂ" ಮಾಡಿ ಹೊರಟೇ ಬಿಡಬೇಕೆ ಬೆಂಗಳೂರು ಗಾಡಿ!

"ಏನು ಮಾಸ್ತರರೇ! ಮೋಸ ಮಾಡಿಬಿಟ್ಟಿರಿ?" ಎಂದು ಸಿಟ್ಟಿಗೆ ಬಂದ ಪ್ರಯಾಣಿಕ ತಡವೇ ಬಿಟ್ಟ ಮಾಸ್ತರನ್ನು. "ಬೆಂಗಳೂರ ಕಡೆ ಗಾಡಿಯೇ ಇಲ್ಲವೆಂದು ಅಂದಿರಲ್ಲ ಸ್ವಾಮಿ?" ಎಂದು ಕೆರಳಿದನಂತೆ ಅವನು. ಆಗ ಸಮಾಧಾನದಿಂದ ಉತ್ತರಿಸಿದನಂತೆ ಆ ಜಾಣ ಮಾಸ್ತರ "ಈಗ ಹೊರಟಿದುದು ನಿನ್ನಿನ ಗಾಡಿಯೋ" ಎಂದು.

*  *  *  *

ಗಾಡಿಗಾಗಿ ಕಾದು ಕುಳಿತಿರುವವರ ಹಲವು ಮಾತುಗಳು ಕೇಳುವಂತಿರತ್ತವೆ—ಕೂಡಲೇ ನಕ್ಕು ಮರೆಯುವಂತಹವೂ ಇರುತ್ತವೆ.

"ಪುಣೇದ ಗಾಡಿಯೆಷ್ಟು ಟೈಂಶೀರು ಬರುತ್ತದೆ, ಈ ಹಾವೇರಿ ಗಾಡಿಗೆ ಏನಾಗಿದ್ದಿತೋ? ಎಂದೊಬ್ಬ ಗೊಣಗಿದ. ಹಿಂದೇ ಬಂದಿತು ಸಂಜಾಯಿಷಿ. "ಜಾಣ, ಪುಣೇ ಗಾಡಿ ಜಲ್ದೀ ಬರದೇ ಏನು ಮಾಡೀತು? ಬೆನ್ನು ಗಾಳಿರೀ ಅದಕ್ಕ. ಹಾವೇರಿ ಗಾಡಿ ಹೆಂಗೆ ಬಂದೀತು ಟೈಂಶೀರು? ಅನುಗಾಲವೂ ಅದಕ್ಕೆ ಎದುರುಗಾಳಿಯೇ."

*  *  *  *

ರೈಲ್ವೆ ಪಾಸಿನ ದುರುಪಯೋಗದ ಒಂದು ಕತೆಯಂತೂ ಬಹು ಸ್ವಾರಸ್ಯವಾಗಿದೆ. ಅದಾವುದೋ ದೂರದ ಊರಿಗೆ ಭಾಷಣ ಮಾಡಲು ಹೊರಡಬೇಕಾಯಿತು ತಿಂಮ ಒಂದು ಬಾರಿ. ದೇಶವು ಸ್ವತಂತ್ರವಾದ ಮೇಲೆಯೂ ಸ್ವಂತ

ರೈಲುಗಳಲ್ಲಿ ಪ್ರಯಾಣ ಮಾಡಲು ಹಣ ತೆತ್ತು ಟಿಕೀಟು ಕೊಳ್ಳುವ ದಡ್ಡತನವೇ ಪಾಪ ! ಪಕ್ಕೆ ಮನೆ ರೈಲ್ವೆ ರಂಗರಾಯರು ಪಾಸು ದಯಪಾಲಿಸಿದರು ಪಾಪಿಷ್ಠ ತಿಂಮನಿಗೆ. ವೇಷ ಭೂಷಣಗಳಿಂದ ಅಲಂಕೃತನಾದ ತಿಂಮ ಗಾಡಿಗಾಗಿ ಬಂದು ಕುಳಿತ. ತನ್ನ ಅಕ್ಕನನ್ನು ಊರಿಗೆ ಕಳಿಸಲು ಬಂದಿದ್ದ ತಿಂಮನ ಗೆಳೆಯನೊಬ್ಬನಿಗೆ ಈ ಪಾಸಿನ ಸಮಾಚಾರವು ತಿಳಿದುದೇ ತಡ, ಅವನು ಬಂದು ತಿಂಮನಿಗೆ ಗಂಟೇಬಿದ್ದ.

" ಆ ಪಾಸು ಇಬ್ಬರಿಗೆ ಇದೆ ಅಲ್ಲೇನೋ ತಿಂಮಾ " ಎಂದು ಕಾಡ ಹತ್ತಿದ. " ನೀನಂತೂ ಹೇಗೂ ಒಬ್ಬನೇ ತಾನೇಯಿರುವಿ ? "

" ಅಹುದಯ್ಯಾ ಇಬ್ಬರಿಗಿದೆ " ಎಂದು ತಿಂಮ ತಲೆಹಾಕಿದ.

" ಹಾಗಾದರೆ, ನನ್ನ ಅಕ್ಕ ಬರುತ್ತಾಳೆ. ಅವಳನ್ನೂ ಅದೇ ಪಾಸಿನಲ್ಲಿ ದಾಟಿಸಿಬಿಡು. ಇವಳ ಸಲುವಾಗಿ ಇನ್ನೊಂದು ಟಿಕೇಟನ್ನು ಏಕೆ ಕೊಳ್ಳಬೇಕು " ಎಂದು ಕಾಡಹತ್ತಿದ ತಿಂಮನ ಗೆಳೆಯ.

ಮುಲಾಜಿಗೆ " ಹೂ " ಎಂದ ತಿಂಮ. ಗೆಳೆಯನ ಅಕ್ಕನೊಂದಿಗೆ ಗೇಟಿಗೆ ಬಂದಾಗ ಬಾಗಿಲಲ್ಲಿದ್ದ ಟಿಕೇಟು ಮಾಸ್ತರನು ಕಕ್ಕಾಬಿಕ್ಕಿ ಆಗಿದ್ದ. ತಿಂಮನ ಕೈಯಲ್ಲಿದ್ದುದು ಗಂಡ— ಹೆಂಡತಿ ಜಂಟಿಪಾಸು, ತಿಂಮನೊಟ್ಟಿಗೆ ನಿಂತುದು ಸಂಪೂರ್ಣ ವಿಧವೆ.

* * * *

ನಿದ್ರೆ ಮಾಡಿದವರೆ ಹಬ್ಬಮಾಡಿದಂತೆ ಎನ್ನುವ ಕಲಿಯುಗದ ಕುಂಭಕರ್ಣರನ್ನೂ ಕಾಣಬೇಕು ಈ ವೆಯಿಟಿಂಗ ರೂಮಿನಲ್ಲಿಯೇ. ಹೊಸಪೇಟೆ ವೆಯಿಟಿಂಗ ರೂಮಿನಲ್ಲಿ ಒಂದು ಬಾರಿ ಹೀಗಾಗಿದ್ದಿತು :

" ತಿಂಮಾ, ಹುಬ್ಬಳ್ಳಿ ಗಾಡಿ ಬರುವದಕ್ಕೆ ಐದು ನಿಮಿಷ ಮುಂಚಿತವಾಗಿಯೆ ನನ್ನನ್ನು ಎಬ್ಬಿಸುತ್ತೀಯಾ " ಎಂದು ಕೇಳಿಕೊಂಡರು ಒಬ್ಬ ರಾಯರು.

" ಎಷ್ಟು ಗಂಟೆಗೆ ಸ್ವಾಮಿ. ಆ ಗಾಡಿ ಬರುತ್ತೆ" ಎಂದ ತಿಂಮ.

" ಬರೋಬ್ಬರಿ ೧೨–೧೦ ಕ್ಕೆ ಬರುತ್ತೋ " ಎಂದರು ರಾಯರು, ತಲೆಗೆ ಮಫ್ಲರು ಬಿಗಿಯುತ್ತ.

" ಹಾಗಾದರೆ ತಾವು ಒಂದು ಕೆಲಸ ಮಾಡಿಬಿಡಿ ಸ್ವಾಮಿ. ಹನ್ನೆರಡು

ಗಂಟೆಗೆ ಸರಿಯಾಗಿ ನೀವೇ ನನ್ನನ್ನು ಎಬ್ಬಿಸಿ ಮಲಗಿಬಿಡಿ. ನಾನು ನಿಮ್ಮನ್ನು ೧೨–೫ ಕ್ಕೆ ತಪ್ಪದೆ ಎಬ್ಬಿಸುತ್ತೇನೆ" ಎಂದ ತಿಂಮ.

"ಅಲ್ಲವೊ ತಿಂಮ—ನಿನಗೆ ಹೇಗೂ ನಿದ್ರೆ ಬರುವುದಿಲ್ಲ ೧೨ ರ ವರೆಗೂ, ಅಲ್ಲದೆ ನೀನಂತೂ ಬಳ್ಳಾರಿ ಗಾಡಿಗಾಗಿ ೩ ರ ವರೆಗಂತೂ ಕಾಯಲೇ ಬೇಕು. ನನ್ನನ್ನು ಇಷ್ಟು ಎಬ್ಬಿಸಿಬಿಡೋ."

"ಆಯಿತು ಸ್ವಾಮಿ ಮಲಗಿಬಿಡಿ. ನಾನೆಲ್ಲ ಎಬ್ಬಿಸುತ್ತೇನೆ. ನೀವು ಮಾತ್ರ ಇಲ್ಲಿಯೇ ಮಲಗಿರಿ, "ಕಳ್ಳರಿದ್ದಾರೆ ಎಚ್ಚರಿಕೆ" ಎಂದು ಕಳ್ಳರಿಗೇ ಹುಷಾರಿಕೊಡುವ ಬೋರ್ಡಿನ ಬುಡದಲ್ಲಿ."

"ಸಾಕು ಬಿಡು ಮಹಾರಾಯ, ನಿನ್ನ ಪುಣ್ಯ ನಧ್ಯ. ಆದರೆ ಇನ್ನೊಂದು ಮಾತು. ನಾನು ಕೊಂಚ ಸಿಟ್ಟಿನವ. ನಿದ್ರೆಯಲ್ಲಿ...."

"ಅಂದರೆ ಉಪಕಾರಕ್ಕಾಗಿ ಎಬ್ಬಿಸಿದರೆ ಕಪಾಳಕ್ಕೇ ಕೊಡುತ್ತೀರೇನು ಮತ್ತೆ."

"ಅಲ್ಲವೋ ನೀನು ನನ್ನ ಕೈ ಹತ್ತರ ಬರಲೇಬೇಡ. ದೂರ ನಿಂತು ಕಟ್ಟಿಗೆಯಿಂದ ತಿವಿದುಬಿಡು. ಆದರೂ ಇನ್ನೊಂದು ಮಾತು ತಿಂಮಾ."

"ಎಷ್ಟು ಒಂದು ಮಾತುಗಳು ಸ್ವಾಮಿ ನಿಮ್ಮವು ? "

"ಬೇರೆ ಇನ್ನೇನು ಇಲ್ಲ ತಿಂಮ. ನಿದ್ದೆಯಲ್ಲಿ ಎಬ್ಬಿಸಿದರೆ ಕೊಂಚ ಬಡಬಡಿಸಿ, ಬೈದು ತಕರಾರುಮಾಡುವ ಅಭ್ಯಾಸವಿದೆ ನನಗೆ. ನೀನಾವುದನ್ನೂ ಲೆಕ್ಕಸಬೇಡ ತಿಳಿಯಿತೇ ? ನನ್ನನ್ನು ಎತ್ತಿ ಆ ಗಾಡಿಯಲ್ಲಿ ಹಾಕಿಬಿಡು."

"ಹಾಗೆಯೇ ಮಾಡುತ್ತೇನೆ ಮಲಗಿಬಿಡಿ" ಎಂದು ಹೇಳಿ ತಿಂಮ ಬೆಲ್ಲದ ಚಹ ಕುಡಿಯಲು ಹೊರಹೊರಟ.

ಬಳ್ಳಾರಿಯ ಗಾಡಿ ಬಂದಾಗ ಕಣ್ಣು ಉಜ್ಜುತ್ತ ಎದ್ದ ರಾಯರು ಕಂಣಿಗೆ ಬಿದ್ದ ತಿಂಮನನ್ನು ಬಯ್ಯಲು ಸುರುಮಾಡಿದರು.

"ನಿನ್ನನ್ನು ನಂಬಿಕೊಂಡು ಮಲಗಿ ನಾನೊಬ್ಬ ಹುಚ್ಚು ಮಂಗ ಆದೆನಲ್ಲೊ ತಿಂಮಾ ? ಅಷ್ಟು ಖಾತ್ರಿ ಹೇಳಿದವನು ಅದೇಕೋ ಎಬ್ಬಿಸಲಿಲ್ಲ ಹುಬ್ಬಳ್ಳಿ ಗಾಡಿಬಂದಾಗ ? "

ತಿಂಮ ಆಶ್ಚರ್ಯೋದ್ಗಾರ ತೆಗೆದ ! "ಅರೆ ! ನೀವಿಲ್ಲಿಯೇ ಇದ್ದೀರಾ ? ನಾನು ಗಾಡಿಯಲ್ಲಿ ಎತ್ತಿ ಹಾಕಿದಾಗ ಅತ್ತು ಕರೆದು ನನ್ನ ಬೆರಳು ಕಚ್ಚಿ

ನಾನು ಬಳ್ಳಾರಿ ಗಾಡಿಗೆ ಹೋಗಬೇಕು ಎಂದು ಬಡಬಡಿಸಿದವರು ನೀವಲ್ಲವೇ ಹಾಗಾದರೆ? ಯಾರನ್ನು ಹಾಕಿಬಿಟ್ಟೇನೋ ಆ ಗಾಡಿಯಲ್ಲಿ ನಾನು" ಎಂದು ರಾಯರ ಮುಖ ದುರುದುರು ನೋಡಿದಾಗ ಅಳಲಾರದೇ ರಾಯರೂ ಗಹಗಹಿಸಿ ನಕ್ಕುಬಿಟ್ಟರು.

* * * *

ಥರ್ಡಕ್ಲಾಸ ವೆಯಿಟಿಂಗ ರೂಮಿನಲ್ಲಿ ನಗೆ ಅನುಗಾಲವೂ ಇದೆ. ಜಗತ್ಪ್ರಸಿದ್ಧವಾದ ತಿಗಣೆಯೂ ಇದೆ.

— ಬೀಚಿ

# ಸೋಮಾರಿತನ ಎಂಬ ಸದ್ಗುಣ

ಸೋಮಾರಿತನ ಎಂಬ ಸದ್ಗುಣವನ್ನು ಕುರಿತು ನನಗೆ ಮಾತನಾಡಲು ಹೇಳಿದ್ದಾರೆ. ನಾನೂ ಒಪ್ಪಿಕೊಂಡಿದ್ದೇನೆ. ರೂಢಿಯಲ್ಲಿ ಸೋಮಾರಿತನ ಒಳ್ಳೆ ಗುಣವಲ್ಲ ಎಂದು ಹೇಳುತ್ತಾರೆ. ನಾನು ಅದನ್ನು ಒಳ್ಳೇ ಗುಣ ಎಂದು ಹೇಳಬೇಕು. ಸರಿ. ಜನರು ಬಯಸು ಸೋಮಾರಿಗಳಂತೆ, ನನ್ನ ಈ ಭಾಷಣವನ್ನೇ ಕೇಳದಿದ್ದರೆ ಹೇಗೆ? ಸಿದ್ಧ ಸೋಮಾರಿಗಳು ನನ್ನ ಭಾಷಣ ಕೇಳಿ, ಹೊಸದಾಗಿ ಏನು ಗಳಿಸಿಯಾರು? ಮತ್ತೂ, ಸೋಮಾರಿತನ ಗಳಿಸಿ ಬರಬೇಕಾದ ಗುಣ ಅಲ್ಲ. ಅದು ಹುಟ್ಟುಗುಣ. ಅದು ಬೀಜದಲ್ಲಿ ಇರಬೇಕು. ಅಂದರೆ ಅದು ನಾಳೆ ಸಸಿಯಾಗಿ, ಮೊಳಕೆ ಒಡದೀತು. ಇನ್ನು ಹುಟ್ಟು ಸೋಮಾರಿಗಳಲ್ಲದವರು ನನ್ನ ಈ ಭಾಷಣ ಕೇಳಿ, ಇದೊಂದು ಸದ್ಗುಣ ಎಂದೂ ಮನಗಂಡು, ಸೋಮಾರಿಗಳೇ ಆಗಿಬಿಟ್ಟರೆ ಹೇಗೆ? ಹೀಗೆ ನನ್ನ ಮನಸ್ಸು ಸೋಮಾರಿತನದಲ್ಲೇ ಹೊಯ್ದಾಡುತ್ತಿರುವಾಗ, ಮಾತಿಗಾಗಿ ನಾನು ಇಷ್ಟು ವಿಚಾರ ಮಾಡಬೇಕೆ? ಎಂಬ ವಿಚಾರ ಹೊಳೆಯಿತು. ಮಾತಿನ ಸೋಮಾರಿತನ ಕೃತಿಯ ಸೋಮಾರಿತನವಲ್ಲ. ನನ್ನ ಮಾತಿನಂತೆಯೇ ನನ್ನ ಕೃತಿಯಾಗಿದ್ದರೆ ಸೋಮಾರಿತನವೆಂಬ ಸದ್ಗುಣಕ್ಕೆ ಹಳೆಯ ಗುರುಗಳಂತೆ ನಾನು ಹದಿನೈದು ನಿಮಿಷ ಮೌನವ್ಯಾಖ್ಯಾನ ಮಾಡಬೇಕು; ತಾವು ಮೌನ ಗುರುವಿನ ಮೌನಶಿಷ್ಯರಂತೆ ಹದಿನೈದು ಮಿನಿಟುಗಳ ಕೊನೆಗೆ ಹುಂಹುಂ ಎಂದಾಗಲೀ ನಿದ್ದೆಯಲ್ಲಿ ತೂಕಡಿಸಿಯಾಗಲೀ ಸಮ್ಮತಿ ಕೊಡಬೇಕು. ನನಗೆ ಬೇರೆ ಏನು ಕೆಲಸ ಇಲ್ಲಾ. ನಾನು ಸೋಮಾರಿ; ಮಾತೆಂಬುದು ಗಾಳಿಯ ಕೂಡ ಚೆಲ್ಲಾಟ, ತಮಗೂ ಬೇರೆ ಏನೂ ಕೆಲಸವಿಲ್ಲ, ಸುಖಾಸನದಲ್ಲಿ ಕುಳಿತು ತಾವು ಬಾನುಲಿಗೆ ಕಿವಿಗೊಡುತ್ತಿದ್ದೀರಿ. ಈ ಸೋಮಾರಿತನದ

ಕ್ರೀಡೆ ನಿಷ್ಕಾಮಕರ್ಮ; ನಿಷ್ಕರ್ಮ ಎಂದರೂ ಸಲ್ಲುವದು. ಇದು ಕೆಲಸವೂ ಅಲ್ಲ, ಇದಕ್ಕೆ ಫಲವೂ ಇಲ್ಲ; ಆಟದ ಆನಂದ ಇದೆ. ನಾನು ಹೇಳುತ್ತಿದ್ದೇನೆ, ನೀವು ಕೇಳುತ್ತಿದ್ದೀರಿ, ನಿಜ. ಆದರೆ ನಾವು ಒಬ್ಬರನ್ನೊಬ್ಬರು ನೋಡುತ್ತಿಲ್ಲ. ಗೋಳಗುಮ್ಮಟದ ಆ ತುದಿಗೆ ನೀವು, ಈ ತುದಿಗೆ ನಾನು, ಸೋಮಾರಿತನದಲ್ಲಿ—ಏನೋ ಪಿಸುಗುಡುತ್ತಿದ್ದೇನೆ. ತಾವೂ ಮುನಿಸುಗುಡದೇ ಕೇಳಬೇಕು. 'ಪರಿಹಾಸ ವಿಜಲ್ಪಿತಂ ಸಖೇ ಪರಮಾರ್ಥೇನ ಗೃಹ್ಯತಾಂ ವಚನೆ' ನಗೆಯಲ್ಲಿ ಆಡಿದ್ದನ್ನು ನಿಜವೆಂದು ನಂಬಬೇಡಿ, ಎಂದು ಕಾಳಿದಾಸನ ಒಂದು ಸುಭಾಷಿತವಿದೆ. ನಿಜವೆಂದು ಹೇಳಿದ್ದನ್ನೇ 'ನಗೆಮಾತು' ಎಂದು ತಿಳಿದುಕೊಳ್ಳುವ ಈ ಕಾಲದಲ್ಲಿ ನಗೆಮಾತನ್ನು ನಿಜವೆಂದು ನಂಬಿಯಾರು ಎಂದು ತಿಳಿದುಕೊಳ್ಳುವ ಕಾರಣವಿಲ್ಲ. ಆದರೆ ಎಂಥ ನಗೆಗೇಡಾದ ಮಾತುಗಳನ್ನೇ ನಿಜವೆಂದು ನಂಬಿ ನಡೆಯುವ ಈ ಕಾಲದಲ್ಲಿ ನನ್ನ ನಗೆಮಾತನ್ನೇ ನಿಜ ಎಂದು ನಂಬಲಾರರು ಎಂದು ಹೇಗೆ ಹೇಳಬೇಕು? ನೀವೇ ಹೇಳಿ ಫಲ ಏನೇ ಬರಲಿ, ಈ ಕೆಲಸವಲ್ಲದ ಕೆಲಸವನ್ನು ನಿಷ್ಕಾಮವಾಗಿ ನೈಷ್ಕರ್ಮ್ಯ ಎಂದು ಮಾಡುತ್ತೇನೆ. ಇಷ್ಟು ಹೊತ್ತಿಗೇ ತಮಗೆ ನಿದ್ದೆ ಬಂದಿರದಿದ್ದರೆ ಇನ್ನು ಮುಂದೆ ಹೇಳಿ.

ಸೋಮಾರಿತನ ಸದ್ಗುಣವಾಗಲಾರದು, ಸದ್ಗುಣಕ್ಕೆ ಸೋಮಾರಿತನ ಎಂಬುವದು ತಪ್ಪು, ಎಂದು ಬಲ್ಲವರಾದ ತಮ್ಮೆದುರು ಮಾತಿನ ಲೀಲಾ ವಿಲಾಸದಲ್ಲಿ ನಾನು ಸೋಮಾರಿತನ ಸದ್ಗುಣ ಎಂದು ಸಾಧಿಸಬೇಕಾಗಿದೆ. ಈ ಕನರತ್ನನ ವಾದಿಯನ್ನು ಸ್ವಲ್ಪ ಲಕ್ಷ್ಯಕೊಟ್ಟು ನೋಡಿ, ನಾವು ಸದ್ಯಕ್ಕೆ ಒಪ್ಪಿಕೊಳ್ಳೋಣ, ಸೋಮಾರಿತನ ಸದ್ಗುಣ, ಎಂದು. ಅದು ನಿಜವಾದರೆ, ಕೆಲಸಿಗತನ ಕಷ್ಟವಾಗುವದು, ಅದು ಅಷ್ಟು ಒಳ್ಳೆಯ ಗುಣವೇನೂ ಅಲ್ಲ, ಎಂದು ಯಾರಿಗೂ ಮೇಲೇ ತಿಳಿಯುವಂತಿದೆ. ಅಷ್ಟೇ ಅಲ್ಲಾ, ಅದು ಶುದ್ಧ ದುರ್ಗುಣ. ಕೆಲಸಾ, ಕೆಲಸಾ, ಕೆಲಸಾ, ಮೂರೂ ಹೊತ್ತು ಕೆಲಸಾ. ಒಬ್ಬರಿಗ ಕೆಲಸಾ. ಇನ್ನೊಬ್ಬರಿಗೆ ಕಷ್ಟಾ. ಅಥವಾ ಇವರು ಮಾಡಿದ ಕಷ್ಟಾ ಇನ್ನೊಬ್ಬರಿಗೆ ಕೆಲಸಾ ಕೊಡುತ್ತದೆ ಎನ್ನುವಾ. ಇದು ಒಳ್ಳೆಯದೇನೇ? ಒಬ್ಬರ ಕೆಲಸದಿಂದಾ ಇನ್ನೊಬ್ಬರ ತಲೆ ಕೆಟ್ಟುಹೋದರೆ, ಅಭದ್ರವಾಗಿ ಬಿಟ್ಟರೆ, ಅದರಿಂದ ಏನು ಸುಖ? ಇದಕ್ಕಿಂತ ಗಡ್ಡಾ, ತಲೆ, ಬೆಳೆಸಿಕೊಂಡು

ತನ್ನ ತಲೆಯೊಳಗಿದ್ದುದನ್ನು ಇನ್ನೊಬ್ಬರ ತಲೆಯೊಳಗೆ ತುರುಕುವ ಪ್ರಯತ್ನ ಮಾಡದೇ ಋಷಿಮುನಿಗಳಂತೆ ಮೌನದಿಂದಿರುವದು ಸದ್ಗುಣವಲ್ಲದೇ ಮತ್ತೇನು ?

ಅಗೋ, ಅಲ್ಲಿ ಭಾರತದ ಭೂಪಟದಲ್ಲಿ, ಉತ್ತರದ ನೆತ್ತಿಯಲ್ಲಿ ಹಿಮಾಲಯ, ತಲೆಯೆತ್ತಿ ನಿಂತಿದೆ. ಮುಗಿಲಿಗೆ ಮುದ್ದಿಡುವ ಅದರ ಅನೇಕ ಶಿಖರಗಳಲ್ಲಿ, ಕೈಲಾಸ ಶಿಖರ ಒಂದು. ಕಣ್ಣು ಮುಚ್ಚಿಕೊಂಡು ನೋಡಿ, ಕೈಲಾಸ ಕಾಣುತ್ತದೆ. 'ಕಾಯಕವೇ ಕೈಲಾಸ' ಎಂದು ಹಿರಿಯರು ಹೇಳಿಲ್ಲವೆ ? ನಾನು ಕಣ್ಣುಮುಚ್ಚಿ ಹೇಳುವ ಕಾಯಕ ನಡೆಸಿದ್ದೇನೆ, ನೀವು ಕಣ್ಣುಮುಚ್ಚಿ ಕೇಳುವ ಕಾಯಕ ನಡೆಸಿದ್ದೀರಿ ಈ ಕಾಯಕಕ್ಕೆ ಕೈಲಾಸ ಫಲ ಇಲ್ಲಾ ? ಕಣ್ಣು ಮುಚ್ಚಿದವರೆಲ್ಲಾ ಕೈಲಾಸವಾಸಿಗಳಾದರು ಎಂದು ಹೇಳುತ್ತಾರೆ. ಅಂದಮೇಲೆ, ನಿಂತಲ್ಲೆ ಕುಳಿತಲ್ಲೆ, ಕಣ್ಣು ಮುಚ್ಚಿದರೆ ಕೈಲಾಸ ಕಾಣುವದು ಅಪರೂಪವಾಯಿತೆ ? ಆ ಕೈಲಾಸ ಶಿಖರದಲ್ಲಿ ಸೋಮಾರಿಗಳ ಒಡೆಯನೊಬ್ಬ ಕಾಮಾರಿ ಇದ್ದಾನೆ. ಮೊದಲೇ ತಣ್ಣನ್ನ ಮಂಜಿನ ದಿವ್ಯಸಂಘ ಗುರು ! ನಿರ್ಜನ ಪ್ರದೇಶ! ಅಲ್ಲಿ ಏನೂ ಸುಳಿದಾಡುತ್ತಿದ್ದರೆ, ದೇಹವಿಲ್ಲದ ಭೂತಗಳ ಸಂಚಾರವಿರಬೇಕು. ಅಂಥ ಆ ಸ್ಮಶಾನಶಾಂತಿಯಲ್ಲಿ, ಎಲ್ಲ ಕಾಮಸಂಕಲ್ಪನೆಗಳನ್ನು ಸುಟ್ಟು ಬೂದಿ ಮಾಡಿ, ಮೈಗೆ ಬಡೆದುಕೊಂಡ ಒಬ್ಬ ಮಹಾಪುರುಷ ಕುಳಿತಿದ್ದಾನೆ. ಮೈಮೇಲೆ ಚಿಂದಿಬಟ್ಟೆಯೂ ಇಲ್ಲ. ಹಾವು ಹರಿದಾಡುತ್ತಿವೆ. ಅವನ ತಲೆಯ ಮೇಲೆ ಬೆಳದಿಂಗಳಾಗಿ ಬೆಳೆಯಲಿರುವ ಬಾಲಚಂದ್ರ. ಇದು ಸಾಲದ್ದಕ್ಕೆ, ಬೇಸಿಗೆಗಾಲದಲ್ಲಿಯೂ ನೆರೆನೆರೆಯಾಗಿ, ಹರಿಯುವ ಗಂಗೆಯ ಹಿಮಂಪ ಜಲಪಾತ ! ಹಿಮದಲ್ಲಿ ಹುಟ್ಟಿ, ನಿರ್ಜನದಲ್ಲಿ ನೆಟ್ಟು, ಬೆಳುದಿಂಗಳಲ್ಲಿ ಬೆಳೆದು, ಗಂಗೆಯಲ್ಲಿ ಮುಳುಮುಳುಗಿ ಇನ್ನೂ 'ನಾನು ಇದ್ದೇನೆ, ಬಾಳಿದ್ದೇನೆ, ಬದುಕಿದ್ದೇನೆ' ಎಂಬುವ ಈ ಸತ್‌ಗುಣಕ್ಕೆ, ಸತ್ತ್ವಗುಣ ಎಂದು ಹೇಳಿಬಿಡಬಹುದು ? ಸತ್ತಂತೆ ಇರುವ ಎಲ್ಲದರಲ್ಲಿಯೂ, ಜೀವಕಳೆ ತುಂಬುವ, ಈ ಶಿವ–ಶಕ್ತಿ ಸದ್ಗುಣದ ತವರುಮನೆ! ಸೋಮಾರಿತನದ ಸಾಮ್ರಾಜ್ಯ ಪದವಿ ! ಆ ಕೈಲಾಸ ಪೀಠದಲ್ಲಿ ಕುಳಿತು, "ನೈವ ಕುರ್ವನ್, ನಕಾರಯನ್," ಮಾಡುವುದೂ ಇಲ್ಲ, ಮಾಡಿಸುವದೂ ಇಲ್ಲಾ, ಆಗುವದನ್ನು ನೋಡುತ್ತೇನೆ, — ಎನ್ನುತ್ತಿದೆ ಸೋಮಾರಿಗಳ ದೈವ.

ಪ್ರಕೃತಿಯ ಆಗುಹೋಗುಗಳಿಗೆಲ್ಲ ನಾನು ಅಧ್ಯಕ್ಷ ಎಂಬುದೇ ಅದರ ಸೂಕ್ತಿ— ಸುಭಾಷಿತ. ಸಭೆಯಲ್ಲಿ ಸೋಮಾರಿಯಂತೆ ಕುಳಿತಿರುವ ಅಧ್ಯಕ್ಷ ಒಳ್ಳೇ ಸದ್ಗುಣಿ ಎಂದು ಎಲ್ಲರೂ ಬಲ್ಲರು. ತಾವೂ ಕೂಡ ನನ್ನ ಈ ಮಾತಿನ ಆಗು ಹೋಗುಗಳ ಕಡೆಗೆ ಸೋಮಾರಿ ಅಧ್ಯಕ್ಷರಂತೆ ಕಿವಿಗೊಟ್ಟು ಕೇಳುತ್ತಿರುವಿರಷ್ಟೆ?

ಸೋಮಾರಿತನ ಸದ್ಗುಣ ಎಂದು ಹೇಳಿದರೆ ಸಾಲದು. ಕೆಲಸ ಮಾಡು ವದು ದುರ್ಗುಣ ಎಂಬುದನ್ನು ಸ್ಪಷ್ಟಪಡಿಸಲೇಬೇಕು. ಈ ಜಗತ್ತಿನಲ್ಲಿ ಸುಮ್ಮನೆ ಕೂಡುವದು ಸುಲಭವಲ್ಲಾ, ಸಾಧ್ಯವಲ್ಲಾ, ಸ್ವಾಭಾವಿಕವಲ್ಲಾ; ಶರೀರ ಯಾತ್ರೆ ನಡೆಯಬೇಕಾದರೂ ಕೆಲಸಮಾಡಲೇಬೇಕಾಗುತ್ತದೆ. ನಿದ್ದೆ ಯಲ್ಲಿಯೂ ಉಸಿರಾಟ ನಡೆಯಬೇಕು. ಕಲ್ಲಿನಂಥ ಕಣ–ಕಣದಲ್ಲಿಯೂ, ಕ್ಷಣಕ್ಷಣಕ್ಕೂ, ಅಣುಗಳ ಕುಣಿದಾಟ ನಡೆದಿದೆ, ಎಂದು ಕಂಡಿರುವ ಇಂದಿನ ದೃಷ್ಟಿಗೆ, ಸುಮ್ಮನೆ ಇರುವದು ಸಾಧ್ಯವೆ ?—ಇದ್ದೇವೆ ಎಂದು ತಿಳಿಯುವುದು. ಸಾಧ್ಯವೇ! “ ನೈವ ಕಿಂಚಿತ್ ಕರೋಮೀತಿ ಯುಕ್ತೋ ಮನ್ಯೇತ್ ತತ್ವವಿತ್ ” ಯೋಗಿಯಾದ ತತ್ವವೇತ್ತನು ತಾನೇನೂ ಮಾಡುವದಿಲ್ಲಾ ಎಂದು ಅನುಭವಿಸ ಬೇಕು. ಇದು ಚೊಕ್ಕ ಸೋಮಾರಿಯ ಲಕ್ಷಣ. ಆದರೆ ಇಂದಿನ ಜಗತ್ತು ಕಾರ್ಮಿಕರ ಕಲಹ ಕೋಲಾಹಲಗಳಿಂದ ತುಂಬಿದೆ. ಏನೂ ಮಾಡುವದಿಲ್ಲಾ ಎನ್ನುವವನಿಗೆ ಇಂದು ಇರುವ ಅಧಿಕಾರವಿಲ್ಲಾ. ಕುರುಕ್ಷೇತ್ರದ ಮೇಲಿನ ಸೈನಿಕನಂತೆ ಕೊಲ್ಲುತ್ತೇನೆ, ಸಾಯುತ್ತೇನೆ, ಕೊಲ್ಲುತ್ತೇನೆ, ಸಾಯುತ್ತೇನೆ ಎಂದು ಉಸಿರುಸಿರಿಗೆ ಜಪ ನಡೆಯಿಸಬೇಕು. ನಾವು ಹೀಗೆ ಸಾವಿನ ಗಣೆಯ ತುದಿಯ ಮೇಲೆ ಕುಣಿಯುವವರಿಗೆ, ಇರುವ ಅಧಿಕಾರ ಇದೆ. ಉಳಿದವರು ಸತ್ತರು; ಇಲ್ಲವೆ ಸಾಯುವದು ಎಂದು ತಿಳಿಯಬೇಕು. ಇನ್ನೂ ಉಳಿದವರು ಇದ್ದರೂ ಜೀವಂತ ಹೆಣವಿದ್ದಂತೆ. ಸಾವಿನ ಜಪವನ್ನೇ ಜೀವನಸೂತ್ರ ಮಾಡಿ ಕೊಂಡ ಈ ಜಗತ್ತಿನಲ್ಲಿ ಮೂರನೆಯ ವಿಶ್ವಯುದ್ಧ, ಮಹಾಯುದ್ಧ, ಹೊತ್ತಿ ಕೊಳ್ಳುವದು ಏನು ಆಶ್ಚರ್ಯ ?

ನಾನೇ ಎಲ್ಲವನ್ನು ಮಾಡುತ್ತೇನೆ, ಮಾಡಿಸುತ್ತೇನೆ, ಎಂದು ಶಾಂತಿ, ವಿಶ್ರಾಂತಿ ಇಲ್ಲದೆ, ಕೊಂಡು ಕೊನೆದಾಡುವ ಕರ್ಮವಾದದಲ್ಲಿ ಸಂಹಾರಕ ಯುದ್ಧಗಳು ಹುಟ್ಟುತ್ತವೆ. ಅದೇ ಇಂದಿನ ಜಗತ್ತಿನ ದುರ್ಗುಣ. ತಾನು ಕರ್ತೃತ್ವ

ಶಾಲಿ, ತನ್ನಿಂದಲೆ ಹಳ್ಳಿಯ, ಊರಿನ, ನಾಡಿನ, ರಾಷ್ಟ್ರದ ಎಲ್ಲ ಕರ್ಮಪ್ರಪಂಚ ಸಾಗಿದೆ. ಎಂಬ ಅಹಂವಾದಿಗಳಿಂದ ಪ್ರಪಂಚ ಗಜಬಜಿಸಿ ಹೋದದ್ದರಿಂದ ಕಲಹಕ್ಕೆ ಕರ್ಮಯೋಗದ ಸ್ವರೂಪ ಬಂದಿದೆ. ಇಂಥ ಈ ಜಗತ್ತಿನಲ್ಲಿ ಸೋಮಾರಿ ಎನಿಸಿಕೊಂಡರೂ ಅಡ್ಡಿಯಿಲ್ಲಾ, ಸುಮ್ಮನೆ ಇರುವುದು ಸದ್ಗುಣವೇ ಸರಿ. ಅದಕ್ಕೆ ಕಾಮಾರಿಯ ಕೃಪೆ ಬೇಕು ! ಜಗತ್ತಿಗೆ ಒಳ್ಳೆಯದನ್ನು ಮಾಡಲು ಬರದಿದ್ದರೆ ಕೆಟ್ಟದನ್ನಾದರೂ ಮಾಡುತ್ತೇನೆ, ಎಂಬ ದುರ್ಗುಣ ಇಂದು ಪ್ರಚಾರ ದಲ್ಲಿದೆ. ಪ್ರತಿಯೊಬ್ಬನು ತಾನು ಏನಾದರೂ ಕೆಲಸ ಮಾಡುತ್ತಿದ್ದೇನೆ, ಎಲ್ಲಿ ಯಾದರೂ ಕೆಲಸ ಮಾಡುತ್ತಿದ್ದೇನೆ, ಯಾರಿಗಾದರೂ ಕೆಲಸ ಮಾಡುತ್ತಿದ್ದೇನೆ, ಎಂದು ಸಿದ್ಧಪಡಿಸಲು, ಪ್ರಸಿದ್ಧನಾಗಲು ಧಡಪಡಿಸುತ್ತಿರುತ್ತಾನೆ. ಕೆಲವರು ಭಾಷಣ ಮಾಡುತ್ತಾರೆ, ಕೆಲವರು ಲೇಖ ಬರೆಯುತ್ತಾರೆ, ಕೆಲವರು ಛಾಪಿಸು ತ್ತಾರೆ, ಕೆಲವರು ಅದನ್ನು ಮಾರುತ್ತಾರೆ, ಕೆಲವರು ಕೊಂಡು ಓದುತ್ತಾರೆ. ಕೆಲವರು ಓದಿ ಚರ್ಚೆಮಾಡುತ್ತಾರೆ. ಚರ್ಚೆ ಹೋಗಿ ವಾದ ಆಗುತ್ತದೆ. ವಾದ ದಿಂದ ಚಳವಳಿಗೆ ಹೋಗುತ್ತದೆ, ಚಳವಳಿಗೆ ಪ್ರತಿ ಚಳವಳಿ ಹುಟ್ಟಿಕೊಳ್ಳುತ್ತದೆ· ಸಣ್ಣ ದೊಡ್ಡ ಕುರುಕ್ಷೇತ್ರಗಳಾಗುತ್ತವೆ, ಮಹಾಸಂಹಾರವಾಗುತ್ತದೆ. ಶಾಂತಿ ಸಂಧಾನಗಳ ಗರ್ಜನೆ ಆಗುತ್ತದೆ, ಆ ಸ್ಫೂರ್ತಿನ ಹಿಂದೆ ಮುಂದಿನ ಯುದ್ಧದ ಸಂಧಾನ ನಡೆಯುತ್ತದೆ. ಈ ಕರ್ಮವಾದ ಯಾವ ಸದ್ಗುಣ ಎಂಬುದನ್ನು ಇನ್ನೂ ಎಚ್ಚರ ಇದ್ದವರು ಹೇಳಲಿ.

ನನ್ನ ಈ ಸೋಮಾರಿ ಪುರಾಣ ಕೇಳಿ ನಿಮ್ಮ ಮೆದಳು ತಣ್ಣಗಾಗುತ್ತ ನಡೆದಿರಬೇಕು. ಆದರೆ ಇದು ಒಳ್ಳೇ ಸೋಮಾರಿತನವಲ್ಲಾ. ನಿಜವಾದ ಸೋಮಾರಿಯ ತಲೆಯಲ್ಲಿ ಶಿವಶಕ್ತಿ ಕುಣಿಯುತ್ತದೆ. ಕರ್ಮಕಲಹವಾದಿಗಳ ತಲೆಯಲ್ಲಿ ಶಿವನಿಲ್ಲದ ಶಕ್ತಿ, ಇಲ್ಲವೆ ಶಕ್ತಿ ಇಲ್ಲದ ಶಿವ ಎಂದರೆ ಮಹಾರುದ್ರ ಕುಣಿಯುತ್ತಾನೆ. ತಲೆಯಲ್ಲಿ ಹೊಕ್ಕ ಈ ಮಹಾ ರೌದ್ರವೇ ಭಸ್ಮಾಸುರನಂತೆ ತನ್ನನ್ನೂ ಇತರರನ್ನೂ ಭಸ್ಮ ಮಾಡುತ್ತದೆ, ಇಂದಿನ ಆಟಂಬಾಂಬಿನಂತೆ. ಏನು ಮಾಡಬೇಕೆಂದು ತಿಳಿಯದೆ ಏನಾರೆಮಾಡುವ ಕರ್ಮವಾದವೆ ದುರ್ಗುಣ. ಜ್ಞಾನಿಯ ಶಾಂತಿಗೆ ದುರ್ಗುಣವೆಂದು ಜಾಣರು ಇಂದು ಇದ್ದಾರೆ. ಅಜ್ಞಾನಿಗಳ ಕರ್ಮತಾಂಡವವನ್ನು ಭಪ್ಪರೆ ಎಂದು ಬೆನ್ನು ತಟ್ಟುವವರೂ ಇದ್ದಾರೆ.

ಹೀಗಾಗಿ ಒಂದು ಬಗೆಯಲ್ಲಿ ಜ್ಞಾನದ ಹೆಸರು ಕೆಟ್ಟರೆ, ಇನ್ನೊಂದು ಬಗೆಯಲ್ಲಿ ಕರ್ಮದ ಫಲಾ ಕೆಟ್ಟಿದೆ.

ಅಂತೆಯೇ ನಾನು ಹೇಳುತ್ತೇನೆ, ಅಣ್ಣಗಳಿರಾ, ಸದ್ಗುಣಿಗಳಂತೆ ಸೋಮಾರಿಗಳಾಗಿರಿ. ಒಳಹೊಕ್ಕು ವಿಚಾರಮಾಡಿರಿ. ವಿಚಾರಮಾಡಿ ಆಚಾರಕ್ಕೆ ಪ್ರವೃತ್ತರಾಗಿರಿ; ಅಯ್ಯೋ ನಮಗೆ ವಿಚಾರಮಾಡಲು ಬರುವದಿಲ್ಲಾ, ವಿಚಾರವೆಂದರೇ ನಮಗೆ ಬೇಜಾರು. ವಿಚಾರವೇ ಆಲಸ್ಯಲಕ್ಷಣ ಎಂದು ಒಂದಿಲ್ಲೊಂದು ರೀತಿಯಿಂದ ಪ್ರತಿಪಾದಿಸುವ ಅವಿಚಾರಿಗಳಿಂದಲೇ ಇಂದಿನ ಕರ್ಮವಾದ ದುಷ್ಕರ್ಮವಾದಕ್ಕೆ ಇಳಿದಿದೆ. "An idle brain is a satan's work-shop" ಸತ್ ವಿಚಾರಗಳಿಲ್ಲದ ತಲೆಗಳಿಂದಲೇ ಅವಿಚಾರದ ಕೃತ್ಯಗಳು ನಿರಾಯಾಸವಾಗಿ ಆಗುತ್ತವೆ. ಕೆಲವೊಂದು ಜಯಘೋಷಗಳು, ಹಸ್ತಪತ್ರಿಕೆ, ಚಳವಳಿ, ಕಾರ್ಯದ ವರದಿ, ಈ ಬಗೆಯ ಚಕ್ರದಲ್ಲಿ ಸಿಕ್ಕ, ಆಲಸಿಗಳಲ್ಲವಂತೆ ಕಾಣುವ ಕರ್ಮಾಸಕ್ತರ ಮಿದುಳಿನ ಜಾಡ್ಯದಲ್ಲಿಯೇ ಕಲಿಪುರುಷನು ತನ್ನ ಕಮ್ಮಟಹಾಕುತ್ತಾನೆ. ಅವಿಚಾರಿಗಳಾದ ಕಾರ್ಮಿಕರ ತಲೆಯೇ ಕಲಿಪುರುಷನ ಕಮ್ಮಟವಾಗುತ್ತದೆ. ಯಾವ ಕಲಿಪುರುಷನೂ ಕೆಲವು ಜಯಘೋಷ ಕಾರ್ಯಕ್ರಮಗಳಿಂದ ಜನಜಂಗುಳಿಯನ್ನು ಸೂತ್ರಗೊಂಬೆ ಆಡಿಸಿದಂತೆ ಆಡಿಸುತ್ತಾನೆ. ಇದಕ್ಕಿಂತಲೂ ವಿಚಾರಪೂರ್ವಕವಾದ ಸೋಮಾರಿತನವು ಸಾವಿರಪಾಲು ಮೇಲು !

ಇಂದಿನ ಮಾತುಗಳನ್ನು ಇನ್ನು ಸ್ವಲ್ಪದರಲ್ಲಿ ಸಂಗ್ರಹಿಸಿ ಹೇಳುತ್ತೇನೆ. ಸುವಿಚಾರ ಸಾಮರ್ಥ್ಯವೇ ಸದ್ಗುಣ! ಅಂಥ ಸುವಿಚಾರಕ್ಕೆ ತುಂಬಿದ ಶಾಂತಿ ಬೇಕು. ಅದು ಸೋಮಾರಿತನದಂತೆ ಕಂಡರೂ, ಅದು ಆಲಸ್ಯವಲ್ಲಾ, ಜಾಡ್ಯವಲ್ಲಾ. ಅದರಂತೆಯೇ ಸುವಿಚಾರದ ಶಾಂತಿ ಇಲ್ಲದೆ, ಕ್ಷೋಭಗೊಂಡು, ದಿಕ್ಕುಗೆಟ್ಟು, ಯಾವಾಗಲೂ, ಏನಾದರೂ ಮಾಡುತ್ತಿರುವದು ಭಾರೀ ಕರ್ಮಯೋಗದಂತೆ ಕಂಡರೂ, ಅದು ದುರ್ಗುಣವೇ ಸರಿ. ಸದ್ಗುಣ, ಸೋಮಾರಿತನದಂತೆ ಕಂಡರೂ ಸದ್ಗುಣವೇ ! ಯಾಕೆಂದರೆ ಅದರಲ್ಲಿ ಬಾಳಿನ ಬೀಜವಿದೆ, ಕೆಚ್ಚು ಇದೆ. ಅವಿಚಾರದ ಅಥವಾ ಕುವಿಚಾರ ಕರ್ಮಠತನವು, ವಿನಾಶದ ನಾಂದಿಯಾಗಿರುವದರಿಂದ, ಅದು ಮಹಾ ದುರ್ಗುಣ. ಸದ್ಗುಣ ಸಾಕ್ಷಾತ್-

ಕರಿಸಿಕೊಳ್ಳುವ ಸೋಮಾರಿಗಳಾಗಿರಿ. ದುರ್ಗುಣ ಪ್ರಕಟಿಸುವ ಕರ್ಮ ಕಾರರಾಗಬೇಡಿರಿ. ಕರ್ಮ ಸದ್ಗುಣ ಎನ್ನಿಸಿಕೊಳ್ಳಬೇಕಾದರೆ, ಜ್ಞಾನದಲ್ಲಿ ಮೊಳೆತಿರಬೇಕು. ಏನೋ ಕರ್ಮಮಾಡಿ ಛೀಮಾರಿಗಳಾಗುವದಕ್ಕಿಂತ ಸೋಮಾರಿಗಳಂತೆ ಕಂಡರೂ ಸದ್ಗುಣ ಸಿದ್ಧಪಡಿಸಿಕೊಳ್ಳೋಣ. ಸದ್ಗುಣದ ಸೋಮಾರಿತನ, ಅಥವಾ ಸೋಮಾರಿಗಳ ಸದ್ಗುಣ, ದೈವಗುಣ; ಬೇಕಾದ್ದು ಆಗಲಿ, ಎಂಬ ಕರ್ಮದ ಹೋರಾಟ, ಅದು ದೈತ್ಯಗುಣ, ಆದ್ದರಿಂದ ಶಿವಗುಣದ ಶಕ್ತಿಸಂಪಾದನೆ ಆಗಬೇಕಾದರೆ ಸದ್ಗುಣಿಗಳಾದ ಸೋಮಾರಿಗಳಾಗಬೇಕು. ಈ ಕಾಯಕದಲ್ಲಿ ಕಲ್ಯಾಣವೂ ಇದೆ, ಕೈಲಾಸವೂ ಇದೆ.

—ದ. ರಾ. ಬೇಂದ್ರೆ

# ಕೋಡಂಗಿತನವೆ ಲೇಸು

## ಗೆಳೆಯರೆ ಅಥವಾ—

ಸ್ಪಷ್ಟವಾಗಿ ಹೇಳಿಯೆಬಿಡುವೆ. ಮುಂಚೆಯೆ ಹೇಳಿದರೆ ಮುಂದೆ ಮನಬಿಚ್ಚಿ ಮಾತಾಡಲು ಅನುಕೂಲವಾದೀತು. ನಿಮಗೆ 'ಗೆಳೆಯರೆ' ಎಂದು ಸಂಬೋಧಿಸಿದ ಕೂಡಲೆ ನನಗೆ ವಿಚಾರ ಬಂದಿತು. ಯಾಕೆ—ಎನ್ನುವಿರಾ ? ಹೇಳುವೆ—ತಡೆಯಿರಿ—ಮೊದಲು ಬಂದ ಆ ವಿಚಾರವಾದರೂ ಯಾವುದು ಎಂಬುದನ್ನು ಹೇಳುತ್ತೇನೆ. ನಿಮಗೇನೋ ' ಗೆಳೆಯರೆ ' ಎಂದೆ. ಆದರೆ ನೀವು ನಿಜವಾಗಿಯೆ ನನ್ನ ಗೆಳೆಯರೇನು ? ಸಂಕೋಚವಿಲ್ಲದೆ ಹೇಳಿರಿ. ಒಣ ಉಪಚಾರ ನನಗೆ ಬೇಡ. ರೇಡಿಯೋ ಕೇಂದ್ರದವರಾದರೂ ನಮ್ಮನ್ನು 'ಗೆರೆಯರೆಂ'ದು ಕರೆಯುವ ಕರಾರನ್ನೂ ಹಾಕಿಲ್ಲ. ಇಲ್ಲಿ ನಾನು ಇಷ್ಟೊಂದು ಪರಿಶ್ರಮಪಟ್ಟು ತಯಾರಿಸಿದ ಭಾಷಣವನ್ನು ಈಗ ನೀವು ಕೇಳುತ್ತಿದ್ದೀರಿ—ಎಂಬುದಕ್ಕಾಗಿ ನಿಮ್ಮನ್ನು ನಾನು ' ಗೆಳೆಯರೆ ' ಎನ್ನುವುದು. ಒಂದು ವೇಳೆ ನನ್ನ ಭಾಷಣವನ್ನು ನೀವು ಕೇಳುತ್ತಿದ್ದಿಲ್ಲವೆಂದರೆ, ಇಲ್ಲವೆ ನಿಮಗೆ ಕಾರ್ಯಕ್ರಮ ಗೊತ್ತಿಲ್ಲದೆ ನನ್ನ ಮಾತು ಕೇಳಿಸಿದೊಡನೆ ನೀವು ತಟ್ಟನೆ ನಿಮ್ಮ ರೇಡಿಯೋದ ಕಿವಿಯನ್ನು ಹಿಂಡಿ ಧ್ವನಿಯನ್ನು ತಡೆದರೆ—ಆಗ ನಿಮಗೆ ನಾನು ' ಗೆಳೆಯರೆ ' ಎಂಬುದರ ಪ್ರಯೋಜನವೇನು ? ಅಂತಹ ಪ್ರಸಂಗದಲ್ಲೂ ನಾನು ಅತ್ಯಂತ ವಾತ್ಸಲ್ಯದ ದನಿಯಲ್ಲಿ "ನನ್ನ ನಚ್ಚಿನ ಮೆಚ್ಚಿನ ಹೆಚ್ಚಿನ ಗೆಳೆಯರೆ" ಎಂದು ಮುಂತಾಗಿ ಪ್ರಾರಂಭಿಸಿದರೆ "ಎಂತಹ ಠಕ್ಕ ಇವ" ಎಂದು ನೀವು ನನಗೆ ಅನ್ನಬಹುದು. ನನ್ನ ಭಾಷಣವನ್ನೆ ಕೇಳದೆ ಮುಂದೆ ಭೆಟ್ಟಿಯಾದಾಗ " ಶ್ರೀರಂಗರೆ, ತಮ್ಮದು ಅತ್ಯಂತ ಮಾರ್ಮಿಕ ಭಾಷಣ " ಎಂದರೆ ನಾನು ಕೂಡ—ಅಥವಾ, ಹೋಗಲಿ. ಭಾಷಣವನ್ನು ಕೇಳದವರ ಬಗ್ಗೆಯೆ ಭಾಷಣವನ್ನು ಪ್ರಾರಂಭಿಸುವ ಸಮಯವಿದಲ್ಲ. ಅದ್ದರಿಂ.

ಕೇಳುತ್ತಿರಬಹುದಾದ ಬಂಟರೆ, ಇನ್ನಿಷ್ಟು ಲಕ್ಷ್ಯಗೊಟ್ಟು ಕೇಳಿರಿ, ನಿಮಗಾಗಿ ನಾನು ಹೇಳುವದನ್ನು.

ನೀವು ಪಂಡಿತ ಜವಾಹರರ ಆತ್ಮಚರಿತ್ರೆಯನ್ನು ಓದಿದ್ದೀರಾ? ಇಲ್ಲವಾಗಿದ್ದರೆ 'ಇಲ್ಲ' ಎನ್ನಿರಿ; ಉಪಚಾರಕ್ಕಾಗಿ ತಲೆದೂಗಬೇಡಿರಿ, ಅದೂ ರೇಡಿಯೋದ ಮುಂದೆ ತೂಕಡಿಸುತ್ತ ಕುಳಿತಾಗ; ಯಾಕಂದರೆ ಇಂದಿನ ಕಾಲದಲ್ಲಿ ಮನುಷ್ಯನ ತಲೆಗಿಂತ ರೇಡಿಯೋದ ಬೆಲೆ ಹೆಚ್ಚು. ಇದಲ್ಲದೆ ಪಂಡಿತಜಿಯವರ ಗ್ರಂಥದಿಂದ ಒಂದು ಸಂದರ್ಭವನ್ನು ನಾನು ನಿಮಗೆ ಹೇಳುವವನಿದ್ದೇನೆ. ಪಂಡಿತ ಜವಾಹರರು ಒಂದು ಸಭೆಯಲ್ಲಿ ಮಾತನಾಡುವವರಿದ್ದರು. ರೂಢಿಯಂತೆ ಲಕ್ಷಗಟ್ಟಲೆ ಜನ ಸೇರಿದ್ದರು. ಪ್ರಾರಂಭಕ್ಕೆ ಸಭೆಯ ಸಂಚಾಲಕರು ಪಂಡಿತರ ಗುಣಗಾನವನ್ನು ನಡೆಯಿಸಿದರು. ಅದನ್ನು ಕೇಳಿ ಕೇಳಿದಂತೆ ಪಂಡಿತಜಿಯವರಿಗೆ ಒಂದು ವಿಚಾರ ಬಂದಿತಂತೆ. ತಮ್ಮ ಗುಣಗಾನವನ್ನು ಕೇಳುವಾಗ ಏನು ಮಾಡಬೇಕು? ಸಾಮಾನ್ಯವಾಗಿ—ತಲೆಯನ್ನು ಕೆಳಗೆ ಮಾಡಬೇಕು, ಇನ್ನೊಂದು ಮಾಲೆ ಕೊರಳಲ್ಲಿ ಬೀಳಲು ಎಂದು. ಪಂಡಿತರೂ ತಲೆಯನ್ನು ಕೆಳಗೆ ಮಾಡಬೇಕಂದರಂತೆ; ಮಾಲೆಗಾಗಿ ಅಲ್ಲ, ಶೀರ್ಷಾಸನದಲ್ಲಿ· ಎಂತಹ ಅದ್ಭುತ ವಿಚಾರ! ಮತ್ತು ಎಂತಹ ಯೋಗ್ಯ ವಿಚಾರ! ಆ ಗುಣಗಾನ ನಡೆದಾಗ ಪಂಡಿತರು ನಿಜವಾಗಿಯೆ ತಲೆ ಕೆಳಗೆ, ಕಾಲು ಮೇಲೆ ಮಾಡಿ ಶೀರ್ಷಾಸನದಲ್ಲಿ ನಿಂತಿದ್ದರೆ ಎಂತಹ ಸತ್ಯಮಯವಾದ ದೃಶ್ಯವಾಗುತ್ತಿತ್ತು. ಆದರೆ ಸತ್ಯದ ಮುಖವು ಗುಹೆಯಲ್ಲಿ ಮುಚ್ಚಿಡೆಯಂತೆ. ಸಭೆಯಲ್ಲಿ ಅದನ್ನು ಬಯಲಿಗೆಳೆಯುವ ಧೈರ್ಯ ಸಾಮಾನ್ಯರದಲ್ಲ. ಅಂತೂ ಪಂಡಿತರು ಧೈರ್ಯವಿಲ್ಲದ್ದಕ್ಕಾಗಿ ತಲೆಯನ್ನು ಎತ್ತಿಹಿಡಿದೇ ಕುಳಿತರು.

ಒಂದುವೇಳೆ ಪಂಡಿತ ಜವಾಹರರು ನಿಜವಾಗಿಯೆ ಸಾವಿರ ಜನರ ಸಾಕ್ಷಿಯಾಗಿ ಶೀರ್ಷಾಸನವನ್ನು ಹಾಕಿದರೆ ಜನರು ಏನೆನ್ನುತ್ತಿದ್ದರೆಂಬುದು ನನಗೆ ಗೊತ್ತಿದೆ. ಇದೇನು ಹುಡುಗಾಟ! ಎನ್ನುತ್ತಿದ್ದರು, ಇಲ್ಲವೆ ಇಂದಿನ ನನ್ನ ವಿಷಯದ ಪಾರಿಭಾಷಿಕದಲ್ಲಿ ಹೇಳುವುದಾದರೆ—'ಇದೇನು ಕೋಡಂಗಿತನ!' ಎನ್ನುತ್ತಿದ್ದರು—ಮತ್ತು ಅಸಹ್ಯಪಡುತ್ತಿದ್ದರು. ನನ್ನ ಮಾತಿಗಾಗಿ ಕಿವಿಗೊಡುತ್ತಿದ್ದ ಕಲಿಕರ್ಣರೆ, ಮನುಷ್ಯರ ಈ ದಡ್ಡತನಕ್ಕಾಗಿ ನನಗೆ ಕನಿಕರ

ಬರುತ್ತದೆ ಎಂದು—ಗಾಳಿಗುಂಟಾ ಘೋಷವಾಗಿ ಸಾರಬಯಸುತ್ತೇನೆ. ಯಾವುದಕ್ಕೆ ನೀವು ಕೋಡಂಗಿತನವೆನ್ನುವಿರೊ ಅದು ಜಗತ್ತಿನಲ್ಲಿ ನಿಜವಾದ ದೊಡ್ಡ ಮನುಷ್ಯರ ಲಕ್ಷಣವಾಗಿದೆ. ಭಾರತ ಯುದ್ಧದಲ್ಲಿ ಎರಡೂ ಕಡೆ ಅಕ್ಷೌಹಿಣಿ ಸೈನ್ಯಗಳು ಶಸ್ತ್ರಸಮೇತವಾಗಿ ಯುದ್ಧಕ್ಕೆ ಸಜ್ಜಾಗಿ ನಿಂತಿವೆ, ಯುದ್ಧದ ಕಹಳೆ ಊದಿದೆ, ಬಿಲ್ಲುಗಳಿಗೆ ಬಾಣಗಳನ್ನು ಹೂಡಿದ್ದಾರೆ, ಕಿವಿಯವರೆಗೂ ಎಳೆದಿದ್ದಾರೆ,—ಅಂತಹ ಸಮಯದಲ್ಲಿ ಕೃಷ್ಣನು ಹಾಡಲು ಪ್ರಾರಂಭಿಸಿದನು. ಒಂದಲ್ಲ, ಎರಡಲ್ಲ, ಹದಿನೆಂಟು ಅಧ್ಯಾಯಗಳಲ್ಲಿ! ಏಳು ನೂರು ಶ್ಲೋಕಗಳಲ್ಲಿ! ಬರಿಯ ಗೀತವಷ್ಟೇ ಅಲ್ಲ, ನಡುವೆ ವಿಶ್ವರೂಪದ ಕುಣಿತವೂ ಆಯಿತು! ಇದಲ್ಲವೆ ಕೋಡಂಗಿತನದ ಪರಮಾವಧಿ? ಆದರೆ ಆ ಹಾಡು **ಭಗವದ್** ಗೀತೆಯಂತೆ, ಆ ಕುಣಿತ ವಿಶ್ವರೂಪ **ದರ್ಶನ**ವಂತೆ! ನೀವು ಅದಕ್ಕೆ ಬೇಕಾದ ಹೆಸರನ್ನು ಕೊಡಬಹುದು—ಆದರೂ ಅಂತಹ ಸಂದರ್ಭದಲ್ಲಿ ಆ ವರ್ತನವು ಕೋಡಂಗಿತನವೆ ಎನ್ನಿಸುವದು.

ಕೋಡಂಗಿತನ ಎಂದು ನಾನು ಹೇಳುವಾಗ ಅದನ್ನು ತಿರಸ್ಕರಿಸುತ್ತಿದ್ದೇನೆ ಎಂದು ತಿಳಿಯಬೇಡಿರಿ, ತದ್ವಿರುದ್ಧವಾಗಿ ಅದನ್ನು ಪ್ರಶಂಸಿಸುತ್ತಿದ್ದೇನೆ. ಇಷ್ಟೇ ಅಲ್ಲ. ಮನುಷ್ಯನ ಸಾಮಾಜಿಕ ಜೀವನದಲ್ಲಿ ಕೋಡಂಗಿತನವೆ ಲೇಸು ಎಂಬುದನ್ನು ನಾನು ಸಾಧಿಸುವವನಿದ್ದೇನೆ, ಸಿದ್ಧಮಾಡಿಯೂ ತೋರಿಸುವವನಿದ್ದೇನೆ. ಒಂದು ಮಾತಿನಲ್ಲಿ ಹೇಳುವುದಾದರೆ, ಯಾವುದಕ್ಕೆ ನೀವೆಲ್ಲರೂ ಸಾಮಾನ್ಯವಾಗಿ ಕೋಡಂಗಿತನ, ಹುಡುಗಾಟ, ಎನ್ನುವಿರೊ–ಅದೊಂದು ಸದ್ಗುಣ, ಎಲ್ಲರಲ್ಲಿಯೂ ಇರಲೇಬೇಕಾದ ಗುಣ ಎಂದು ನನ್ನ ದೃಢವಾದ ಅಭಿಪ್ರಾಯವಿದೆ.

“ಬಂದಿರಿ, ಹಡುಳವಿದ್ದಿರಾ ? ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೆ ? ಕುಳ್ಳಿರಿ—ಎಂದರೆ ನೆಲ ಉರುಳಿಹೋಹುದೆ ? ಒಡನೆ ನುಡಿದರೆ ಶಿರ—ಹೊಟ್ಟೆಯೊಡೆವುದೆ ? ಕೊಡಲಿಲ್ಲದಿದ್ದರೆ, ಒಂದು ಗುಣವಿಲ್ಲದಿದ್ದರೆ ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಯ್ಯ ?” ಇದು ಬಸವೇಶ್ವರರು ನಮಗಿತ್ತ ಆಹ್ವಾನ. ಮೂಗ ಕೊಯ್ಯುವ ಹೆದರಿಕೆಯೂ ಬಹಳೇ ಮಾರ್ಮಿಕವಾಗಿದೆ. ಯಾಕೆಂದರೆ ಕಣ್ಣಿಲ್ಲದ ಕುರುಡನಾಗಿ ಜನರೆದುರು ನಿಲ್ಲಬಹುದು, ಆದರೆ ಕೊಯ್ದ ಮೂಗಿನ ಮುಖದಿಂದ ಇನ್ನೊಬ್ಬರೆದುರು ನಿಲ್ಲುವ ಧೈರ್ಯ

ಯಾವನಿಗಿದೆ ? ಬಂದವರಿಗೆ ಬಾ ಎನ್ನಬೇಕು, ನಿಂತವರಿಗೆ ಕೂಡಿರಿ ಎನ್ನಬೇಕು ಎಂದು ಸಮಾಜ ನಿಯಮ. ಆದರೆ ಅದು ಒಂದು ಗುಣವಾಗಿರಬೇಕು ಎಂದು ಬಸವಣ್ಣನವರು ಹೇಳುತ್ತಾರೆ. ಈಗ ಮನೆಯಲ್ಲಿ ಕಸ ತುಂಬಿದೆ, ವ್ಯವಸ್ಥೆ ಇಲ್ಲ, ಸಾಮಾನುಗಳು ಚೆಲ್ಲಾಪಿಲ್ಲಿಯಾಗಿ ಹರಡಿವೆ, ಆರೊ ಎಂಟೊ ಮಕ್ಕಳು ಸಪ್ತರಾಗಗಳಲ್ಲಿ ಕಿರುಚುತ್ತಿದ್ದಾರೆ. ಆಗ ಯಾರಾದರೂ ಬಂದರೆಂದು ತಿಳಿಯುವಾ. "ಬನ್ನಿರಿ, ಕುಳ್ಳಿರಿ" ಎಂದು ವಿನಯದಿಂದ ಅವರಿಗೆ ಹೇಳಬೇಕೆ ? ಹೇಳಬೇಕು ಎಂದು ಸಮಾಜದ ನಿಯಮ. ಆದರೆ ನಾನು "ಬನ್ನಿ ಆದರೆ ದಯವಿಟ್ಟು ವಾತಾವರಣ ಶಾಂತವಾದ ಮೇಲೆ ಬನ್ನಿ. ಕುಳ್ಳಿರಿ, ಕಸವನ್ನು ಅದಕ್ಕೆ ತಕ್ಕ ಉಪಕರಣದಿಂದ ತೆಗೆದ ಮೇಲೆಯೆ ಕಳ್ಳಿರಿ; ಸಾರಾಂಶ, ಈಗ ಹೋಗಿರಿ" ಎಂದು ಹೇಳಿದೆನೆಂದು ತಿಳಿಯಿರಿ. ಅಬ್ಬ ! ಇಡಿಯ ಸಮಾಜವೆ ನನ್ನ ಮೇಲೆ ಕಿಡಿಯಾಗುವುದು. ಎಂತಹ ಹುಡುಗಾಟದ ಮನುಷ್ಯನಿವ ಎನ್ನುವರು.

ಆ 'ಹುಡುಗಾಟ' ಎಂಬ ಶಬ್ದವೆ ತಪ್ಪು. ಅದು ನಿಜವಾಗಿ ಮನುಷ್ಯನಾಟ ಎನ್ನಿಸಬೇಕು. ಕೊನೆಯವರೆಗೂ 'ಹುಡುಗಾಟ' ಎಂಬುದು ನಮ್ಮ ಗುಣವಾಗಿದ್ದರೆ ನಾವು ಕೊನೆಯವರೆಗೂ ಹುಡುಗರಾಗಿಯೇ ಉಳಿಯುವೆವು, ಎಂದರೆ ಮುದುಕರಾಗುವುದಿಲ್ಲ, ಸಾಯುವುದಿಲ್ಲ, ಅಮರರಾಗುವೆವು. ಇಂದು ನಾವು ಯಾವುದನ್ನು ಕೋಡಂಗಿತನವೆಂದು ಅಪಾರ್ಥದಲ್ಲಿ ತಿಳಿಯುವೆವೊ ಅದು ನಮ್ಮ ಹುಟ್ಟುಗುಣವಾಗಿದೆ. ಹುಟ್ಟುಗುಣವನ್ನು ಬಿಟ್ಟು ಬೆಳೆದರೆ ನಮ್ಮ ಸ್ಥಿತಿ ಎಷ್ಟು ಅಪಹಾಸ್ಯವಾಗುವುದೆಂಬುದನ್ನು ತಿಳುಹಿಸಿಕೊಡುವೆ.

ಅಯರ್ಲಂಡ್ ಎಂಬ ಹೆಸರಿನ ದೇಶ ನಿಮಗೆ ಗೊತ್ತಿದೆಯೆ ? ಅಲ್ಲಿಯ ಒಂದು ಪ್ರಸಂಗಕ್ಕೆ ಸಂಬಂಧಿಸಿದ ಕತೆ ಇದು. ೧೯೨೦ ರಲ್ಲಿ ಅಯರ್ಲಂಡ ಸ್ವತಂತ್ರವಾಯಿತು. ಆಗ ಲಂಡನದಲ್ಲಿದ್ದ ಒಬ್ಬ ಐರಿಶ್ ನಾಗರಿಕನು ಅಯರ್ಲಂಡದ ರಾಜಧಾನಿಯಾದ ಡಬ್ಲಿನಕ್ಕೆ ಹೊರಟನು. ಹೋಗುವಾಗ ಲಂಡನದಲ್ಲಿ ಉತ್ತಮವಾಗಿ ಹೊಲಿಸಿದ ಒಂದು ಸೂಟನ್ನು ಎಂದರೆ ಒಂದು ಕೋಟು, ಒಂದು ಪ್ಯಾಂಟು ತೆಗೆದುಕೊಂಡು ಹೊರಟಿದ್ದನು. ಗಾಡಿ ಡಬ್ಲಿನಕ್ಕೆ ಸಮೀಪಿಸುವಾಗ ಆ ಕಂಪಾರ್ಟಮೆಂಟಿನಲ್ಲಿ ಕುಳಿತ ಕೆಲವರು ಅವನಿಗೆ ಹೇಳಿದರಂತೆ : "ಸ್ವತಂತ್ರ

ಆಯರ್ಲಂಡದಲ್ಲಿ ಪರದೇಶದಿಂದ ತರುವ ಹೊಸ ಬಟ್ಟೆಗೆ ಸುಂಕ ಬಹಳ ಇದೆ" ಎಂದು. ಆಗ ಎಲ್ಲರೂ ಕೂಡಿ ವಿಚಾರ ಮಾಡತೊಡಗಿದರು. ಈ ಸುಂಕವನ್ನು ಉಳಿಸುವುದು ಹೇಗೆ, ಎಂದು. ಗಾಡಿ ಡಬ್ಲಿನಕ್ಕೆ ತೀರ ಹತ್ತಿರ ಬಂದಿತು. ಅಷ್ಟರಲ್ಲಿ ಒಬ್ಬನಿಗೆ ಒಳ್ಳೆಯ ವಿಚಾರ ಹೊಳೆಯಿತು. ಹೊಸ ಸೂಟನ್ನು ಮೈಮೇಲೆ ಧರಿಸಿ ಮೈಮೇಲಿನ ಹಳೆಯ ಸೂಟನ್ನು ಹೊರಗೆ ಬಿಸುಟಿದರೆ ಹೇಗೆ? ಸ್ಟೇಷನ್ ತೀರ ಹತ್ತಿರ ಬಂದಿದೆ. ಗಾಡಿಯಿಂದ ಇಳಿದಕೂಡಲೇ ನಾಲ್ಕು ಹೆಜ್ಜೆ ನಡೆದು ಹಳೆ ಸೂಟನ್ನು ಹುಡುಕಿಕೊಂಡು ಹೋದರಾಯಿತು! ಎಲ್ಲರಿಗೂ ಒಪ್ಪಿಗೆಯಾಯಿತು. ಕೂಡಲೇ ನಮ್ಮ ಐರಿಶ್ ನಾಗರಿಕನು ಹೊಸ ಸೂಟದ ಗಂಟನ್ನು ತೆಗೆದುಕೊಂಡು ಗಾಡಿಯೊಳಗಿನ ಏಕಾಂತ ಸ್ಥಳಕ್ಕೆ ಓಡಿದನು. ಬಾಗಿಲನ್ನು ಮುಚ್ಚಿಕೊಂಡನು. ಸ್ಟೇಶನ್ ಬಹಳೇ ಹತ್ತಿರದಲ್ಲಿ ಬಂದಿತು. ಅವಸರವಸರವಾಗಿ ಮೈಮೇಲಿನ ಬಟ್ಟೆಗಳನ್ನು ತೆಗೆದು ಕಿಟಕಿಯೊಳಗಿಂದ ಬಿಸುಟಿದನು. ಹೊಸ ಸೂಟದ ಗಂಟನ್ನು ಬಿಚ್ಚಿದನು. ಲಂಡನದ ಸಿಂಪಿಗನು ಕೋಟನ್ನು ಸುಂದರವಾಗಿ ಹೊಲಿದಿದ್ದನು. ಅದನ್ನೆತ್ತಿದನು. ಆದರೆ ಆ ಸಿಂಪಿಗನು ಪ್ಯಾಂಟನ್ನು ಕಟ್ಟಿಕೊಡಲು ಮರೆತೇ ಬಿಟ್ಟಿದ್ದ!

ನೋಡಿದಿರಾ, ನಮ್ಮ ಐರಿಶ್ ನಾಗರಿಕನು ಯಾವ ಸ್ಥಿತಿಯಲ್ಲಿ ನಿಂತಿದ್ದಾನೆ! ಬೆಳೆಯುವಾಗ 'ಹುಡುಗಾಟ' ಎಂಬುದನ್ನು ನಮ್ಮ ಜೊತೆಗೆ ಕಟ್ಟಿಕೊಳ್ಳಲು ನಾವು ಮರೆತರೆ ನಮ್ಮ ಸ್ಥಿತಿಯೂ ಹಾಗೆಯೇ ಆಗುವುದು.

ಹುಟ್ಟಿದ ಪ್ರಾಣಿಗೆ ಬೆಳೆಯುವದು ಹೇಗೆ ಸಹಜವೋ ಹಾಗೆಯೆ ಹುಡುಗಾಟವೂ ಸಹಜ. ಒಂದು ದೃಷ್ಟಿಯಿಂದ ಬೆಳೆಯುವುದೆ ಹುಡುಗಾಟ ಎನ್ನಬಹುದು. ಹೀಗೆ ನಾನು ಹೇಳಿದರೆ ತಪ್ಪು[illegible]ರಬಹುದಾದ ತತ್ವಜ್ಞಾನಿಗಳು ನನ್ನ ಮೇಲೆ ಹರಿಹಾಯಬಹುದು. ನನಗೆ ಗೊತ್ತಿದೆ. ಆದರೂ ಬೆಳೆಯುವುದು ಒಂದು ಹುಡುಗಾಟ ಎಂದು ನಾನು ಹಟದಿಂದ ಹೇಳುತ್ತೇನೆ. ತತ್ವಜ್ಞಾನಿಯಂತೆ ವಿಚಾರ ಮಾಡತೊಡಗಿದರೆ ಇಂದಿನ ಭಾರತೀಯನು ಹುಟ್ಟುವ ಮುಂಚೆಯೇ ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕಾದೀತು. ನೋಡಿರಿ, ನಮ್ಮ ದೇಶದಲ್ಲಿ ನಾವು ಹುಟ್ಟುವುದು ಬಡವರ ಮನೆಯಲ್ಲಿ; ದೇಶದಲ್ಲಿ ಬಡತನವಿ... ಎಂಬ ಮಾತಿಗಾಗಿಯಷ್ಟೆ ನಾನು ಹೇಳುವುದಿಲ್ಲ. ಜೀವನ ಕೃಪೆಯಿಂದ ಸಿ...

ರಿಗೆ ಮಕ್ಕಳೇ ಕಡಿಮೆ. ಅಂತೂ ಹುಟ್ಟಿದ ಮೇಲೆ ತೊಡಲು ಬಟ್ಟೆ ಇಲ್ಲ, ಉಣ್ಣಲು ಸಾಕಷ್ಟು ಆಹಾರವಿಲ್ಲ; ಆದರೂ ಕೂಸು ನಗುತ್ತಲೆ ಬೆಳೆಯುವುದು. ಸಮಾಜದ ನಿಯಮದಂತೆ ಅಂತಹ ಪರಿಸ್ಥಿತಿಯಲ್ಲಿ ಗಂಡಸು ತಲೆ ಹಿಡಿದು ಕೊಂಡು ಕೂಡಬೇಕು, ಹೆಂಗಸು ಅಳಬೇಕು. ಆದರೆ ಕೂಸು ಮಾತ್ರ ವ್ಯಾಕರಣದ ದೃಷ್ಟಿಯಿಂದ ಗಂಡಸೂ ಅಲ್ಲ ಹೆಂಗಸೂ ಅಲ್ಲ. ಎಂಬುದಕ್ಕಾಗಿಯೊ ಏನೊ—ತಲೆಯನ್ನು ಹಿಡಿದುಕೊಂಡು ಕೂಡುವುದಿಲ್ಲ, ಕಣ್ಣೀರನ್ನೂ ಸುರಿಸುವುದಿಲ್ಲ. ಸ್ವಚ್ಛಂದವಾಗಿ ನಗುತ್ತ ಹರಿದಾಡುತ್ತ ಬೆಳೆಯುವುದು ತುಸು ಬೆಳೆದ ಮೇಲೆ ಆ ಕೂಸನ್ನು ಒತ್ತಾಯದಿಂದ ಶಾಲೆಯಲ್ಲಿ ಹಿಡಿದಿಡುವರು; ಇನ್ನೂ ಬೆಳೆದ ಮೇಲೆ ಹೆಂಡಿರು, ಮಕ್ಕಳು, ಸಂಸಾರ ಇವುಗಳ ಬಂಧನ; ಜೊತೆಗೆ ಯುದ್ಧಗಳು, ರೇಶನಿಂಗ, ಕಳ್ಳಪೇಟೆ, ಲಂಚ—ಮುಂತಾದವುಗಳ ಉಪಟಳ. ಇದೆಲ್ಲವನ್ನೂ ನೋಡಿದರೆ ಬೆಳೆಯುವುದರಲ್ಲಿ ಏನು ಸುಖವಿದೆ? ವಿಚಾರ ಮಾಡಿಯೆ ಜೀವನವನ್ನು ನಡೆಸುವುದಾದಲ್ಲಿ ವಿಚಾರ ಮಾಡುವ ಮಟ್ಟಿಗೆ ಕೂಡ ಜೀವಂತ ಉಳಿವ ಅಧಿಕಾರವಿಲ್ಲ.

ಹಾಗೆ ನೋಡಿದ ಮಾತ್ರಕ್ಕೆ ಹುಡುಗಾಟ ಇಲ್ಲವೆ ಕೋಡಂಗಿತನ ಅವಿಚಾರ ಎಂದರ್ಥವಲ್ಲ. ವಿಚಾರಮಾಡುವುದರಲ್ಲಿಯೆ ಹುರುಳಿಲ್ಲ ಎಂದು ನನಗೆ ಹೇಳಬೇಕಾಗಿದೆ. ವಿಚಾರವಾದಿ ರಾಷ್ಟ್ರಗಳು ಯುದ್ಧದಲ್ಲಿ ತೊಡಗುತ್ತವೆ. ಆದರೆ ಆ ರಾಷ್ಟ್ರಗಳಿಗೆ ಯಾರಾದರೂ ಹೀಗೆ ಹೇಳಿದರೆಂದು ತಿಳಿಯಿರಿ. “ಯುದ್ಧ ಮಾಡಿ ಯಾಕೆ ಹಾಳಾಗುವಿರಿ? ಗೆದ್ದರೂ ನಿಮ್ಮ ಎಷ್ಟೋ ಜನ ಸಾಯುವುದು ತಪ್ಪಿದ್ದಲ್ಲ. ಇಂದಿಲ್ಲ ನಾಳೆ ಸಾಯುವ ನಿಮ್ಮ ಜನರನ್ನು ಹೀಗೆ ಸಾಯಿಸು [illegible] ತಮ್ಮಷ್ಟಕ್ಕೆ ತಾವೇ ಸಾಯಲಿ, ಮಂದಿಯನ್ನು ಕೊಂದು ಸಾಯಿಸುವುದೇಕೆ? ನಿಮ್ಮ ಸಾಮ್ರಾಜ್ಯದಲ್ಲಿ ನೀವೇ ಕೂಡ್ರಿರಿ, ಇನ್ನೊಬ್ಬರ [illegible]ಡೋದಿಲ್ಲ. ಹಾಗೇ ನೀವು ನಿಮ್ಮ ಹಣದಿಂದ ತಯಾರಮಾಡಿದ ಬಾಂಬಿನಿಂದ ನೀವೇ ಸಾಯೋದನ್ನುಬಿಟ್ಟು ಮಂದಿಯನ್ನು ಯಾಕೆ ಕೊಲ್ಲುತ್ತೀರಿ?” ಹೀಗೆ ಯಾರಾದರೂ ಉಪದೇಶ ಮಾಡಿದರೆ ಅಂತಹವನನ್ನು ಯಾರೂ [illegible] ಅನ್ನೋದಿಲ್ಲ, ಹುಚ್ಚ ಅನ್ನುವರು, ಇಷ್ಟೆ ಅಲ್ಲ.

ಇಂದಿನ ಜಗತ್ತಿನೊಳಗೆ ಶಾಂತಿ, ಸುಖ ಕ್ಷೇಮ ಬೆಳೆಯಬೇಕಾದರೆ “ಕೋಡಂಗಿತನ” ವೆ ಅಗತ್ಯ ಎಂದು ನನ್ನ ಅಭಿಪ್ರಾಯ. ಆಟಂಬಾಂಬ ಎತ್ತಿ

ಹಿಡಿದವನ ಮುಂದೆ ಶೇಕ್ಸ್‌ಪಿಯರನ ಹಾಸ್ಯೋಕ್ತಿ ಫೈರ್ಯ ನಮ್ಮಲ್ಲಿದ್ದರೆ ಆ ಆಟಂ ಬಾಂಬು ನಾಚಿ ಆತಂಕಶಪ್ಪೋಗೇ ಓಡಿ ಲೀನ ಆಗೋದು ಖಂಡಿತ. ನನ್ನ ತಲೆಯ ಮೇಲೆ ಬಾಂಬನ್ನು ಒಗೆಯಬೇಕೆಂಬ ಮೂರ್ಖನಿಗೆ ನನ್ನ ತಲೆಯ ಮೇಲೆ ಬಾಂಬನ್ನು ಒಗೆಯಬೇಕೆಂಬ ಮೂರ್ಖನಿಗೆ ನನ್ನ ತಲೆ ಯಾವಾಗಲೂ ಮೇಲೆಯೆ ಇರಬೇಕಾಗಿಲ್ಲ ಎಂಬುದನ್ನು ತಿಳುಹಿಸಿಕೊಡೋಣ. ಎಲ್ಲ ಕಷ್ಟಗಳಿಗೆ ನಮ್ಮ "ಇಜಂ"ನೆ ರಾಮಬಾಣ ಎಂದು ಹೇಳುವ ಇಂದಿನ ಪಂಡಿತನಿಗೆ "ಆದರೂ ಕಳೆದ ಸೀತಾನ್ನ ಹುಡುಕಿ ಕೊಟ್ಟದ್ದು ಕಪಿ ಹನುಮಂತ, ರಾಮನ ಬಾಣ ಅಲ್ಲ" ಎಂದು ಹೇಳೋಣ. ಅಲ್ಲ, ತಾರುಣ್ಯದ ಭರದಲ್ಲಿಯೆ ಸವಿಯಲು ನಿಮಗೆ ಹೆದರಿಕೆ ಇಲ್ಲವೆ—ಎನ್ನಬಹುದು. ಇಲ್ಲ, ಸ್ವಾಮೀ, ಸತ್ತರೆ ತಾರುಣ್ಯದಲ್ಲಿಯೆ ಸಾಯಬೇಕು. ಹಲ್ಲು ಬೀಳುವ ಮುಂಚೆ ಸಾಯಬೇಕು, ಯಾಕೆಂದರೆ ನಗೆ ಯಿಂದ ಹಲ್ಲು ಕಿರಿದೇ ಸಾಯುವುದುತ್ತಮ ಎಂದು ನನ್ನ ಅಭಿಪ್ರಾಯ.

ಗೆಳೆಯರೆ, ನನ್ನ ಭಾಷಣ ಮುಗಿಯ ಬಂದಿದೆ. ಇನ್ನು ನನ್ನೊಡನೆ ಗೆಳೆತನದಿಂದಿರಲು ನಿಮ್ಮ ಅಡ್ಡಿ ಇಲ್ಲವಷ್ಟೆ? ಇದುವರೆಗೆ ನಾನು ಹೇಳಿದ್ದೆ ಹುಡುಗಾಟ ಎಂದು ಮಾತ್ರ ತಿಳಿಯಬೇಡಿರಿ. ಯಾಕೆಂದರೆ, ಹುಡುಗಾಟ ಕ್ಕಾಗಿ ಯಾರೂ ಹಣವನ್ನು ಕೊಡುವುದಿಲ್ಲ. ಆದೇ ಹುಡುಗಾಟದ ದೊಡ್ಡ ಸ್ತಿಕೆ. ಇಂದು ಜಗತ್ತಿನಲ್ಲಿ ನಡೆದುದೆಲ್ಲವೂ ಹಣಕ್ಕಾಗಿಯೇ. ಹಣ ಸಂಪಾ ದಿಸಬೇಕೆಂದು ರಾಷ್ಟ್ರವು ರಾಷ್ಟ್ರದ ಮೇಲೆ ಯುದ್ಧವನ್ನು ನಡೆಯಿಸುವುದು; ಹಣ ಸಂಪಾದಿಸಬೇಕೆಂದು—ಎಂದರೆ ಎಲ್ಲರೂ ಹಣ ಸಂಪಾದಿಸಬೇಕೆಂದು— ಒಂದು ರಾಜಕೀಯ ಪಕ್ಷವು ಇನ್ನೊಂದು ರಾಜಕೀಯ ಪಕ್ಷದೊಡನೆ ಚುನಾವಣೆ ಯಲ್ಲಿ ಹೋರಾಡುವುದು; ಹಣ ಸಂಪಾದಿಸಬೇಕೆಂದು ಹದಿನೈದು ವರ್ಷ ಗಳ ಶಿಕ್ಷೆಯನ್ನು [illegible] ಸಹಿಸುವನು: ಹಣ ಕ್ಕಾಗಿ [illegible] ತಗಿಯುವನು. ಅಂತು ಇಂದಿನ ನಮ್ಮ ಜೀವನ [illegible] ಜೀವನವು ಸುಖಮಯವಾಗಿಲ್ಲ [illegible] ವಿಲ್ಲ ಎಂಬುದನ್ನು ನೀವು ಒಪ್ಪಲೇಬೇಕು, [illegible] ಹುಡುಗಾಟಕ್ಕೆ ಬೆಲೆಯಿಲ್ಲ ಎಂಬುದನ್ನು ನೆನಪಿಗೆ ತಂದುಕೊಳ್ಳಬೇಕು. [illegible]

ಹುಡುಗಾಟದಿಂದಲೆ ಸುಖ ಎಂದು — ತಾನಾಗಿಯೆ ಸಿದ್ಧವಾಗುವುದಲ್ಲವೆ ? " ಅಲ್ಲ " ಎಂದರೆ ನೀವು ಕೇಳಿದ್ದೆ ಹುಡುಗಾಟ ಎನ್ನಬಹುದು ;— "ಅಹುದು" ಎಂದರೆ ನಾನು ಹೇಳಿದ್ದು ನಿಜವಾದ ಹುಡುಗಾಟ ಎಂದಂತಾಯಿತು. ಈ ಹುಡುಗಾಟ, ಎಂಬುದನ್ನು ಬಲ್ಲವರು " ಕೋಡಂಗಿತನ " ಎಂದು ಕರೆಯುತ್ತಾರೆ ಎಂದು ಹೇಳಿ ನನ್ನ ಭಾಷಣದ ಪ್ರಸಾರವನ್ನು—ಭಾಷಣವನ್ನಲ್ಲ— ಮುಗಿಸುತ್ತೇನೆ.

—ಆದ್ಯ ರಂಗಾಚಾರ್ಯ

# ಅರಣ್ಯರೋದನ

**ಅಣ್ಣಗಳಿರಾ,**

ನನ್ನ ಮಾತು ದಯವಿಟ್ಟು ಕೇಳಿರಿ. ನೀವು ಕಿವಿಗೊಟ್ಟು ಕೇಳಿದರೆ ಮಾತ್ರ ನನ್ನದು ಭಾಷಣ, ಇಲ್ಲದೆ ಇದ್ದರೆ ನನ್ನ ಮಾತು ಅರಣ್ಯರೋದನ ವಾದೀತು; ಸಾಮಾನ್ಯ ಜನರ ಅಭಿಪ್ರಾಯದಂತೆ "ಮಾತು ಕೇಳುವವರ ಮನಸ್ಸು ಹಿಡಿಯಬೇಕು, ಹೃದಯ ತಟ್ಟಬೇಕು, ಹೃದಯದ ತಂತೀ ಮಿಡಿಯ ಬೇಕು. ಇಲ್ಲದೆ ಇದ್ದರೆ ಮಾತೆಲ್ಲ ಬರಿ ಶಬ್ದ, ಶಂಖ ಊದಿದಂತೆ, ಅಡವಿ ಯಲ್ಲಿ ಅತ್ತಂತೆ, ಬಚ್ಚಲಿನಲ್ಲಿ ಹಾಡಿದಂತೆ." ನಮ್ಮಂಥ ಪ್ರೊಫೆಸರರು ಮಾತಾಡಿ ದಂತೆ, ನಮ್ಮ ವಿಠ್ಠಲಾಚಾರ್ಯರು ಪುರಾಣ ಹೇಳಿದಂತೆ ಜೀವನ ಒಂದು ಮಹಾಸಾಗರ; ನಾವೆಲ್ಲ ಏಕಾಕಿಯಾದ ನಡುಗಡ್ಡೆಗಳು; ಹೃದಯ ಹೃದಯಗಳ ನಡುವೆ ಕ್ಷಾರೋದಧಿ. ಮಾತು ಹೃದಯಗಳನ್ನು ಒಂದುಗೂಡಿಸುವ ಸೇತು. ನಾವು ಮಾತಾಡುವದು ಕೇಳುವವರ ಮನವೊಲಿಸಲು; ನಾವು ಹಾಡುವದು ಜನರ ಮನ[ಗೆ]ಲ್ಲಿಸಲು; ನಾವು ಸತ್ಯವನ್ನು ಸಾರುವದು ಜನರು ಅದನ್ನು ಸ್ವೀಕರಿಸಲೆಂದು. ನಾವು ಹಾಕುವ ವಸ್ತ್ರ—ಒಡವೆ, ಮಾಡುವ ಒನಪು— ಒಯ್ಯಾರ, ಜನರ ಕಣ್ಣು ಸೆಳೆಯಲೆಂದು. ಒಟ್ಟೇನು, ನಾವು ಮಾಡುವದೆಲ್ಲ ಪರರ ಸಲುವಾಗಿ. ಪರರ ಹೃದಯದ ಮೇಲೆ ಪರಿಣಾಮವಾಗಲೆಂದು. ಪರರ ಹೃದಯದ ಮೇಲೆ ಪರಿಣಾಮವಾಗದಿದ್ದರೆ ನಮ್ಮ ಮಾತು ಮಣ್ಣು, ಹಾಡು ಹಾಳು. ಅಳು ಅಡವಿಯ ಪಾಲು, ಸತ್ಯ ವ್ಯರ್ಥ — ಹೀಗೆ ಸಾಮಾನ್ಯರು ವಾದಿಸುವರು. ಇದು ಶುದ್ಧ ತಪ್ಪು. ಬಹಳವಾದರೆ ಅರ್ಧಮರ್ಧ ಸತ್ಯ. ಅರ್ಧ ಮರ್ಧ ಸತ್ಯ ಅರ್ಧನಾರೀ ನಟೇಶ್ವರನಂತೆ—ಹೆಣ್ಣೂ ಅಲ್ಲ, ಗಂಡೂ ಅಲ್ಲ. ಈ ಅರ್ಧಮರ್ಧ ಸತ್ಯದ ಅಡಿಪಾಯದ ಮೇಲೆ ಅರಣ್ಯರೋದನ ಹುಚ್ಚರ ಲಕ್ಷಣ

ಎಂಬ ಸಿದ್ಧಾಂತ ಸ್ಥಾಪಿಸಲ್ಪಟ್ಟಿದೆ. ಜನರ ಮನ ಮುಟ್ಟದಿದ್ದರೆ ಮಾಡಿದ್ದೆಲ್ಲ ಹೆಣ ಸಿಂಗರಿಸಿದಂತೆ. ಮರುಭೂಮಿಯಲ್ಲಿ ಬೀಜ ಬಿತ್ತಿದಂತೆ, ನಾಯಿಯ ಬಾಲದ ಡೊಂಕು ತಿದ್ದಿದಂತೆ. ಕಿವುಡರ ಕಿವಿಯಲ್ಲಿ ಕಿವಿಮಾತು ಉಸುರಿದಂತೆ, ಕುರುಡರ ಕಣ್ಣಮುಂದೆ ಕನ್ನಡಿ ಹಿಡಿದಂತೆ, ಅರಣ್ಯರೋದನ ಮಾಡಿದಂತೆ ! ಒಟ್ಟೀನು ಅರಣ್ಯರೋದನ ಮೂರ್ಖ ಪ್ರಯತ್ನ, ವ್ಯರ್ಥ ವ್ಯವಹಾರ, ಹುಚ್ಚರ ಲಕ್ಷಣ. ಅರಣ್ಯರೋದಕರು ಅರಣ್ಯಪಂಡಿತರು.

ಅಣ್ಣಗಳಿರಾ, ಈ ವಿಚಾರಸರಣಿ ತಪ್ಪು. ಯಾಕಂದರೆ ಅರಣ್ಯರೋದನ ಮೂರ್ಖ ಪ್ರಯತ್ನವಲ್ಲ, ಪ್ರಗತಿಯ ಮೈಲುಗಲ್ಲು, ಕ್ರಾಂತಿಯ ಬೇರು, ಶಾಂತಿಯ ಮೂಲ. ಅರಣ್ಯರೋದನ ಹುಚ್ಚರ ಲಕ್ಷಣವಲ್ಲ. ರೋದನ ಮನುಷ್ಯನ ಲಕ್ಷಣ; ಅರಣ್ಯರೋದನ ಮಹಾತ್ಮರ ಲಕ್ಷಣ. ಅರಣ್ಯರೋದಕರು ಅರಣ್ಯಪಂಡಿತರಲ್ಲ. ಕ್ರಿಸ್ತನಿಂದ ಗಾಂಧಿಯವರವರೆಗೆ ಎಲ್ಲರೂ ಅರಣ್ಯರೋದಕರೇ! ನಾವು ಮಾಡುವದೆಲ್ಲ ಪರರಿಗಾಗಿ ಅನ್ನುವ ಸಿದ್ಧಾಂತವೇ ಬುಡವಿಲ್ಲದ್ದು. ದುಃಖ ತುಂಬಿಬಂದಾಗ "ಅಯ್ಯೋ, ಕೇಳಲಿಕ್ಕೆ ಯಾರೂ ಇಲ್ಲವಲ್ಲ" ಎಂದು ಜುಟ್ಟಹಿಡಿದು ಜನಗಳನ್ನು ಕೂಡಿಸಿ ಯಾರೂ ಅಳುವದಿಲ್ಲ. ನಾವು ಅಳುವದು ಜನರು ಕೇಳಲಿ ಎಂದಲ್ಲ; ನಮ್ಮ ಎದೆಯ ಭಾರ ಇಳಿಯಲಿ ಎಂದು. ನಾವು ಮಾಡುವವೆಲ್ಲ ನಮಗಾಗಿ, ನಮ್ಮ ಅಂತರಾತ್ಮನ ಸಂತೋಷಕ್ಕಾಗಿ, ನಮ್ಮ ವ್ಯಕ್ತಿತ್ವದ ವಿಕಾಸಕ್ಕಾಗಿ. ನಾವು ಹಾಡುವದು ನಮ್ಮ ಆನಂದವನ್ನು ಹೊರಹೊಮ್ಮಿಸಲು, ನಾವು ಮಾತಾಡುವದು ನಮ್ಮ ವಿಚಾರಗಳನ್ನು ಶಬ್ದದ ಬಲೆಯಲ್ಲಿ ಹಿಡಿಯುಲು, ನಾವು ಚಿತ್ರ ಬರೆಯುವದು ನಮ್ಮ ಒಳಗಣ್ಣು ಕಂಡ ಸೌಂದರ್ಯ ಬಾಹ್ಯಜಗತ್ತಿನ ಬಣ್ಣಬಣ್ಣಗಳಲ್ಲಿ ರೂಪಿಸಲು, ನಾವು ಸತ್ಯವನ್ನು ಸಾರುವದು ಅಂತರಾತ್ಮನ ಸೇವೆ ಎಂದು. ಜನರು ನಮ್ಮ ಅಳು ಕೇಳಿ ಮರುಗಬಹುದು. ಹಾಡು ಕೇಳಿ ನಲಿಯಬಹುದು. ಚಿತ್ರ ನೋಡಿ ಹಿಗ್ಗಬಹುದು. ಕವನ ಕೇಳಿ ಮೆಚ್ಚಬಹುದು ಸತ್ಯವನ್ನು ಅಂಗೀಕರಿಸಬಹುದು. ಆದರೆ ಅವರ ಮೆಚ್ಚುಗೆಗಾಗಿ ನಾವು ಯಾವುದನ್ನೂ ಮಾಡುವದಿಲ್ಲ. ಆದ್ದರಿಂದ ಜನರು ಕೇಳಿದರೆ, ಹೊಗಳಿದರೆ ಸಾ[illegible]ಕ, ಇಲ್ಲವೆ ಇದ್ದರೆ ನಿರರ್ಥಕ ಎಂಬುದು ತಪ್ಪು. ಜನರ ಮೆಚ್ಚುಗೆ ಗೌ[illegible]. ಜನರ ಮನದ

ಮೇಲಿನ ಪರಿಣಾಮ ಸತ್ಯದ ಒರೆಗಲ್ಲಾಗಲಾರದು. ಸತ್ಯನಾರಾಯಣ ನಿಲ್ಲುವದು ಜನತಾಜನಾರ್ದನನಂತೆ ಮತಗಳ ಪೆಟ್ಟಿಗೆಗಳ ಮೇಲೆ ಅಲ್ಲ; ಮತಗಳ ಪೆಟ್ಟಿಗೆ ಮೆಟ್ಟಿ ಹತ್ತು ಅಂಗುಲ ಮೇಲೆ. ಸೂರ್ಯನು ಪಶ್ಚಿಮದಲ್ಲಿ ಹುಟ್ಟುವನೆಂದು ಲಕ್ಷಾವಧಿ ಜನ ಮತಕೊಟ್ಟರೂ ಸೂರ್ಯ ಪಶ್ಚಿಮದಲ್ಲಿ ಹುಟ್ಟಲಾರ. ವಿರುದ್ಧ ಬಹುಮತ ಸರಕಾರ ಉರುಳಿಸಬಹುದು. ಸತ್ಯವನ್ನು ಉರುಳಿಸಲಾರದು. ಸಾವಿರಾರು ಕುರುಡರಿಗೆ ಕಾಣುವದಿಲ್ಲೆಂದು ಚಿತ್ರದ ಸೌಂದರ್ಯ ಸುಳ್ಳಾಗಲಾರದು, ಸಾವಿರಾರು ಅರಸಿಕರಿಗೆ ಸೇರುವದಿಲ್ಲೆಂದು ಪದ್ಯ ಗದ್ಯವಾಗಲಾರದು, ಹುಂಬ ಸಮಾಜಕ್ಕೆ ಸಮಾಜವೇ ತಿರಸ್ಕರಿಸಿದರೆ ಸತ್ಯ ಅಸತ್ಯನಾಗಲಾರದು. ಕಾಣುವದಕ್ಕೆ ಕಣ್ಣಷ್ಟೇ ಸಾಲದು, ಕಿವಿಯಷ್ಟೇ ಸಾಲದು, ತಿಳಿಯುವದಕ್ಕೆ ಬುದ್ಧಿಯಷ್ಟೇ ಸಾಲದು—ಕಾಣಲು, ಕೇಳಲು, ತಿಳಿಯಲು ಮನಸ್ಸುಬೇಕು. ರಸಿಕತೆಬೇಕು, ಹೃದಯಬೇಕು. ಈ ಮನಸ್ಸು, ರಸಿಕತೆ, ಹೃದಯ ಬಹು ಜನರಲ್ಲಿ ಇರುವದಿಲ್ಲ. ಅಂತೆಯೇ ಎಂಥ ಸತ್ಯ, ಎಂಥ ಸೌಂದರ್ಯ ಇದ್ದರೂ ಅವರಿಗೆ ಹಿಡಿಸುವದಿಲ್ಲ. ಬಹು ಜನರಿಗೆ ಹಿಡಿಯುವದಿಲ್ಲವೆಂದು ಕವಿಗಳು ಋಷಿಗಳು ತಮ್ಮ ಕರ್ತವ್ಯ ಬಿಡಲಿಕ್ಕೆ ಬಂದೀತೇ? ಊದುವ ಶಂಖ ಊದಲೇ ಬೇಕು. ತಾನು ಕಂಡ ಸತ್ಯ ನುಡಿಯಲೇಬೇಕು. ಕೇಳುವವರಿಲ್ಲೆಂದು ಹೇಳುವದನ್ನು ಬಿಡಲಿಕ್ಕೆ ಬಂದೀತೇ? ವಿದ್ಯಾರ್ಥಿಗಳು ತೂಕಡಿಸಿದರೂ, ಚೀರಾಡಿದರೂ ಪ್ರೊಫೆಸರರ ಭಾಷಣ ನಡೆಯಲೇಬೇಕು. ಶ್ರೋತೃಗಳು ಹರಟೆ ಕೊಚ್ಚುತ್ತಿದ್ದರೂ, ಬತ್ತಿ ಮಾಡುವದರಲ್ಲಿ [illegible] ಸಿಂಹ [illegible] ಗರ್ಜಿಸುವ [illegible] ಮುಂದೆ ಸಾಗುವದು ಅರಣ್ಯರೋದನವಲ್ಲ— ಕರ್ತವ್ಯ ತಪ್ಪಲ್ಲ. Ibsen ಹೇಳುವಂತೆ "The strongest man is he who stands most alone ಏಕಾಂಗಿಯಾಗಿ ನಿಲ್ಲುವ ಶಕ್ತಿಯಿದ್ದವನೇ ವೀರ" ಅರಣ್ಯರೋದನದ ಇಂಥ ವೀರರು ಅಡವಿಯಲ್ಲಿ ಅಳುವ ಅಳುಬುರುಕರಲ್ಲ.

[illegible] ಈ ಅಳುಬುರುಕರ [illegible] ಅರಣ್ಯರೋದನ [illegible] ಬೇರೆ [illegible]ವಲ್ಲ. "ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು" ಎಂದು ಲೋಕಮಾನ್ಯ ಟಿಳಕರು ಹೇಳಿದರೆ "ಅಳುವದು ನನ್ನ ವಿಶಿಷ್ಟ ಹಕ್ಕು" ಎಂದು ನಾನು ಹೇಳುತ್ತೇನೆ,

ಯಾಕಂದರೆ ಅಳುವ ಹಕ್ಕು ಮಹತ್ವದ್ದು ; ಅಳುವ ಹಕ್ಕು ಅಷ್ಟೇ ಮಹತ್ವದ್ದು. ನಾವು ಅಳುತ್ತಾ ಹುಟ್ಟುತ್ತೇವೆ. ಅಳುತ್ತಾ ಬಾಳುತ್ತೇವೆ, ಅಳು ನುಂಗಿ ತೆರಳುತ್ತೇವೆ ; ಹಿಂದುಳಿದ ಬಂಧು ಬಾಂಧವರು ಅಳುತ್ತಾರೆ. ಅಳು ಬರದಿದ್ದರೆ, ಬಾಡಗಿಯವರನ್ನು ಹಚ್ಚಿ ಅಳಿಸುತ್ತಾರೆ. ಆಂಗ್ಲ ಕವಿ ಒಬ್ಬ ಹೇಳುತ್ತಾನೆ : " ಗಂಡಸರು ದುಡಿಯಬೇಕು, ಹೆಂಗಸರು ಅಳಬೇಕು " ಇದೊಳ್ಳೇ ನ್ಯಾಯ. ಇಂದಿನ ಹೆಂಗಸರು ದುಡಿಯುತ್ತಾರೆ, ಗಂಡಸರು ಕೆಲಸವಿಲ್ಲದೆ ಅಳುತ್ತಾರೆ. ಇದು ಸಮತಾ ಯುಗ. ಗಂಡಸರಿಗಿದ್ದ ಅಳುವ ಅಧಿಕಾರ ಹೋಗಿಬಿಟ್ಟದೆ. ಹೋಗಲಿ. ಆದರೆ ಅಳುವ ಅಧಿಕಾರವನ್ನು ಮಾತ್ರ ಅವರು ಎಂದೂ ಬಿಟ್ಟುಕೊಡಲಾರರು. ಬೆಲೆಗಳು ರಂಪ್‌ಬಿಲ್ ಪಟದಂತೆ ಏರುವ ಕಾಲದಲ್ಲಿ ಗಂಡಸರು ಅಳಬೇಡೆಂದರೆ ಸಾಯಬೇಕೇ ? ಮೇಲಾಗಿ ಅಳುವದೇ ಮನುಷ್ಯನ ಲಕ್ಷಣ. ನಗುವದು ಮನುಷ್ಯನ ಲಕ್ಷಣವಲ್ಲ. ಹಾಯಿನಾ ಕೂಡಾ ನಗುತ್ತದೆ. ಹಾಡುವದು ಮನುಷ್ಯನ ಲಕ್ಷಣವಲ್ಲ. ಗಂಧರ್ವರೂ ಹಾಡುತ್ತಾರೆ, ಗರ್ದಭವೂ ಹಾಡುತ್ತಿದೆ. ಮಾತಾಡುವದು ಮನುಷ್ಯನ ಲಕ್ಷಣವಲ್ಲ, ಗಿಳಿ ಕೂಡ ಮಾತಾಡುತ್ತಿದೆ. ಶಕ್ತಿ, ಶೌರ್ಯ, ಕೃತಜ್ಞತೆ, ನೆನಪು ಶಕ್ತಿ, ಜಾಣತನ, ಸಂಘಟಕ ಬುದ್ಧಿ, ಕುಚೇಷ್ಟೆ—ಮನುಷ್ಯನ ಲಕ್ಷಣಗಳಲ್ಲ. ಆನೆಗಳು ಮನುಷ್ಯನಿಗಿಂತ ಪ್ರಬಲ ; ಸಿಂಹ ಮನುಷ್ಯನಿಗಿಂತ ಶೂರ ; ನಾಯಿ ಮನುಷ್ಯನಿಗಿಂತ ಕೃತಜ್ಞ ; ಆನೆಯ ನೆನಪು ಶಕ್ತಿ ಮನುಷ್ಯನಿಗೇನು ಬಂದೀತು ? ಕುಚೇಷ್ಟೆಯಲ್ಲಿ ಮಂಗ ಮನುಷ್ಯನ ಅಪ್ಪನ ಹಾಗೆ. ಜೇನ್ನೊಣಗಳಲ್ಲಿ ಇರುವ ಸಂಘಟನೆ ಎಷ್ಟೋ ಸಹಕಾರಿ ಸಂಘಗಳಲ್ಲಿ ಇರುವದಿಲ್ಲ. ಇರುವೆಗಳ ನಾಗರೀಕತೆಯ ಮುಂದೆ ಮನುಷ್ಯ ಮೂಗು ತಿಕ್ಕಬೇಕು, ಒಟ್ಟೇನು ಅಳುವವನೆ ಮನುಷ್ಯ. ಇಡೀ ಜಗತ್ತಿನಲ್ಲಿ ಮನುಷ್ಯನೊಬ್ಬನೇ ನಿಜವಾದ ಅಳುಬರುಕ. ಅರಣ್ಯರೋದನ ಮನುಷ್ಯನೊಬ್ಬನಿಗೇ ಸಾಧ್ಯ. ಅಂತೆಯೇ ಮನುಷ್ಯ ಜೀವಕೋಟಿಯ ಮುಕುಟಮಣಿ.

ನೀರಿಲ್ಲದೆ ಮೀನು ಬಾಳಬಹುದು ; ಕಣ್ಣೀರಿಲ್ಲದೆ ಮನುಷ್ಯ ಬಾಳಲಾರ. ಮನುಷ್ಯನ ಮನಸ್ಸು ಕೋಮಲ, ಹೃದಯ ವಿಶಾಲ ಬುದ್ಧಿ ಚುರುಕು. ಅಂತೆಯೇ ಆತ ಅಳಬಲ್ಲ ಹಿಂದಿನವನ್ನು ನೆನೆದು ಹಿತ್ತಲಲ್ಲಿ ಅಳಬೇಕಾದರೆ

ಗತವೈಭವದ ನೆನಪುಬೇಕು. ಭೂತ—ವರ್ತಮಾನಗಳನ್ನು ಹೋಲಿಸುವ ಬುದ್ಧಿ ಬೇಕು. ವಿಜಯನಗರದ ವೈಭವ ನೆನೆದು ಮನುಷ್ಯ ಕಣ್ಣೀರು ಹಾಕ ಬಲ್ಲ; ಕಂಬದ ಮೇಲೆ ಕುಳಿತು ಹಲ್ಲು ಕಿರಿಯುವ ಮಂಗನಲ್ಲ. ಮಂಗನ ಕಣ್ಣು ಹಿಂದಿನ ವೈಭವದ ಮೇಲಲ್ಲ, ಕಣ್ಣು ಮುಂದಿನ ಕಬ್ಬಿನ ಹೊಲದ ಮೇಲೆ; ಉಳಿದ ಪ್ರಾಣಿಗಳಿಗೆ ಒಂದೇ ಕಾಲ; ವರ್ತಮಾನಕಾಲ. ಮನುಷ್ಯ ನನ್ನು ಭೂತಕಾಲ ದೆವ್ವನಂತೆ ಬೆನ್ನಟ್ಟುತ್ತಿದೆ. ಭವಿಷ್ಯತ್ಕಾಲ ಬಿಸಿಲು—ಗುದುರೆಯಂತೆ ಮುಂದೆಳೆಯುತ್ತಿದೆ. ನಿನ್ನೆ ನಾಳೆಗಳನ್ನು ನೆನೆದು ಅಳುವವ ಮನುಷ್ಯನೊಬ್ಬನೇ. ಮೇಲಾಗಿ ಆಂಗ್ಲ ಕವಿ ಹೇಳುವಂತೆ " ಪ್ರತಿ ಒಬ್ಬನಿಗೂ ತನ್ನ ತನ್ನ ದುಃಖ ಇದ್ದೇ ಇದೆ." ನಾವು ಹೇಳಿ ಕೇಳಿ ಮನುಷ್ಯರು. ಕೋಮಲ ಹೃದಯಿಗಳು ಪರರಿಗಾಗಿ ಮರಗುತ್ತಾರೆ. ಹುಂಬರು ತಮಗಾಗಿ ಕೊರಗು ತ್ತಾರೆ. ಸಾಮಾನ್ಯ ಜನರು ತಮ್ಮ ದುಃಖಕ್ಕಾಗಿ ಅತ್ತರೆ, ಬುದ್ಧ-ಕ್ರಿಸ್ತ-ಮಹಾತ್ಮರು ಮಾನವರಿಗಾಗಿ ಅಳುತ್ತಾರೆ. ಕಣ್ಣೀರಿನಿಂದ ಹೃದಯ ಪರಿಶುದ್ಧ ವಾಗುತ್ತಿದೆ. ಅಂತೆಯೇ ನಮ್ಮ ಲಾಕ್ಷಣಿಕರು ಕರುಣರಸ ಶ್ರೇಷ್ಠವೆಂದು ಹೇಳುತ್ತಾರೆ. ರುದ್ರನಾಟಕ ಹೃದಯವನ್ನು ಪರಿಶುದ್ಧಗೊಳಿಸುವದೆಂದು ಅರಿಸ್ಟಾಟಲ್ ಹೇಳುತ್ತಾನೆ. ಅಳುವವ ಅಳಬುರುಕನಲ್ಲ; ನಾಗರಿಕ, ಮಾನವ, ವಿಶ್ವಬಂಧು; ಅಳಲಾರದವ ಕಟುಕ, ಕಲ್ಲು.

ರೋದನವು ಮನುಷ್ಯನ ಲಕ್ಷಣವಾದರೆ, ಅರಣ್ಯರೋದನವು ಮಹಾತ್ಮರ ಲಕ್ಷಣ. ದೊಡ್ಡವರ ಮನಸ್ಸು ದೊಡ್ಡದು; ದೃಷ್ಟಿ, ದೂರ ದೃಷ್ಟಿ; ಹೃದಯ ವಿಶ್ವದಷ್ಟು ವಿಶಾಲ. ಅಂತೆಯೇ ಸಂಕುಚಿತ ಮನಸಿಗೆ ಹೊಳೆಯದ ಪ್ರಶ್ನೆ ಅವರನ್ನು ಕೆಣಕುತ್ತದೆ; ಮಂದಮತಿಗಳಿಗೆ ಗೋಚರಿಸದ ಸತ್ಯ ಅವರ ಕಣ್ಣುಮುಂದೆ ನಿಲ್ಲುತ್ತದೆ; ಸ್ವಾರ್ಥಿಗಳಿಗೆ ಒಗ್ಗದ ಔದಾರ್ಯ ಅವರನ್ನು ಪ್ರಚೋದಿಸುತ್ತದೆ. ಸಣ್ಣ ಜನರಿಗೆ ಅವರನ್ನು ತಿಳಿದುಕೊಳ್ಳುವದು ಕೂಡ ಕಠಿಣವಾಗುತ್ತಿದೆ. ಜಗತ್ತಿನಲ್ಲಿ ಸಣ್ಣ ಜನರೇ ಹೆಚ್ಚು. ಹೀಗಾಗಿ ದೊಡ್ಡ ವರು ಬಹುಜನ ಸಮಾಜಕ್ಕೆ ಹುಚ್ಚರಂತೆ ಕಾಣುತ್ತಾರೆ; ಇಲ್ಲವೆ ದುಷ್ಟರಂತೆ ಕಾಣುತ್ತಾರೆ. ಜನರು ದೊಡ್ಡವರನ್ನು ಹಿಂಬಾಲಿಸುವದು, ಸಣ್ಣ ಮಕ್ಕಳು ಹುಚ್ಚರನ್ನು, ಕೈದಿಗಳನ್ನು ಹಿಂಬಾಲಿಸಿದಂತೆ. ಸಣ್ಣವರು ದೊಡ್ಡವರನ

ಹುಚ್ಚರೆಂದು ಪೀಡಿಸುತ್ತಾರೆ; ಇಲ್ಲವೆ ದುಷ್ಟರೆಂದು ಕೊಲ್ಲುತ್ತಾರೆ. ಅಂತೆಯೇ ಮಾನವನ ಇತಿಹಾಸದಲ್ಲಿ ಕೇಳಬರುವದು ದೊಡ್ಡವರ ಅರಣ್ಯರೋದನ. ಕಂಡುಬರುವದು ಸಣ್ಣ ಜನರ ತಿಳಿಗೇಡಿತನ. ಕ್ರೂರತನ. ಸಜ್ಜನರನ್ನು ಶೂಲಕ್ಕೇರಿಸುವದು ಸಣ್ಣ ಜನರ ಚಿನ್ನಾಟ. ಅಂತೆಯೇ ವಿಚಾರ ಸಾಮ್ರಾಟ ಸಾಕ್ರೇಟಿಸನನ್ನು ವಿಷ ಕುಡಿಸಿ ಕೊಂದರು. ಪ್ರೇಮಮೂರ್ತಿ ಯೇಸುಕ್ರಿಸ್ತನನ್ನು ಮೊಳೆ ಹೊಡೆದು ಕೊಂದರು; ಜೋನಳನ್ನು ಸುಟ್ಟು ಕೊಂದರು; ಗಾಂಧೀಜಿಯವರನ್ನು ಗುಂಡಿಕ್ಕಿ ಕೊಂದರು. ಮಹಾತ್ಮರೆಲ್ಲ ಹುತಾತ್ಮರು ಅವರ ಆದರ್ಶ ಬುದ್ಧಿಹೀನರಿಗೆ ಹುಚ್ಚು ಔದಾರ್ಯ ಇಲ್ಲವೆ ಕಿಡಿಗೇಡಿಗಳ ಕ್ರಾಂತಿ. ಅವರು ಕಲಿಸುವ ಪಾಠ ಅರಣ್ಯರೋದನ.

ತತ್ಕಾಲಕ್ಕೆ ವಿಫಲವಾದರೂ ಅರಣ್ಯರೋದನ ಹುಚ್ಚರ ಚೀರಾಟವಲ್ಲ. ಮಾನವ ಪ್ರಗತಿಯ ಮೈಲುಗಲ್ಲು, ಯೇಸುಕ್ರಿಸ್ತನ **Sermon on the mount** ಪರ್ವತದ ಪ್ರವಚನ ಅರಣ್ಯರೋದನವಾದರೂ ವಿಶ್ವಬಾಂಧವ್ಯದ ಉಚ್ಚ ಶಿಖರ. ರಕ್ತಪಾತಕ್ಕೆ ಹೇಸಿ ಸಾಮ್ರಾಟ ಅಶೋಕ ಯುದ್ಧ ಹೇಯ, ಅಮಾನುಷ, ತ್ಯಾಜ್ಯ ಎಂದು ಸಾರಿದ ಉಪದೇಶ ಅರಣ್ಯರೋದನ. ಆದರೆ ಶಾಂತಿಯ ಪ್ರಥಮ ಕಹಳೆ. ಬುದ್ಧನ ಉಪದೇಶ ಅರಣ್ಯರೋದನ. ಪ್ರೆಸಿಡೆಂಟ ವಿಲ್ಸನ್ನರ ಶಾಂತಿಘೋಷ ಅರಣ್ಯರೋದನ. ಆದರೆ ಇವೆಲ್ಲ ಮಾನವನ ಮಾನವೀಯತೆಯ ಮುನ್ನಡೆಯ ಹೆಜ್ಜೆಗಳು.

ಕಡೆಯದಾಗಿ ಎಲ್ಲ ಅರಣ್ಯರೋದನ ಕಡೆತನಕ ಅರಣ್ಯರೋದನವಾಗಿ ಉಳಿಯುವದಿಲ್ಲ. ಜನತಾ ಜನಾರ್ದನನ ಕಣ್ಣು ಮಂದ, ಕುರುಡು ಅಲ್ಲ. ಸಣ್ಣ ಜನರ ಹೃದಯ ಕೂಡ ಮಾನವತೆಯ ವಿಕಾಸದೊಡನೆ ಕ್ರಮೇಣ ದೊಡ್ಡದಾಗುತ್ತಿದೆ. ಅಂತೆಯೇ ಹಿಂದಿನ ಅರಣ್ಯರೋದನ ಇಂದಿನ ಸತ್ಯ. ನಾಳಿನ ಗಾದೆಯ ಮಾತು, ಜಯಘೋಷ, ಇಂದು ಒಬ್ಬನೇ ಸಾರಿದ್ದನ್ನು ಮುಂದೆ ಲಕ್ಷಾವಧಿ ಜನ ಘೋಷಿಸುತ್ತಾರೆ. ಅರಣ್ಯರೋದನ ಕ್ರಾಂತಿಯ ಬೀಜವಾಗುತ್ತದೆ. "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು" ಟಿಳಕರ ಅರಣ್ಯರೋದನ. ೩೦ ವರುಷಗಳಲ್ಲಿ ಅದು ೪೫ ಕೋಟಿ ಜನರ ಏಕ ಕಂಠ ಬೇಡಿಕೆ.

“ ಚಲೇಜಾವ ” ೧೯೪೨ ರಲ್ಲಿ ಗಾಂಧೀಯವರ ಅರಣ್ಯರೋದನವಾಗಿತ್ತು. ಇಂದು ಏಷಿಯಾ ಖಂಡದ ಘೋಷವಾಗಿದೆ. ಹೆಚ್ಚೇನು, ಜನರು ದೊಡ್ಡವರನ್ನು ಹುಚ್ಚರೆಂದು ಹೀಯಾಳಿಸುತ್ತಾರೆ. ದುಷ್ಟರೆಂದು ಕೊಲ್ಲುತ್ತಾರೆ. ಮುಂದೆ ಅವರ ಸತ್ಯದ ಅರಿವು, ಆದರ್ಶದ ಮಹತಿ ಮಂದಮತಿಗಳಿಗೆ ಆದೊಡನೆ ಹುಚ್ಚರೆಂದು ಹೀಯಾಳಿಸಿದವರನ್ನು ದೇವರೆಂದು ಪೂಜಿಸುತ್ತಾರೆ. ಅರಣ್ಯರೋದನ ಗುರುಮಂತ್ರವಾಗುತ್ತದೆ.

—ಕೆ. ಆರ್. ಮಹಿಷಿ

# ನ್ಯಾಯ ಮಂದಿರ

ಅಲ್ಲರಿ, ನಗೆ ಇರದ ಎಡೆ ಇಲ್ಲ ಅನ್ನುತ್ತೀರಲ್ಲಾ, ನ್ಯಾಯಸ್ಥಾನದ ಒಣ ವಾತಾವರಣದಲ್ಲಿ ಎಲ್ಲಿಯ ನಗೆರೀ? ಅಲ್ಲಿ ದಸ್ತಾವೇಜು ಪುರಾವೆಗಳ ಹಾಗೂ ಕೊಡಬೇಕಾದ ನಿರ್ಣಯಗಳ ಹೊರೆಯಿಂದ ಹೊಟ್ಟೆಗೆ ಹಾಕಿದ ಹಿಟ್ಟು ಕೂಡಾ ಕರಗದೆ ಬೇಸರಿಕೆಯಿಂದ ಗಂಭೀರ ಮುಖ ಮಾಡಿ ಕುಳಿತಿರುವ ಜಡ್ಜ, ಮೇಜಿಸ್ಟ್ರೇಟರುಗಳು. ಅಂತ್ಯವಿಲ್ಲದ ಮುದ್ದತ್ತುಗಳಿಂದಾಗಿ ಸಾಕ್ಷಿಗಾರರ ಪ್ರಯಾಣದ ವೆಚ್ಚ, ಚಹಾದ ಖರ್ಚು ತೆತ್ತು ತೆತ್ತು ಸೋತು ಸುಣ್ಣಾದ ಪಕ್ಷಗಾರರು. ಮಿತಿಮೀರಿದ ಈಗಿನ ಸ್ಪರ್ಧೆಯ ದಿನಗಳಲ್ಲಿ ತಮ್ಮೆಡೆಗೆ ಹಾಯ್ದು ಒಂದೆರಡು ಪಕ್ಷಗಾರರನ್ನಾದರೂ ತಮ್ಮಲ್ಲೇ ಉಳಿಸಿಕೊಳ್ಳುವ ಸಲುವಾಗಿ ಇದ್ದ, ಇಲ್ಲದ, ಆದ, ಆಗದ, ಕಾಯಿದೆ ಹಾಗೂ ಹೈಕೋರ್ಟು ಜಡ್ಜಮೆಂಟುಗಳನ್ನು ಹುಡುಕುವದರಲ್ಲಿ ತಮ್ಮ ಸಾಮರ್ಥ್ಯವನ್ನೆಲ್ಲಾ ವಿನಿಯೋಗಿಸಿ ತಲೆ ಕರಡು ಮಾಡಿಕೊಳ್ಳುವ ವಕೀಲರು; ಇವರೆಲ್ಲರ ಪರಸ್ಪರ ಜಗ್ಗಾಟ, ಮೇಲಾಟಗಳ ರಣರಂಗದಲ್ಲಿ ನಗೆಗೆ ಎಡೆ ಎಲ್ಲಿ ಎಂದು ಎಷ್ಟೋ ಮಂದಿ ಉದ್ಗಾರ ತೆಗೆಯಬಹುದು.

ಆದರೆ ಈ ತರದ ಸಂಶಯ ಎತ್ತುವವರಿಗೆ ನಗೆಯ ನಿಜಸ್ವರೂಪವೇ ತಿಳಿದಿಲ್ಲ ಅನ್ನಬೇಕು. ನಗೆಯೆಂದರೆ ಬರೇ ವಿದೂಷಕನ ವಿಡಂಬನ ಹಾಸ್ಯವಲ್ಲ. ಅಥವಾ ಬೈಲಾಟದ ಭಂಡುಮಾತುಗಳೂ ಅಲ್ಲ. ಮನಸ್ಸಿನ ವೈಯಕ್ತಿಕ ಹಾಗೂ ಸಾಮೂಹಿಕ ಜೀವನ ವ್ಯಾಪಾರದಲ್ಲಿ ಪರಸ್ಪರರ ವಿಸಂಗತಿಯಿಂದ ಉದ್ಭವಿಸುವ ಸಣ್ಣಪುಟ್ಟ ದೋಷಗಳನ್ನು ಎತ್ತಿ ತೋರಿಸಿ ಮಾನವನಲ್ಲಿ ಸಹಜವಾದ ಹಾಸ್ಯಪ್ರವೃತ್ತಿಯನ್ನು ಉದ್ರೇಕಗೊಳಿಸುವುದೇ ನಗೆಯ ಮೂಲ ಉದ್ದೇಶ. ಸುಸಂಸ್ಕೃತ ಮನುಷ್ಯನ ಸೂಕ್ಷ್ಮದೃಷ್ಟಿಗೆ ಜೀವನದ ಎಲ್ಲೆಡೆಗಳಲ್ಲೂ ನಗೆಯ ಸನ್ನಿವೇಶಗಳು ಗೋಚರವಾಗುವವು. ನ್ಯಾಯಸ್ಥಾನಳೆಗಂದರೆ

ಜನಜೀವನದ ಒಂದು ಕೇಂದ್ರೀಕೃತ ಪ್ರತಿಬಿಂಬ. ಅಲ್ಲಿ ನಿತ್ಯ ನಡೆಯುವ ಮನೋವ್ಯಾಪಾರದ ಘರ್ಷಣೆಗಳನ್ನು ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸುವವರಿಗೆ ನಕ್ಕು ನಗಿಸುವ ಸಂದರ್ಭಗಳು ಅನುಭವಕ್ಕೆ ಬಂದೇ ಬರುವವು.

ನಮ್ಮೂರಲ್ಲಿ ಯುವಕ ಅಜ್ಜಯ್ಯ ಎಂತ ಒಬ್ಬ ಹಳೇ ವಕೀಲರಿದ್ದರು. ಅವರಿಗೆ ಆ ಹೆಸರು ಬಿದ್ದ ಸನ್ನಿವೇಶ ಬಹಳ ಮಜೆಶೀರ ಅದೆ. ಆ ಕಾಲಕ್ಕೆ ಅವರು ಮುದುಕರು. ಅವರ ಮೈಬಣ್ಣ ಮುಸಿಕೆಂಡವನ್ನು ಬಿಳಿ ಅನ್ನಿಸು ವಂತಹದು. ಹೀಗಿದ್ದರೂ ತಾನು ಎಳೇ ವಯಸ್ಸಿನ ಸುಂದರ ಅಂತ ಅವರ ಭಾವನೆ. ಯಾರಾದರೂ ನಿಮ್ಮ ಮೋರೆಯಲ್ಲಿ ವಯಸ್ಸೇ ಕಾಣಿಸುವದಿಲ್ಲ, ಎಂತಹ ಮೋಹಕ Personality ನಿಮ್ಮದು ಎಂತ ಹೇಳಿದರೆ ಸರಿ, ಅವರು ಕೇಳಿದ್ದನ್ನು ಕೊಟ್ಟುಬಿಡುತ್ತಿದ್ದರು.

ಅವರು ಒಮ್ಮೆ ಒಂದು ಖೂನಿಕೇಸಿನಲ್ಲಿ ಆರೋಪಿಕಡೆಯಿಂದ ಕೆಲಸ ನಡೆಸುತ್ತಿದ್ದರು. ಅದರಲ್ಲಿ ಖೂನಿ ಆದದ್ದನ್ನು ಪ್ರತ್ಯಕ್ಷ ಕಂಡ ಹಾಗೂ ಕೊಲೆಗಾರನ ಗುರುತು ಹಿಡಿದ ಸಾಕ್ಷಿ ಒಂದು ಹುಡುಗಿಯದು ಮಾತ್ರವೇ ಇತ್ತು. ಖರೆ ಅಂದರೆ ಆ ಹುಡುಗಿಗೆ ಕಣ್ಣು ಸರಿಯಾಗಿ ಕಾಣಿಸುತ್ತಿರಲಿಲ್ಲ. ಇದನ್ನು ಕೋರ್ಟಿಗೆ ಪ್ರತ್ಯಕ್ಷ ಸಿದ್ಧಮಾಡಿ ತೋರಿಸುವುದೇ ಆರೋಪಿ ಕಡೆಯ ಮುಖ್ಯ ಸಾಧನೆಯಾಗಿತ್ತು.

ಸರಕಾರಿ ವಕೀಲರು ಮುಖ್ಯ ಸವಾಲುಮಾಡಿದ ಮೇಲೆ ಅಜ್ಜಯ್ಯ ವಕೀಲರು ಅಡ್ಡ ಸವಾಲಿಗೆ ತೊಡಗಿದರು.

"ನಿನಗೆ ಕಣ್ಣು ಸರಿಯಾಗಿ ಕಾಣಿಸುತ್ತವೇನು ?"

ಉತ್ತರ—"ಹೌದು, ಸರಿಯಾಗಿ ಕಾಣಿಸುತ್ತವೆ."

"ನಾನು ಕಾಣಿಸುತ್ತೇನೇನು ?"

"ಹೌದು."

ಈ ರೀತಿ ಸವಾಲು ಯಾಕೆ ಅಂತ ಜಡ್ಜರು ಕೇಳಿದರು.

"ಇವಳು ಕೊಲೆ ಮಾಡಿದವನ ಗುರುತು ಹಿಡಿದಿದ್ದಾಳೆಂಬುದು ಪೂರಾ ಸಳ್ಳು. ಇವಳಿಗೆ ಕಣ್ಣು ಸರಿಯಾಗಿ ಕಾಣಿಸುವದಿಲ್ಲ. ಅದನ್ನು ಇಲ್ಲೇ ಪ್ರತ್ಯಕ್ಷ ಸಿದ್ಧಮಾಡಿಕೊಡುತ್ತೇನೆ ಅಂತ ಅಜ್ಜಯ್ಯ ವಕೀಲರು ಹೇಳಿದರು

ಅಜ್ಜಯ್ಯನವರ ಅಡ್ಡಸವಾಲು ಮುಂದೆ ಸಾಗಿತು. " ನೋಡು ಹುಡುಗಿ ನಾನು ಸರಿಯಾಗಿ ಕಾಣಿಸುತ್ತೇನಂತಿ, ನಾನು ಮುದುಕನಿದ್ದೇನೊ ಯುವಕ ನಿದ್ದೇನೊ ?

" ತಾವು ಯುವಕರಿದ್ದೀರಿ ರಾಯರೇ."

" ನಾನು ನೋಡಲಿಕ್ಕೆ ಹ್ಯಾಗಿದ್ದೇನೆ ? "

" ಬೆಳ್ಳಗಾಗಿ ಚಂದ ಇದ್ದೀರಿ, ರಾಯರೇ."

ವಕೀಲರೆಂದರೆ ಕರೇ ಕೋಟು ತೊಡುವವರಾದರೂ ಸ್ವತಃ ಬೆಳ್ಳಗಿದ್ದು ಚಂದ ಇರುವವರು ಅಂತಾ ಆ ಹಳ್ಳಿಯ ಹುಡುಗಿಯ ಭಾವನೆಯಾಗಿತ್ತು.

ಅವಳ ಈ ಉತ್ತರಗಳಿಗೆ ಕೋರ್ಟು ಇಡೀ ಖೋ ಎಂದು ನಕ್ಕಿತು. ಅವಳಿಗೆ ಕಣ್ಣು ಸರಿಯಾಗಿ ಕಾಣಿಸುತ್ತಿದ್ದಿಲ್ಲವೆಂಬುದಕ್ಕೆ ಬೇರೆ ಪುರಾವೆ ಬೇಕಾಗಿರಲಿಲ್ಲ. ಆದರೆ ತನ್ನನ್ನು ಯುವಕ ಸುಂದರ ಎಂತ ವರ್ಣಿಸಿದ್ದರಿಂದ ಆನಂದಪರವಶರಾದ ಅಜ್ಜಯ್ಯ ವಕೀಲರು ಅವಳು ತನಗೆ ಕೊಟ್ಟ ಶಿಫಾರಸನ್ನು ಸಮರ್ಥಿಸಲಿಕ್ಕೆ ಹೋಗಿ ತಾನು ಕೇಳಿದ ಸವಾಲುಗಳ ಉದ್ದೇಶ, ತನ್ನ ಪಕ್ಷಗಾರರ ಹಿತ ಎಲ್ಲವನ್ನೂ ಮರೆತರು. ನಿಮ್ಮ ಪ್ರಶ್ನೆಗಳ ಉತ್ತರ ಏನೆಂತ ಬರಕೊಳ್ಳಬೇಕು ಎಂತ ಜಡ್ಜರು ಕೇಳಿದ್ದಕ್ಕೆ ಏನೂ ಬರಕೊಳ್ಳುವುದು ಜರೂರಿಲ್ಲ, ಸಾಹೇಬರೇ ಅವಳಿಗೆ ಕಣ್ಣು ಸರಿಯಾಗಿ ಕಾಣಿಸುತ್ತವೆ ಅಂದುಬಿಟ್ಟರು.

ಅಜ್ಜಯ್ಯ ವಕೀಲರಿಗೆ ಒಬ್ಬ ಹುಡುಗಿಯಿಂದ ಸುಂದರ ಯುವಕ ಪ್ರಶಸ್ತಿ ಪತ್ರ ಒಂದು ದೊರೆಯಿತು. ಆದರೆ ಅದರ ಸಲುವಾಗಿ ಅವರ ಪಕ್ಷಗಾರ ಮಾತ್ರ ಗಲ್ಲಿಗೇರಬೇಕಾಯಿತು.

ಬ್ರಿಟಿಶರ ಕಾಲದಲ್ಲಿ ನ್ಯಾಯಾಧೀಶರಾಗಿದ್ದ ನಾಡಿನ ಸುಡಿಯ ಅಜ್ಞಾನ ಅಥವಾ ಅಲ್ಪಜ್ಞಾನದಿಂದ ಹಲವು ಸಾರೆ ಹಾಸ್ಯಾಸ್ಪದ ಘಟನೆಗಳು ಸಂಭವಿಸುತ್ತಿದ್ದುವು. ಅಂತಹ ಒಂದು ಚಮತ್ಕಾರಿಕ ಸಂಗತಿ ಬಹಳ ವರ್ಷಗಳ ಹಿಂದೆ ನಮ್ಮೂರಿನ ಖೂನಿಯಲ್ಲಿ ಪರಿಣಮಿಸಿದ ಒಂದು ಮಾರಾಮಾರಿ ಕೇಸಿನಲ್ಲಿ ಆಗಿತ್ತಂತೆ. ರಾತ್ರೆ ಮನೆ ಮಂದಿ ಎಲ್ಲಾ ಮಲಗಿದ್ದಾಗ ಕೆಲವು ವೈರಿಗಳು ಒಳಹೊಕ್ಕು ಹೊಡೆತಬಡೆತ ಸುರುಮಾಡಿದರು. ಕಗ್ಗತ್ತಲಾದುದರಿಂದ ಏನೂ ಕಾಣಿಸುತ್ತಿದ್ದಿಲ್ಲ. ಮನೆಯ ಯಜಮಾನ ಬೊಬ್ಬೆ ಕೇಳಿ ಬಂದವರನ್ನುದ್ದೇಶಿಸಿ ತಾನು ಹೌದಯ್ಯಾ, ದೀಪ ತಾ ಎಂತ ಒವರಿಹೇಳಿದೆ. ಯಾರೋ ಹೋಗಿ ದೀಪ ತಂದರು. ಅದರ

ಬೆಳಕಿನಲ್ಲಿ ಆರೋಪಿತರ ಗುರುತು ಹತ್ತಿತು ಅಂತಾ ಜಬಾನಿ ಕೊಟ್ಟ. ಅದನ್ನು ನೆರೆಕರೆಯ ಕೆಲವರು ಪುಷ್ಟೀಕರಿಸಿದರು.

ಆಗಿನ ಜಿಲ್ಲಾ ಜಡ್ಜರಿಗೆ ಕನ್ನಡ ಅರ್ಧಮರ್ಧ ಮಾತ್ರ ಬರುತ್ತಿತ್ತು. ಹಾಗಾಗಿ ಹೌದಯ್ಯ ಎಂಬುದು ಬರೇ ಸಂಬೋಧವಾಚಕ ಉದ್ಗಾರ ಎಂಬುದು ಅವರಿಗೆ ತಿಳಿಯದೆ ಅದು ಓರ್ವ ವ್ಯಕ್ತಿಯ ಹೆಸರು ಎಂತ ಎಣಿಸಿ ಅವರು " **Houdayya was asked to bring the lamp & a lamp was brought** " ಅಂದರೆ ಹೌದಯ್ಯನಿಗೆ ದೀಪ ತರಲು ಹೇಳಿದೆ. ಆ ಪ್ರಕಾರ ದೀಪ ತರಲಾಯಿತು ಅಂತ ಬರಕೊಂಡರು.

ಜಡ್ಜ ಕೋರ್ಟಿನಲ್ಲಿ ಆರೋಪಿತರಿಗೆ ಜನ್ಮಟೇಪಿನ ಶಿಕ್ಷೆಯಾಯಿತು. ರೀತಿಪ್ರಕಾರ ಹೈಕೋರ್ಟಿಗೆ ಅಪೀಲೂ ಆಯಿತು. ಅಪೀಲಿನ ಚೌಕಾಶಿ ಕಾಲದಲ್ಲಿ ಆರೋಪಿ ಕಡೆ ವಕೀಲರು " ಹೌದಯ್ಯನು ತಂದ ದೀಪದ ಬೆಳಕಿನಲ್ಲಿ ಆರೋಪಿತರ ಗುರುತು ಹತ್ತಿತು ಅಂತಾ ಸಾಕ್ಷಿಗಾರರು ಅನ್ನುತ್ತಾರೆ. ಆದರೆ ಹೌದಯ್ಯನ ಸಾಕ್ಷಿ ಮಾಡಲಿಲ್ಲ. ಅಷ್ಟೇ ಅಲ್ಲ. ಸಾಕ್ಷಿಗಾರರ ಯಾದಿಯಲ್ಲೂ ಅವನ ಹೆಸರಿಲ್ಲ. ಆದ್ದರಿಂದ ದೀಪ ತಂದದ್ದೆಂಬುದೇ ಸುಳ್ಳಾಗಿರಬೇಕು " ಎಂತ ಜೋರಾಗಿ ವಾದಿಸಿದರು. ಜಡ್ಜರಿಗಾಗಲಿ ಸರಕಾರಿ ವಕೀಲರಿಗಾಗಲಿ ಯಾರಿಗೂ ಕನ್ನಡ ಬರುತ್ತಿದ್ದಿಲ್ಲ. ಹೌದಯ್ಯ ಎಂಬುದು ವ್ಯಕ್ತಿಯ ಹೆಸರಲ್ಲ ಎಂತ ಹೇಳುವವರು ಅಲ್ಲಿ ಯಾರೂ ಇರಲಿಲ್ಲ.

ಹೌದಯ್ಯನ ಸಾಕ್ಷಿ ಯಾಕೆ ಮಾಡಿಸಲಿಲ್ಲ ಎಂಬ ಜಡ್ಜರ ಪ್ರಶ್ನೆಗೆ ಸರಕಾರಿ ವಕೀಲರು ಮೌನತಾಳಬೇಕಾಯಿತು. ಹೌದಯ್ಯನನ್ನು ಸೃಷ್ಟಿಸುವ ಶಕ್ತಿಯನ್ನು ಬ್ರಹ್ಮನು ಅವರಿಗೆ ಕೊಟ್ಟಿರಲಿಲ್ಲ. ಪರಿಣಾಮ ಆರೋಪಿ ವಕೀಲರ ಅಂಬೋಣ ಹೈಕೋರ್ಟು ಜಡ್ಜರುಗಳಿಗೆ ಬರೋಬರಿ ಅನಿಸಿತು. ಜಡ್ಜಮೆಂಟಿನಲ್ಲಿ " ದೀಪ ತಂದದ್ದೆಂಬುವ ಹೌದಯ್ಯನ ಸಾಕ್ಷಿ ಇಲ್ಲ. ಅವನ ಸಾಕ್ಷಿ ಮಾಡಿಸದಿರಲಿಕ್ಕೆ ಯಾವದೇ ಕಾರಣವನ್ನು ತೋರಿಸಲು ಸರಕಾರಿ ವಕೀಲರು ಸಮರ್ಥರಿಲ್ಲ. ಆದ್ದರಿಂದ ದೀಪ ತಂದದ್ದೆಂಬುದೇ ಸುಳ್ಳಾಗಿರಬೇಕು ಅನ್ನಲು ಬಲವಾದ ಆಧಾರವಿದೆ. ಈ ಪರಿಸ್ಥಿತಿಯಲ್ಲಿ ಆರೋಪಿತರ ಗುರುತು ಹತ್ತಿದೆಯೆಂಬುದನ್ನು ಒಪ್ಪಲಿಕ್ಕೆ ಬರುವಂತಿಲ್ಲ" ಎಂತ ಬರೆದರು ತಾನು ಹುಟ್ಟದೇ ಇದ್ದರೂ ಹೌದಯ್ಯ ಆರೋಪಿತರ ಜೀವ ಉಳಿಸಿದ.

ಭಾಷೆಯ ಪ್ರಶ್ನೆ ಬಂದಾಗ ನಮ್ಮೂರಿನ ಸೆಶ್ಯನ್ ಕೋರ್ಟಿನಲ್ಲಿ ಉಡುಪಿಯ ಒಬ್ಬ ಬೆಡಗಿನ ಬಿನ್ನಾಣಗಿತ್ತಿ ಮಾಡಿದ ರಿವಿಜನ್ ಅರ್ಜಿಯ ನೆನಪು ಬರುತ್ತದೆ. ಒಬ್ಬ ಸೋಡಾಮಾರುವವನ ಮೇಲೆ ಅವಳು ಕೊಟ್ಟ ಫಿರ್ಯಾದಿಯನ್ನು ಮೆಜಿಸ್ಟ್ರೇಟರು ಕಿತ್ತುಹಾಕಿದ್ದರಿಂದ ಅದರ ಮೇಲೆ ಅವಳು ಜಡ್ಜ ಕೋರ್ಟಿನಲ್ಲಿ ಆ ಅರ್ಜಿ ಮಾಡಿದ್ದಳು. ಸೋಡಾದವನಿಂದ ಅವಳು ತರಿಸಿದ ಐದಾರು ಡಜನ್ ಸೋಡಾ ಬಾಟಲಿಗಳ ರೊಕ್ಕ ಕೊಟ್ಟಿಲ್ಲವೆಂತ ತಕರಾರೂ ಇತ್ತು. ಒಂದು ದಿನ ಅವಳನ್ನು ಅವನು ದಾರಿಯಲ್ಲಿ ಅಡ್ಡಕಟ್ಟಿ ಉಡುಪಿಯಲ್ಲಿ ಪ್ರಚಲಿತವಾಗಿದ್ದ ಕೀಳುಭಾಷೆಯಲ್ಲಿ " ಎಂತಲಾ, ದಕ್ಕಲಾ, ಪೋಲಾ ಅಂದರೆ ನಿಲ್ಲು, ರೊಕ್ಕಚಲ್ಲು, ಹೋಗು " ಅಂತ ಹೇಳಿದ. ಇದರಿಂದ ತನಗೆ ಬಹಳ ಅಪಮಾನವಾಯಿತು ಅಂತ ಅವಳ ಫಿರ್ಯಾದಿ.

ಕೊಡುವದನ್ನೂ ಕೊಡದೆ ಕ್ಷುಲ್ಲಕ ಕಾರಣಕ್ಕಾಗಿ ಕೋರ್ಟಿನ ಮೆಟ್ಟಲು ಏರಿದ ಈ ದೊಡ್ಡಮ್ಮಳ ದೊಡ್ಡಸ್ತಿಕೆಯ ಗುಳ್ಳೆಯನ್ನು ಒಡೆಯಬೇಕೆಂದು ಜಡ್ಜರಿಗೂ ಅನಿಸಿತು ಎಂತಲಾ, ದಕ್ಕಲಾ, ಪೋಲಾ ಅಂದರೆ ನಿಲ್ಲು, ರೊಕ್ಕಚೆಲ್ಲು, ಹೋಗು, ಅಂತ ಹೇಳಿದ್ದರಲ್ಲಿ ಅಪಮಾನಕರ ಏನು ಎಂತ ಜಡ್ಜರು ಅವಳ ವಕೀಲರಿಗೆ ಕೇಳಿ ಹಾಗೆನ್ನುವುದು ಏಕವಚನ, ಸಾಹೇಬರೇ, ಉಚ್ಚವರ್ಗದ ಮರ್ಯಾದಸ್ಥ ಸ್ತ್ರೀಯನ್ನು ಏಕವಚನದಿಂದ ಸಂಬೋಧಿಸುವುದು ನಮ್ಮ ನಾಡಿನಲ್ಲಿ ತೀರಾ ಅಪಮಾನಕರವೆಂದು ಎಣಿಸಲಾಗುತ್ತದೆ ಎಂತ ಅವರು ಹೇಳಿದರು. ಅಂದರೆ ಅವನು ಏನು ಹೇಳಬೇಕಿತ್ತು? ಅಂತ ಜಡ್ಜರು ಪುನಃ ಪ್ರಶ್ನಿಸಿದರು. ತುಳುಭಾಷೆಯಲ್ಲಿ ಆಕಾರಾಂತ ಏಕವಚನವು ಬಹುವಚನದಲ್ಲಿ ಏಕಾರಾಂತವಾಗುತ್ತವೆ. ಅವನು ಎಂತಲಾ, ದಕ್ಕಲಾ, ಪೋಲಾ ಅನ್ನುವ ಬದಲಾಗಿ ಎಂತಲೇ, ದಕ್ಕಲೇ, ಪೋಲೇ ಅನ್ನಬೇಕಿತ್ತು ಅಂದರು.

ಜಡ್ಜರು ತುಂಬಾ ವಿನೋದಿಗಳು. ಈಗ ತಿಳಿಯಿತು. ಲೇ ಅನ್ನುವ ಬದಲು ಲಾ ಅಂಬುದು ಆರೋಪಿಯ ಅಪರಾಧ. ಅಲ್ಲದೆ ಮೂರು ಸಾರೆ ಹೇಳಿದ, ಸರಿ. ಇಷ್ಟು ಹೇಳಿ ಆರೋಪಿಯನ್ನು ಕರೆದು " ನೋಡು ನೀನು ಮೂರು ಸಾರೆ ಲೇ ಅನ್ನುವ ಬದಲು ಲಾ ಎಂತ ಉಚ್ಚರಿಸಿ ಈ ಮಹಾನು ಭಾವಳ ಮಾನಹಾನಿ ಮಾಡಿದ್ದಿ. ಈಗ ಅವಳ ಎದುರಿಗೆ ಕೈಜೋಡಿಸಿ ನಿಂತುಕೊಂಡು ಮೂರು ಸಾರಿ ಲೇ ಲೇ ಲೇ ಅನ್ನು ಅಂದರು. ಕೋರ್ಟು

ಇಡೀ ನಗೆಯಲ್ಲಿ ಮುಳುಗಿತು. ಜಡ್ಜರ ಹುಕುಮಿನ ಅಮಲಬಜಾವಣಿ ಮಾತ್ರ ಆಗಲಿಲ್ಲ, ಯಾಕಂದರೆ, ಜಡ್ಜರ ಈ ಮಾತು ಕೇಳಿದೊಡನೆ ಆ ಬಿನ್ನಾಣಗಿತ್ತಿ ಬಿಡಿಸಿದ್ದ ತನ್ನ ಬಣ್ಣದ ಬೀಸಣಿಕೆಯನ್ನು ಮಡಚಿ ಸದ್ದಿಲ್ಲದೆ ಅಲ್ಲಿಂದ ಜಾರಿದ್ದಳು.

ನಮ್ಮೂರಲ್ಲಿ ಕೊಡಲಿ ಕೃಷ್ಣಭಟ್ಟರು ಅಂತಾ ಒಬ್ಬರಿದ್ದರು. ಅವರ ಆಯುಷ್ಯವೆಲ್ಲಾ ಕೋರ್ಟುಗಳಲ್ಲೇ ಕಳೆದಿತ್ತು. ನಮ್ಮೂರಿಗೆ ಕಡಲೆ ರಾಮರಾಯರೆಂಬ ಒಬ್ಬ ಮುನಸೊಫರು ಬಂದಿದ್ದರು. ಅವರಲ್ಲಿ ಕೋರ್ಟಿಗೆ ಬಂದವರಿಗೆಲ್ಲಾ ಬಯ್ಯುವುದು, ಕುಚೇಷ್ಟೆ ಮಾಡುವುದು ಈ ಕೆಟ್ಟ ಚಟ ಇತ್ತು. ಕೃಷ್ಣಭಟ್ಟರು ಅವರ ಕೋರ್ಟಿನಲ್ಲಿ ಒಮ್ಮೆ ಸಾಕ್ಷಿಗೆ ಬಂದಿದ್ದರು. ಸಾಕ್ಷಿ ಆಗುವಾಗ ಪರಿಹಾಸ್ಯಮಾಡಲಿಕ್ಕಾಗಿ ಕಡಲೆ ಮುನಸೋಫರು ಕೃಷ್ಣ ಭಟ್ಟರಿಗೆ ನಿಮ್ಮ ಕೊಡಲಿ ಕೋರ್ಟಿನಲ್ಲಿ ಏನೂ ಉಪಯೋಗ ಇಲ್ಲರಿ ಭಟ್ಟರೇ ಅಂದರು. ಕೂಡಲೇ ಕೃಷ್ಣಭಟ್ಟರು "ಉಪಯೋಗ ಯಾಕಿಲ್ಲ, ರಾವಸಾಹೇಬರೇ, ಕೊಡಲಿಯಿಂದ ಕಡಲೆ ಒಡೆಯಲಿಕ್ಕೆ ಆಗುತ್ತದಲ್ಲಾ" ಅಂದುಬಿಟ್ಟರು. ಕಡಲೆ ಮುನಸೋಫರು ಕೋಪದಿಂದ ಕೆಂಪಾದರು. ಆದರೆ ಮಾಡುವದೇನು? ೫೦೦೦ ರೂಪಾಯಿಗಳ ಡಿಕ್ರಿ ಕೊಡುವ ಅಧಿಕಾರವಿದ್ದರೂ ಈ ಸಂದರ್ಭದಲ್ಲಿ ಕೃಷ್ಣಭಟ್ಟರಿಗೆ ಏನು ಮಾಡುವುದು ಅವರಿಂದ ಸಾಧ್ಯ ವಿರಲಿಲ್ಲ.

ಕೃಷ್ಣಭಟ್ಟರಿಗೆ ಊರಿನಲ್ಲಿ ಸವ್ಯಸಾಚಿ ಎಂಬ ಹೆಸರು ಇತ್ತು. ಎಂದರೆ ಅರ್ಜುನನು ಎರಡೂ ಕೈಗಳಿಂದ ಏಕಪ್ರಕಾರವಾಗಿ ಬಾಣ ಬಿಡುತ್ತಿದ್ದಂತೆ ಇವರು ಸಿವಿಲ್ ಕ್ರಿಮಿನಲ್ ಎರಡೂ ತರದ ವ್ಯವಹರಣೆಗಳಲ್ಲಿ ಒಂದೇ ಮಟ್ಟದ ಕೌಶಲ್ಯದಿಂದ ಸಾಕ್ಷಿ ಹೇಳುತ್ತಿದ್ದರು.

ಅರ್ಜುನನ ದಿಗ್ವಿಜಯದಂತೆ ಇವರ ದಿಗ್ವಿಜಯಗಳೂ ಹಲವಿದ್ದುವು. ಆದರ ಇವರ ರಣರಂಗ ಕುರುಕ್ಷೇತ್ರವಲ್ಲ. ನ್ಯಾಯಸ್ಥಾನದ ಮರ್ಯಾದಿತ ಕ್ಷೇತ್ರ. ಇವರ ಆಯುಧಗಳು ರಿಕಾರ್ಡು, ದಸ್ತಾವೇಜುಗಳು. ಸೈನ್ಯವೆಂದರೆ ಸಾಕ್ಷಿಗಾರರು. ಸಾರಥಿ ವಕೀಲರು, ಗೀತೆ ಲಾ ರಿಪೋರ್ಟು.

ಸಾಕ್ಷಿ ಹೇಳುವುದರಲ್ಲಿ ಕೃಷ್ಣಭಟ್ಟರ ಚಾತುರ್ಯ ತಲೆ ತೂಗುವಂತಹದು ಒಮ್ಮೆ ಅವರು ಒಂದು ದರೋಡೆ ಕೇಸಿನಲ್ಲಿ ಮುಖ್ಯ ಸಾಕ್ಷಿಯಾಗಿದ್ದರು.

ಆರೋಪಿತರಿಗೆ ಶಿಕ್ಷೆಯೂ ಆಗಿತ್ತು. ಆಮೇಲೆ ಫರಾರಿಯಾಗಿದ್ದ ಉಳಿದೊಬ್ಬ ಆರೋಪಿ ಸಿಕ್ಕಿದ. ಪರಿಸ್ಥಿತಿಯನ್ನು ಪೂರಾ ಲಕ್ಷದಲ್ಲಿ ತಾರದೆ ಕೃಷ್ಣಭಟ್ಟರು ಅವನನ್ನು ಉಳಿಸುತೇನಂತ ಅಭಯ ಕೊಟ್ಟುಬಿಟ್ಟರು. ಆದರೆ ಅದನ್ನು ಪಾಲಿಸುವುದು ಕಠಿಣವಾಗಿ ಕೂತಿತು. ಯಾಕೆಂದರೆ ನಡೆದ ಘಟನೆಯ ವಿಷಯ ಇವರು ವಿವರವಾಗಿ ಮೊದಲೇ ಸಾಕ್ಷಿ ಹೇಳಿದ್ದರು. ಹೊಸ ಆರೋಪಿಯ ಹೆಸರು ಮೊದಲ ಜಬಾನಿಗಳಲ್ಲೇ ತಪಶೀಲಾಗಿ ಬಂದಿತ್ತು. ಹಾಗಾಗಿ ಮೊದಲು ಹೇಳಿದಂತೆಯೇ ಸತ್ಯಹೇಳಿದರೆ ಅವನನ್ನೂ ಶಿಕ್ಷೆಯಿಂದ ಉಳಿಸುವುದು ಶಕ್ಯವಿರಲಿಲ್ಲ. ಹಾಗೆ ಹೇಳದಿದ್ದರೆ, ಸುಳ್ಳು ಸಾಕ್ಷಿ ಹೇಳಿದ ಬಗ್ಗೆ ಇವರಿಗೆ ಶಿಕ್ಷೆ ತಪ್ಪುತ್ತಿದ್ದಿಲ್ಲ. ಅಂತೂ ಒಳ್ಳೇ ಪೇಚಿನ ಪ್ರಸಂಗ.

ಮನುಷ್ಯನಿಂದಲೂ ಮೃಗಗಳಿಂದಲೂ ಮರಣ ಬರಬಾರದೆಂದು ವರಪಡೆದ ಹಿರಣ್ಯಕಶಿಪುವನ್ನು ಕೊಲ್ಲಲು ದೇವರು ಮನುಷ್ಯನೂ ಮೃಗವೂ ಅಲ್ಲದ ನಾರಸಿಂಹ ರೂಪವನ್ನು ತಾಳಿದಂತೆ ಕೃಷ್ಣಭಟ್ಟರೂ ಈ ಪ್ರಸಂಗದಲ್ಲಿ ಸತ್ಯವೂ ಸುಳ್ಳೂ ಅಲ್ಲದ ಮೂರನೇ ದಾರಿಯನ್ನು ಕಂಡುಹಿಡಿದರು.

ಚೌಕಶಿಕಾಲದಲ್ಲಿ ಕೋರ್ಟಿನಲ್ಲಿ ದರೋಡೆಯ ಸಂಬಂಧ ಕೇಳಿದ ಪ್ರಶ್ನೆಗಳಿಗೆಲ್ಲಾ ಇವರದು ಒಂದೇ ಉತ್ತರ. “ ನೆನಪಿಲ್ಲ.”

“ ಏನು ನೆನಪಿಲ್ಲ ? ಮೊದಲು ಇದೇ ಕೋರ್ಟಿನಲ್ಲಿ ಇದೇ ದರೋಡೆಯ ವಿಷಯದಲ್ಲಿ ನೀವು ಸಾಕ್ಷಿ ಹೇಳಲಿಲ್ಲೇನು ? ” ಸರಕಾರಿ ವಕೀಲರು ಗರ್ಜಿಸಿದರು. ಶಾಂತವಾಗಿ ಕೃಷ್ಣಭಟ್ಟರು ಅದೇ ಉತ್ತರ ಕೊಟ್ಟರು,

“ ಹೇಳಿರಬಹುದು. ಈಗ ನೆನಪಿಲ್ಲ.”

“ ನೋಡಿರಿ, ನೀವು ಇದೇ ಕೋರ್ಟಿನಲ್ಲಿ ಸಾಕ್ಷ್ಯ ಹೇಳಿದ್ದಿರಿ. ನೀವು [illegible]ದ್ದಿರೊ ಆಗ ಸತ್ಯ ಹೇಳಿದ್ದಿರೊ ”

ಪ್ರಶ್ನೆ[illegible]ದೇ “ ನೆನಪಿಲ್ಲ.”

ಈ “ ನೆನಪಿಲ್ಲ ”ದ ಮುಂದೆ ಸರಕಾರಿ ವಕೀಲರು ನಿರುಪಾಯರಾದರು. [illegible]ದಲ್ಲಿ ಸಾಕ್ಷಿಗಾರನು “ ನೆನಪಿಲ್ಲ ” ಅನ್ನುವಾಗ ನೆನಪಿದೆ ಎಂದು ಸಿದ್ಧ[illegible]ಡುವ ಶಾಸ್ತ್ರೀಯ ಶೋಧ ಈ ವರೆಗೆ ಹೊರಟಿದ್ದಿಲ್ಲ.

ಕೃಷ್ಣಭಟ್ಟರು [illegible] ಸಾಕ್ಷಿ ಹೇಳಿಸಿದ ಸಂಗತಿಯನ್ನು ಈಗಲೂ [illegible]ನ ಹಳೆಯ [illegible] ಸಿಪಾಯಿಗಳು ಹೇಳುತ್ತಾರೆ. ಸರಕಾರಿ

ರಿಕಾರ್ಡು ನಾಶಮಾಡಿದ ಆರೋಪದ ಮೇಲೆ ಒಬ್ಬ ಕುಲಕರ್ಣಿಯ ಮೇಲೆ ಕೇಸು ಹಾಕಲ್ಪಟ್ಟಿತು. ಊರೆಲ್ಲಾ ಅವರಿಗೆ ವೈರಿಗಳು. ಯಾರೂ ಅವರ ಕಡೆಯಿಂದ ಸಾಕ್ಷಿಗೆ ಬರಲು ತಯಾರಿರಲಿಲ್ಲ. ಕೊನೆಗೆ ಅವರು ಕೃಷ್ಣಭಟ್ಟರಲ್ಲಿ ಮೊರೆ ಇಟ್ಟರು. ಏನೂ ಹೆದರಬೇಡಿರಿ ಕುಲಕರ್ಣಿಯವರೇ, ಸಾಕ್ಷಿ ಹೇಳಲಿಕ್ಕೆ ನಿಮ್ಮ ಊರಿನವರು ಯಾರೂ ಸಿಗದಿದ್ದರೆ ಅಷ್ಟೇ ಹೋಯಿತು. ಜ್ಞಾನದೇವ ಮಹಾರಾಜರು ಕೋಣನಿಂದ ವೇದ ನುಡಿಸಿದರಂತೆ. ನಾನು ನಮ್ಮ ಎಮ್ಮೆ ಕರುವಿನಿಂದ ಸಾಕ್ಷಿ ಹೇಳಿಸಿ ನಿಮ್ಮ ಊರವರಿಗೆ ನಾಚಿಕೆಯಾಗುವಂತೆ ಮಾಡುತ್ತೇನೆ—ಎಂತ ಹೇಳಿದರು.

ಕುಲಕರ್ಣಿ ಕೇಸಿನಲ್ಲಿ ತಾನು ತಾಲೂಕ ಕಚೇರಿಗೆ ಬಂದಾಗ ಕೃಷ್ಣ ಭಟ್ಟರಲ್ಲಿ ಉಳಕೊಂಡಿದ್ದೆ. ಕಾಗದ ಪತ್ರಗಳನ್ನು ಹೊರಗೆ ಚಾವಡಿಯಲ್ಲಿಟ್ಟು ಊಟಮಾಡಲು ಒಳಗೆ ಹೋದಾಗ ಅವರ ಎಮ್ಮೆಕರು ಹಗ್ಗ ಬಿಡಿಸಿಕೊಂಡು ಬಂದು ಎಲ್ಲಾ ಕಾಗದ ಪತ್ರ ತಿಂದುಹಾಕಿತು. ಆದ್ದರಿಂದ ತನ್ನ ತಪ್ಪೇನೂ ಇಲ್ಲ. ತಾನು ನಿರ್ದೋಷಿ ಅಂತ ಹೇಳಿಕೆ ಕೊಟ್ಟ.

ಇವರ ಹೇಳಿಕೆ ಮುಗಿದ ಕ್ಷಣದಲ್ಲಿ ಕೃಷ್ಣಭಟ್ಟರು ಒಂದು ಎಮ್ಮೆ ಕರುವನ್ನು ಕೋರ್ಟಿನೊಳಗೆ ಅಟ್ಟಿಕೊಂಡು ಬಂದರು. ಅದನ್ಯಾಕೆ ತಂದಿರೊ ಎಂತ ಮೆಜಿಸ್ಟ್ರೇಟರು ಕೇಳಿದ್ದಕ್ಕೆ ಕುಲಕರ್ಣಿಯವರ ಡಿಫೆನ್ಸ ಸಾಕ್ಷಿ ಸಾಹೇಬರೇ ಎಂತ ಹೇಳಿದರು. ಹಾಗು ಮರುಮಾತಿನ ಹಾದಿ ನೋಡದೆ ಎಲ್ಲರೂ ಕಾಣುವಂತೆ ಅದರ ಎದುರಿಗೆ ಒಂದು ಕಾಗದ ಹಿಡಿದರು. ಆ ಕರು ಕಾಗದವನ್ನು ಗಪಗಪನೆ ತಿನ್ನಲು ತೊಡಗಿತು.

ಕೊಟ್ಟಮಾತಿನಂತೆ ಕರುವಿನಿಂದ ಸಾಕ್ಷಿ ಹೇಳಿಸಿ ಕೃಷ್ಣಭಟ್ಟರು ಕುಲಕರ್ಣಿಯನ್ನು ಬಿಡಿಸಿದರು.

ಇದರ ಸಲುವಾಗಿಯೇ ಅವರು ತಮ್ಮ ಎಮ್ಮೆ ಕರುವಿಗೆ ದಿನಾಲೂ ಹಿಂಡಿ, ಬೆಲ್ಲ ಸವರಿದ ಕಾಗದವನ್ನು ಬಾಯಮುಂದೆ ಹಿಡಿದು ತಿನ್ನಿಸುವ ಅಭ್ಯಾಸ ಮಾಡಿದ್ದರು. ಹಾಗಾಗಿ ಅದು ಅದೇ ಅಭ್ಯಾಸದಿಂದ ಕಾಗದ ಕಂಡೊಡನೆ ತಿನ್ನಹತ್ತಿತು.

ಕೆಲಸವಿಲ್ಲದ ವಕೀಲರ ನಿರಾಶೆಯ ಅಳುಮೋರೆ ನೋಡಿ ಕೃಷ್ಣಭಟ್ಟರು ಯಾವಾಗಲೂ ಹೇಳುತ್ತಿದ್ದರು. “ಅಳುಮೋರೆಯಿಂದ ವಕೀಲಿ ನಡೆಸುವುದು

ಸಾಧ್ಯವಿಲ್ಲ. ವಕೀಲರಾಗಿ ಬಾಳಬೇಕೆನ್ನುವವರು ನಗುತ್ತಾ ಇರಬೇಕು. ಕೋರ್ಟಿನಲ್ಲಿ ನಗದವರು ಇನ್ನೆಲ್ಲಿ ನಗುತ್ತೀರಪ್ಪಾ ನೀವು."

ಜೀನೆವಾಲೆ ಹಸತೆ ಹಸತೆ ಜೀನಾ ಈ ಭಾಷಣ ಕೇಳಿದವರಿಗೆಲ್ಲಾ ನನ್ನ ಸೂಚನೆ ಏನಂದರೆ " ಜೀವನ ಸಂಗ್ರಾಮದಿಂದ ಬೇಸತ್ತಿದ್ದರೆ ನಮ್ಮ ಕೋರ್ಟುಗಳಿಗೆ ಬರ್ರಿ. ಹೊಟ್ಟೆ ತುಂಬಾ ನಗುವಿರಂತೆ. "

**—ಎಚ್. ಆರ್. ತಲಚೇರಿಕರ**

# ಕ್ಲಾಸ್‌ರೂಮು

" ನಗೆಯಿರದ ಎಡೆಯಿಲ್ಲ " ಎಂದು ಹೇಳಿದಾಗ ಯಾರಿಂದಲೂ ಭಿನ್ನಾಭಿಪ್ರಾಯವುಂಟಾಗದು. ಏಕೆಂದರೆ ನಗು ಅಳುವಿನಂತೆ ಅತ್ಯಂತ ಸ್ವಾಭಾವಿಕವಾದುದು. ಅದಕ್ಕೆ ದೇಶ, ಕಾಲ, ಸ್ಥಲಗಳ ನಿಯತಿ-ನಿಯಮಗಳಿಲ್ಲ. ಅದು ಸ್ವಚ್ಛಂದ. ಆದರೆ ಇನ್ನುಳಿದ ಎಡೆಗಳಲ್ಲಿದ್ದಂತೆ ವರ್ಗ-ಕೋಣೆಯಲ್ಲೂ ನಗುಯಿದೆಯೆಂದಾಗ ಮಾತ್ರ ಎಷ್ಟೋ ಜನ ಬೆಚ್ಚಿ ಬೀಳಬಹುದು. ವರ್ಗದ ಕೋಣೆಗೂ ಹಾಸ್ಯಕ್ಕೂ [illegible]ಗಜಾಂತರವೆಂಬುದು ಅವರ ಅಭಿಪ್ರಾಯ. ಹೀಗೇಕೆ ? ಇದಕ್ಕೆ ಹಿನ್ನೆಲೆಯಾ ಕೆಲವು ಮಾತುಗಳನ್ನು ತಿಳಿದುಕೊಳ್ಳಬೇಕು.

ಶಾಲೆ, ಶಿಕ್ಷಕ, ಗುರು-ಶಿಷ್ಯರ ಸಂಬಂಧ' ಇವುಗಳ ಬಗೆಗೆ ಸಾಮಾನ್ಯ ಜನರ ಕಲ್ಪನೆಯೇ ಬೇರೆ. **The whining school boy creeping like snail, un-willingly to school.** ಮನಸ್ಸಿಲ್ಲದ ಮನಸ್ಸಿನಿಂದ ಶಾಲೆಯತ್ತ ಜೋಲು ಮೋರೆಯಿಂದ ಕಾಲು ಹಾಕುತ್ತಿರುವ ವಿದ್ಯಾರ್ಥಿ ಎಂದು ಹೇಳಿದ Shakespeare ನನ್ನೊಳಗೊಂಡು ಎಲ್ಲರಿಗೂ ಶಾಲೆ ವಿದ್ಯಾರ್ಥಿ ಇವರುಗಳ ಬಗೆಗೆ ಅತಿರಂಜಿತ ವಿಚಾರಗಳೇ. ಶಾಲೆಯೆಂದರೆ ಸೆರೆಮನೆ. ಶಾಲಾ ಜೀವನವೆನ್ನುವುದು ಸತ್ರಮ ಬಂದೀವಾಸ. ಅದೊಂದು ಗೋಳಿನ ಕಂತೆ. ಇಲ್ಲಿ ನಗೆಗೆ, ಹಾಸ್ಯಕ್ಕೆ ವಿನೋದಕ್ಕೆ, ಎಡೆಯುಂಟೇ ? ಇಲ್ಲಿ ಬೇಕಾದರೆ, ರೌದ್ರ, ಭೀಭತ್ಸ, ಕರುಣ ರಸಗಳಿಗೆ ಅವಕಾಶವುಂಟು. ಆದರೆ ಹಾಸ್ಯಕ್ಕೆ ಹೊರತು ಶಾಲೆಯ ಆವರಣ. ಇಲ್ಲಿ ಭಯ ಹೆಚ್ಚು. ವಿನಯ ಕೃತಕ. ಭಯದಿಂದ ನಯ ಎಂತಲೆ ಗುರು-ಶಿಷ್ಯ ಸಂಬಂಧ ಹಾರ್ದಿಕವಾಗಿರಲಾರದು, ಎಂಬುದೀಗ, ಇವರ ಮತ. ಗುರು, ಶಿಕ್ಷಕ ಈ ಶಬ್ದಗಳಿಗೆ ಅವರು ಹೇಳುವ ವ್ಯಾಪ್ತಿ ತುಂಬ ಮೋಜಿನವು. ಗುರ್ ಎನ್ನುವವ ಎಂದರೆ ಜೆಪರಿಸುವವ ಗುರು ; ಶಿಕ್ಷಿಸುವವ ಅರ್ಥಾತ್ ದಂಡಿಸುವವ ಪೀಡಿಸುವವ ಅನ್ನಬೇಕಾದರೆ ಅವನೇ ಶಿಕ್ಷಕ. ಎಂತಲೆ ಮಕ್ಕಳಿಗೆ ಶಾಲೆಗೆ ಹೋಗುವುದೆಂದರ ಜೀವ ಹಿಂಡಿದಂತೆ—

**Creeping like snail, un-willingly to school.** ಮನಸ್ಸಿಲ್ಲದ ಮನಸ್ಸಿನಿಂದ ಹಾದೀ ತುಳಿಯುವುದು. ಇಂಥ ಕಲ್ಪನೆ ಜನಸಾಮಾನ್ಯರಲ್ಲಿರುವಾಗ "ವರ್ಗ–ಕೋಣೆಯಲ್ಲೂ ನಗೆಯುಂಟೆ"ಂದು ಹೇಳಹೊರಟರೆ ಯಾರೊಬ್ಬರೂ ಆಶ್ಚರ್ಯಪಟ್ಟುಕೊಳ್ಳುವಂತಿದೆ.

ಹಿಂದೊಮ್ಮೆ ಇಂಥ ವಾತಾವರಣವಿದ್ದಿರಬಹುದೇನೋ! ಅದು ಬೆತ್ತದ ಯುಗ. **Spare the rod, spoil the child** ಎಂಬುದು ಅಂದಿನ ಶಿಕ್ಷಣದ ಸೂತ್ರ. ಅದೇಕೆ? ಇಂಗ್ಲಂಡಿನಲ್ಲಿ **Oxford, Cambridge** ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು **M.A.** ಪ್ಯಾಸು ಮಾಡಿದಾಗ, ಕೊಡ ಲಾಗುತ್ತಿರುವ ಅವರ ಡಿಗ್ರಿಯ ಮೇಲಿನ ಮುದ್ರಿಕೆಯಲ್ಲಿ **Birch** ಗಿಡದ ಟೊಂಗೆಯ ಚಿಹ್ನವಿರುತ್ತದಂತೆ. ಅದರ ಅರ್ಥ ಅಂದಿನಿಂದ ವಿದ್ಯಾರ್ಥಿಗಳನ್ನು ಹೊಡೆಯುವ ಅಧಿಕಾರ ಬಂದಿ ಎಂದಿರಬಹುದೇನೋ!– ಹಿಂದೇನೇ ಇರಲಿ. ಇಂದು ಪರಿಸ್ಥಿತಿ ಬದಲಿಸಿದೆ. ಬೆತ್ತದ ಪೆಟ್ಟಿಕೆಯಿಂದ ಮಕ್ಕಳ ಸದ್ದನ್ನಡಗಿಸು ವುದೇ ಶಿಸ್ತು ಎಂಬ ಕಲ್ಪನೆಗೆ ತಿಲಾಂಜಲಿಯನ್ನಿತ್ತಾದಾಗಿದೆ. ಶಾಲೆಯಲ್ಲಿ ಮಕ್ಕಳ ಜೀವನವನ್ನು ಶಕ್ಯವಿದ್ದಷ್ಟು ಆನಂದಮಯವಾಗಿ ಮಾಡಿರಿ ಎಂದು ಹೇಳಿದ ಸುಪ್ರಸಿದ್ಧ ಶಿಕ್ಷಣ ಶಾಸ್ತ್ರಜ್ಞನಾದ **Froebel**ನ ಮಾತನ್ನೇ ಇಂದು ಎಲ್ಲರೂ ಪುಷ್ಟೀಕರಿಸುತ್ತಾರೆ. ಆನಂದದ ಸ್ವರೂಪವಾದ ಉತ್ತಮ ಹಾಸ್ಯಜ್ಞಾನದ ಬಾಗಿಲು ಎಂಬುದನ್ನು ಇಂದು ಎಲ್ಲರೂ ಅರಿತಿದ್ದಾರೆ. ಎಂತಲೇ ಸಾಧ್ಯವಾದಷ್ಟು ವಾತಾವರಣವನ್ನು ಆನಂದಮಯವನ್ನಾಗಿ ಇಡಲು ಪ್ರಯತ್ನಿಸುವುದುಂಟು. ಹೀಗಿರುವುದರಿಂದಲೇ ಇಲ್ಲಿ ನಗೆಗೆ ಎಡೆಯಿದೆ. ವರ್ಗ–ಕೋಣೆಯಲ್ಲಿಯೂ ನಗೆಯಿದೆ.

ವರ್ಗದ ಕೋಣೆಯೆಂದೆನಲ್ಲವೆ? ಎಂದಮೇಲೆ ಅಲ್ಲಿ ಕೋಣೆಯಿದೆ, ಶಿಕ್ಷಕ ನಿದ್ದಾನೆ. ವಿದ್ಯಾರ್ಥಿಗಳಿದ್ದಾರೆ; ಅಲ್ಲಿ ಕೆಲವೊಂದು ಘಟನೆಗಳು ನಡೆಯು ತ್ತಿರುತ್ತವೆ. ಇವುಗಳಲ್ಲಿ ಒಂದೊಂದು ಘಟಕವೂ ನಗೆಯ ವಸ್ತುವಾಗಬಹುದು. ವರ್ಗದ ಕೋಣೆಯನ್ನೇ ತೆಗೆದುಕೊಳ್ಳಿರಿ. ಕೋಣೆಗೆ ಬಾಗಿಲುಗಳುಂಟು. ಕಿಡಕಿಗಳುಂಟು. ಗೋಡೆಗೆ ತಗುಲಿಸಿದ ಚಿತ್ರಗಳುಂಟು; ಕರೇಹಲಗೆ, ಖುರ್ಚಿ, ಮೇಜು, ಡೆಸ್ಕು ಇವೆಲ್ಲ ಉಂಟಷ್ಟೆ? ಅಹುದು; ಇವಕ್ಕೂ ನಗೆಗೂ ಏನು ಸಂಬಂಧ? ಇಲ್ಲಿ ನಗೆ ಹೇಗೆ ಎನ್ನಬಹುದು. ಹೀಗೆ ತಿಳಿಯಿರಿ,

ಬಾಗಿಲು ತೆರೆಯಲು ಶಕ್ತಿಯನ್ನು ಪಯೋಗಿಸಿದಾಗ ಅವು ಕಿತ್ತಿಬಂದರೆ? ಕಿಡಕಿ ಗಾಳಿಗೆ ಪಟ-ಪಟ ಎಂದು ಬಡಿದು ಗುರುಗಳು ರೇಗಿದರೆ? ಖುರ್ಚಿಗಾಗಲಿ ಮೇಜಿಗಾಗಲಿ ಮೂರು ಕಾಲು ಸರಿಯಾಗಿದ್ದು ಇನ್ನೊಂದು ಅಂತರಿಕ್ಷದಲ್ಲಿ ನೇತಾಡುತ್ತಿದ್ದು ಯಾರಾದರೂ ತನ್ನನ್ನಾಶ್ರಯಿಸಲು ಬಂದಾಗ ಅದು ಅವರನ್ನು ನರಕಕ್ಕೆ ತಳ್ಳಿದರೆ? ಶಿಕ್ಷಕ ಬರೆವಾಗ ಬೋರ್ಡು ಜಾರಿ ತಲೆಯ ಮೇಲೆ ಬಿದ್ದರೆ? ಇಲ್ಲವೆ ನನ್ನನ್ನೇಕೆ ವ್ಯರ್ಥವಾಗಿ ಹಿಂಸಿಸುತ್ತಿದ್ದೀಯಾ ಎಂಬ ಅದು ಕಿರುಚಿಕೊಳ್ಳುತ್ತಿದ್ದರೆ ಆಗ ತುಂಟನಗೆ ತುಟಿ ಮೀರದಿದ್ದೀತೇ?

ಇನ್ನು ವಿದ್ಯಾರ್ಥಿಗಳನ್ನೇ ತೆಗೆದುಕೊಳ್ಳಿ. ಮಕ್ಕಳು ನಗೆಯ **Fountain head** ಆಗಿವೆ. ಅವರು ಕೇಳುವ ಪ್ರಶ್ನೆಗಳು ಕೊಡುವ, ಉತ್ತರಗಳು, ಕೂಡುವ ಬಗೆ, ಆಡುವ ಮಾತು ಎಲ್ಲದರಲ್ಲೂ ನಗೆಗೆ ಎಡೆಯುಂಟು. ಒಮ್ಮೆ ಒಬ್ಬ ವಿದ್ಯಾರ್ಥಿಗೆ—ಆತ ಮರೆವಿನ ಸ್ವಭಾವದವ—ಅವರ ತಾಯಿ ತಲೆಶೂಲೆಗೆ ಔಷಧ ತರಲು ಹೇಳಿದ್ದರಂತೆ. ಅದನ್ನೇ ಜಪಿಸುತ್ತ ಆತ ವರ್ಗದಲ್ಲಿ ಕಾಲಿಟ್ಟ. ಇತಿಹಾಸ ಶಿಕ್ಷಕರು ಪ್ರಶ್ನೆಮಾಡಿದರು. ಶಿವಾಜಿ ಏತರಿಂದ ಸತ್ತ? ಎಲ್ಲಿ—ಯಾರು ಹೇಳುವಿರಿ? ನಮ್ಮ ವಿದ್ಯಾರ್ಥಿ ಎದ್ದು ನಿಂತು "ತಲೆಶೂಲೆಯಿಂದ" ಎಂದು ಉತ್ತರಕೊಟ್ಟ. ಇವನ ತಲೆಯನ್ನೆ ಶೂಲಕ್ಕೇರಿಸಲಾ? ಎಂದು ಯೋಚಿಸಿಕೊಂಡಿರಬೇಕು ಗುರುಗಳು. ಆದರೆ ಮರುಕ್ಷಣದಲ್ಲಿ ಖೊಳ್ಳೆಂದು ನಕ್ಕರು. ಎಲ್ಲರೂ ದನಿಗೂಡಿಸಿದರು. ಇನ್ನೊಬ್ಬ ವಿದ್ಯಾರ್ಥಿ ಪರೀಕ್ಷೆಯಲ್ಲಿ ಪಾಸಾಗಲೆಂದು ಒಂದು ಉಪಾಯ ಮಾಡಿದ್ದ. ಸಹಾಯಕ ಟಿಪ್ಪಣಿಗಳನ್ನು ಕಾಗದದ ಮೇಲೆ ಬರೆದು ಆ ಕಾಗದವನ್ನು ತನ್ನ ಚಣ್ಣಕ್ಕೆ ಅಂಟಿಸಿಕೊಂಡು ಮೇಲೆ ಉದ್ದನ್ನ ಅಂಗಿಯನ್ನೇ ಇಳಿಬಿಟ್ಟಿದ್ದ. ಆತನ ತುಂಟತನ ಹೊರಬಿದ್ದಾಗ ಎಲ್ಲರು ಹೊಟ್ಟೆ ಹುಣ್ಣಾಗುವಂತೆ ನಕ್ಕರು. ಭೂಗೋಲು ಶಿಕ್ಷಕರು ಗ್ಲೋಬನ್ನು ಮೇಜಿನ ಮೇಲಿರಿಸಿ "ಭೂಮಿ ದುಂಡಗಿದೆ ಎನ್ನಲು" ಇನ್ನೇನಾದರೂ ಕಾರಣಗಳಿದ್ದರೆ ಹೇಳಿರಿ ಎಂದು ಹೇಳಿದಾಗ ಒಬ್ಬ ತುಂಟ ಎದ್ದು ನಿಂತು Sir ಮೇಜಿನ ಮೇಲೆ ಗ್ಲೋಬ ನೋಡಿರಿ ಅದು ದುಂಡಗಿದೆ. ಆದುದರಿಂದ ಪೃಥ್ವಿ ದುಂಡಗಿರಬೇಕು ಎಂದ. ಇನ್ನೊಬ್ಬ ಇದಕ್ಕೂ ಮುಂದೆ ಹೋಗಿ "Sir ನಿಮ್ಮ ಪ್ರಶ್ನೆ ತಪ್ಪು. ಭೂಮಿ ದುಂಡಗಿಲ್ಲ; ತತ್ತಿಯ ಆಕಾರದ್ದಿದೆ" ಎಂದ. ಗುರುಗಳನ್ನೊಳಗೊಂಡು ಎಲ್ಲರೂ

ನಕ್ಕರು. ಇನ್ನೊಂದು ಸಲ ಓರ್ವ ವಿದ್ಯಾರ್ಥಿಗೆ ಅದೇಕೋ ಮನೆಗೆ ಹೋಗ ಬೇಕಿದ್ದಿತು. ತುಸು ವಿಚಾರ ಮಾಡಿ ಎದ್ದು ನಿಂತು " Sir money order ಬಂದಿದೆ "ಯೆಂದು ನೆವಹೇಳಿದ. ಹೋಗೆಂದರು ಗುರುಗಳು. ಹೋದವ ಮರಳಿ ಬರಲಿಲ್ಲ. ಮರುದಿವಸ ಗುರುಗಳು ' ಏನೋ ನಿನ್ನೆ money order ಎಂದು ಹೇಳಿಹೋದವ ತಿರುಗಿ ಬರಲೇ ಇಲ್ಲವಲ್ಲ ' ಎಂದು ಕೇಳಿದಾಗ " ಅಹುದು Sir, money order–ಮನೆಯಿಂದ ಆರ್ಡರ ಬಂದಿತ್ತು Sir " ಎಂದ. ಎಲ್ಲರಿಗೂ ನಗು. ಹೀಗೆಯೇ ಇನ್ನೂ ಎಷ್ಟೋ ಪ್ರಸಂಗಗಳನ್ನು ಉದಾಹರಿಸ ಬಹುದು. ಕೆಲವು ವಿದ್ಯಾರ್ಥಿಗಳು ತುಂಬ ಅಜ್ಞಾನದಿಂದ, ಪ್ರಶ್ನೆಗಳಿಗೆ ಉತ್ತರ ಕೊಟ್ಟಾಗ ನಗೆಯುಕ್ಕುವುದುಂಟು. Direct Method ಎಂಬು ದೊಂದು ಪಾಠ ಕಲಿಸುವ ಉಪಕ್ರಮವಿದೆ. ಇಲ್ಲಿ ಗುರುಗಳು ನೇರವಾಗಿ ಅರ್ಥವನ್ನು ಹೇಳದೆ, ಕುಶಲ ಪ್ರಶ್ನೆಗಳ ಮುಖಾಂತರವಾಗಿ, ಅಭಿನಯ ದಿಂದಾಗಿ, ಚಿತ್ರ–ಚಿತ್ರಣಗಳಿಂದಾಗಿ ಅರ್ಥವನ್ನು ಮಕ್ಕಳು ತಾವೇ ಗ್ರಹಿಸು ವಂತೆ ಮಾಡುವುದುಂಟು. ಹಾಗೆ ಒಮ್ಮೆ ಓರ್ವ ಶಿಕ್ಷಕ–ಆತ ಹೊಸಬ– ಅಂದಿನ ಪಾಠವನ್ನು ಆರಂಭಿಸಲು stand-up ಎಂದು ಅಂದ. ಎಲ್ಲ ಎಳೆಯರು ಏಕಕಂಠದಿಂದ stand-up ಎಂದು ಆತನಿಗೇ ಹೇಳಿದರು. ರೊಚ್ಚಿನಿಂದ ಆತ ' you are fools ' ಎಂದ. ಪಾಪ ಮಕ್ಕಳು ಏನೊಂದೂ ತಿಳಿಯದೆ " you are fools " ಎಂದು ಪ್ರತಿಯಾಡಿದರು. ತನ್ನ ತಪ್ಪು ತಿಳಿದ ಶಿಕ್ಷಕ ತಾನೂ ನಕ್ಕ. ಹೀಗೆ ವಿದ್ಯಾರ್ಥಿಗಳು ತಮ್ಮ ತುಂಟತನ, ಜಾಣತನ, ಅಜ್ಞಾನಗಳಿಂದಾಗಿ, ಆಗಾಗ ನನಗೆ ಎಡೆಯನ್ನುಂಟುಮಾಡುವದುಂಟು.

ಇನ್ನು ಶಿಕ್ಷಕನತ್ತ ಹೊರಳೋಣ. ಎಷ್ಟೋ ಸಲ ಶಿಕ್ಷಕನಾದವನ Figure ಆಕಾರ—ಆಕೃತಿಗಳೇ ನಗೆ ತರುವಂತಹವಿರುತ್ತವೆ. ಕೊಬ್ಬು ದೇಹದ ಶಿಕ್ಷಕ ವರ್ಗದಲ್ಲಿ ಕಾಲಿಟ್ಟು ಖುರ್ಚಿಯ ಮೇಲೆ ಕೂಡ ಬೆಳಿಸಿದಾಗ ಖುರ್ಚಿ ಮುರಿದರೆ ಹೇಗಾದೀತು ? ಅದೇ ಇನ್ನೊಬ್ಬ ಶಿಕ್ಷಕ ತುಂಬ ಬಡಕಲು, ನಿರ್ಬಲ ಎಂದಾಗ ವಿದ್ಯಾರ್ಥಿಗಳು ಆತನನ್ನು ಪರಿಪರಿಯಾಗಿ ಪೀಡಿಸಿ ಆನಂದ ಹೊಂದುವುದುಂಟು. ನನಗೊಂದು ಪ್ರಸಂಗದ ನೆನಪಿದೆ. ಓರ್ವ ಶಿಕ್ಷಕ ಕೇವಲ ನಾಲ್ಕು ಅಡಿ ಎತ್ತರ. ಆತನ ತಲೆ ತುಂಬ ದೊಡ್ಡದು. ವರ್ಗ ದಲ್ಲಿ ಮೊದಲು ದಿನ ಕಾಲಿಟ್ಟಾಗ ನಮ್ಮಲ್ಲಿಯ ಓರ್ವ ವಿದ್ಯಾರ್ಥಿ ಆತನದೊಂದು

ವ್ಯಂಗ್ಯ ಚಿತ್ರವನ್ನು Board ನ ಮೇಲೆ ಬರೆದಿರಿಸಿದ್ದ. ಅದನ್ನು ಕಂಡಾಗ ಶಿಕ್ಷಕ ರೇಗಲಿಲ್ಲ. ವಿನೋದ ಪ್ರವೃತ್ತಿಯ ಆತ ನೋಡಿ ನಕ್ಕ, ನಾವೂ ನಕ್ಕೆವು.

ಇನ್ನು ಕೆಲವು ಶಿಕ್ಷಕರಲ್ಲಿ Stammering ಗುಗ್ಗುವದು, ಉಚ್ಚಾರ ದೋಷಗಳೇ ಮೊದಲಾದ ದೋಷಗಳಿರುತ್ತವೆ. ನಾಲಗೆ ಸರಿಯಾಗಿ ಹೊರ ಳುವದಿಲ್ಲ Square-root ಅನ್ನುವಲ್ಲಿ ಸ್ಕೇಗ–ಗೂಟ ಎಂದಾಗ, King ಅನ್ನುವಲ್ಲಿ ಚಿಂಗ ಎಂದಾಗ sit ಇದ್ದುದನ್ನು ಸೀಟ ಎಂದು ಎಳೆದಾಗ, Don't speak ಅನ್ನುವಾಗ ಡೋ–ಡೋ–ಡೋ....ಂಟ ಸ್ಪೀ....ಕ್–ನಗೆ ತುಟಿ ಮೀರದಿರುವುದೇ ? ಹಾಗೆಯೆ ಕೆಲವೊಂದು ಶಿಕ್ಷಕರಿಗೆ ಕೆಲವು ಚಟಗಳಿದ್ದು ಅವುಗಳಿಂದಾಗಿಯೂ ಒಮ್ಮೊಮ್ಮೆ ನಗೆಗೆ ಅವಕಾಶದೊರೆಯುತ್ತದೆ. ಒಬ್ಬ ಶಿಕ್ಷಕನಿಗೆ ಹುಬ್ಬು ಹಾರಿಸುವ ಚಟವಿದೆಯೆನ್ನಿ ; ವಿದ್ಯಾರ್ಥಿನಿಯರತ್ತ ಹೊರಳಿ ಪ್ರಶ್ನೆ ಮಾಡಿ ಹುಬ್ಬು ಹಾರಿಸಿದನೆಂದರೆ ಅದಾರು ನಗುವನ್ನು ತಡೆಹಿಡಿಯ ಬಲ್ಲರು ? ಗೊರೂರು ರಾಮಸ್ವಾಮಿಯವರು ವರ್ಣಿಸಿದ ಒಬ್ಬ ಉಪಾಧ್ಯಾಯನ ಕತೆಯನ್ನು ಈ ಪ್ರಸಂಗದಲ್ಲಿ ಹೇಳದಿರಲಾರೆ. ಓರ್ವ ಉಪಾಧ್ಯಾಯರಿಗೆ ನಶ್ಯದ ಚಟವಿದ್ದಿತಂತೆ. ಅಂದು ವರ್ಗದಲ್ಲಿದ್ದಾಗ ನಶ್ಯ ಮುಗಿದಿದ್ದಿತಂತೆ. ಹುಡುಗರ್ಮೇಲೆಲ್ಲ ರೇಗಿಪರಂತೆ. ಸುಣ್ಣ ಬೆರಿಸಿ ನಶ್ಯ ತೀಡಬೇಕೆಂದು ಕಿಡಿಕಿಯ :ಬಳಿ ಬಂದು ನಿಂತಾಗ ಗಾಳಿಯಿಂದ ಎಲ್ಲ ನಶ್ಯ ಹಾರಿಹೋಯಿತಂತೆ. ಹುಡುಗರು ನಕ್ಕದ್ದರಿಂದ ಇನ್ನೂ ರೇಗಿ ಅವರನ್ನೆಲ್ಲ ಹೊಡೆದರಂತೆ ಇದರಂತೆ ಇನ್ನು ಬೇರೆ ಉಪಾಧ್ಯಾಯರುಗಳಿಗೆ ತಲೆ ತುರಿಸುವುದು, ತಂಬಾಕು ಅಗಿಯುವುದು, ಕೀಲಿಕೈ ಚೇನು (ಸರಪಳಿ) ತಿರುಗಿಸುವುದೇ ಮೊದಲಾದ ಚಟಗಳಿದ್ದು, ಆವುದೇ ಕಾರಣದಿಂದ ಅವಕ್ಕೆ ಅಡ್ಡಿ ಬಂದಲ್ಲಿ ಅವರು ಗೊಂದಲ ದಲ್ಲಿ ಬೀಳುವುದುಂಟು. ಹಾಗಾದಾದ ವಿದ್ಯಾರ್ಥಿಗಳಿಗೆ ಎಲ್ಲಿಲ್ಲದ ಹಿಗ್ಗು.

ಕೊನೆಯದಾಗಿ ವಾರ್ಷಿಕ ತಪಾಸಣೆ (Inspection) ಯೊಂದು ಅತ್ಯಂತ ಮೋಜಿನ ಪ್ರಸಂಗ. ವಿದ್ಯಾರ್ಥಿಗಳಿಗಿಂತ ಶಿಕ್ಷಕನ ಪಾತ್ರವೇ ಇಲ್ಲಿ ಪ್ರಮುಖವಾದುದು. ಆತನ ಗೊಂದಲದಿಂದಾಗಿ ಅನೇಕ ವಿನೋದಪೂರ್ಣ ಪ್ರಸಂಗಗಳು ಉದ್ಭವಿಸುತ್ತವೆ. ಒಮ್ಮೆ ಭೂಗೋಲ ಶಿಕ್ಷಕ ಗಾಬರಿಯಿಂದ ಕೃಷ್ಣಾನದಿ ಪೂರ್ವದಿಂದ ಪಶ್ಚಿಮಕ್ಕೆ ಹರಿಯುವಂತೆ ತೋರಿಸಿದನಲ್ಲದೆ,

ದಾರ್ಜಿಲಿಂಗವನ್ನು ಮದ್ರಾಸದ ಅಕ್ಕಪಕ್ಕದಲ್ಲಿ ಕಂಡು ಹಿಡಿಯ ಹೊರಟು ಅಭೂತ ಪೂರ್ವ ಸಂಶೋಧಕನಾಗಿ ಎಲ್ಲರ ನಗೇಗಿಡಾದ. Science Teacher ನೊಬ್ಬ ಕಬ್ಬಿನ ಬಗೆಗೆ ಪಾಠ ಹೇಳಲೆಂದು ಕಬ್ಬಿನ ಹೊರೆಯನ್ನೇ ವರ್ಗದಲ್ಲಿ ತಂದಿರಿಸಿದ್ದ. ವಿನೋದ ಪ್ರಿಯನಾದ ಶಿಕ್ಷಣಾಧಿಕಾರಿ ಎನ್ರೀ ಮಾಸ್ತರೇ ದಿನವೂ ಈ ರೀತಿ ಮಾಡುತ್ತ ಹೋದರೆ ನಿಮ್ಮ ಸಂಬಳ ಮನೆಯನ್ನು ಮುಟ್ಟಬಹುದೊ ? ಎಂದಾಗ ಎಲ್ಲರಿಗೂ ನಗು. ಇನ್ನೋರ್ವ ಶಿಕ್ಷಕ Stumble ಎಂದರೆ ಎಡವು ಎಂಬ ಶಬ್ದವನ್ನು ಅಭಿನಯದ ಮೂಲಕ ಕಲಿಸಲು ಹೋಗಿ ನಿಜಕ್ಕೂ ಎಡವಿ ನೋವುಮಾಡಿಕೊಂಡ. ಆತನಿಗಾದ ವೇದನೆಯನ್ನು ಗುರುತಿಸಿದ ವಿದ್ಯಾರ್ಥಿಗಳು ನಗದಿರುವರೇ ಮತ್ತೋರ್ವ ಶಿಕ್ಷಕ Inspection ನಿಗಾಗಿ ಹೊಸದೊಂದು ಸಿಲ್ಕಿನ (ರೇಶಿಮೆಯ) ಕೋಟನ್ನು ಧರಿಸಿ ಬಂದಿದ್ದ, Tight, Tighter, Tightest ಎಂದರೆ ಬಿಗಿ, ಹೆಚ್ಚು ಬಿಗಿ, ಇನ್ನೂ ಬಿಗಿ ಎಂಬ ಶಬ್ದಗಳನ್ನು ಕಲಿಸ ಹೊರಟ. ಕೋಟನ್ನು ಬಿಗಿಯಾಗಿ ಹಿಡಿದು Tight ಎಂದ. ಇನ್ನು ಬಿಗಿಯಾಗಿರಿಸಿ Tighter ಎಂದ. ಅಲ್ಲಿಗೆ ನಿಲ್ಲದೆ ಇನ್ನೂ ಬಿಗಿಯಾಗಿರಿಸಿ Tightest ಎನ್ನುವ ಮೊದಲೇ ಚ–ರ್ ಎಂದು ಕೋಟು ಹರಿದೇ ಹೋಯಿತು. ಅಧಿಕಾರಿಯನ್ನೊಳಗೊಂಡು ಎಲ್ಲರೂ ಘೊಳ್ಳೆಂದು ನಕ್ಕರು.

ಹೀಗಿದೆ ಇಲ್ಲಿಯ ನಗೆಯ ಪ್ರಪಂಚ. ವರ್ಗದ–ಕೋಣೆಯಲ್ಲಿ ಸರಸ ಪ್ರಸಂಗಗಳುಂಟು. ಕೋಣೆ, ವಿದ್ಯಾರ್ಥಿಗಳು, ಶಿಕ್ಷಕ, ಇಲ್ಲಿಯ ಘಟನೆಗಳು ಇವರುಗಳಿಂದಾಗಿ ಇಲ್ಲಿ ನನಗೆ ಸಾಕಷ್ಟು ಎಡೆಯಿದೆ. ಇನ್ನು ಇಲ್ಲಿ ನಗೆ ಓತ ಪ್ರೋತವಾಗಿ ಹರಿಯದಿದ್ದರೂ–ಹಾಗೆ ಹರಿಯುವದಾದರೂ ಎಲ್ಲಿ–ಆಗಾಗ ಮಿಂಚಿಮಾಯವಾಗಿ, ನೀರಸವೆನಿಸಬಹುದಾದ ವಾತಾವರಣದಲ್ಲಿ ರಸನಿಮಿಷಗಳನ್ನುಂಟುಮಾಡಿ, ಏಕತಾನದಲ್ಲಿ ನಡೆದ ಬಾಳಿಗೊಂದು ಹೊಸ ಚೈತನ್ಯವನ್ನು ಕೊಡುತ್ತಿದೆ. ಈ ಬದುಕು (ಶಿಕ್ಷಕವೃತ್ತಿ) ಬರಿ ಭ್ರಮೆಯಲ್ಲವೆಂಬ ವಿಶ್ವಾಸವನ್ನು ಹುಟ್ಟಿಸುತ್ತದೆ. ಗುರು–ಶಿಷ್ಯರು ತಮ್ಮ ಅಂತರವನ್ನು ಮರೆತು ಒಂದುಗೂಡಿ ನಕ್ಕುನಲಿದ ದಿನಗಳ ಸವಿನೆನಪು ಎಂದೆಂದಿಗೂ ಮಾಸದಂತೆ ಉಳಿದಿರುವುದು ಪ್ರತಿಯೊಬ್ಬರ ಅನುಭವದ ಮಾತಾಗಿರಲಿಕ್ಕೆ ಸಾಕು. ಇಲ್ಲಿಯ ನಗೆ ಪ್ರಸಂಗಗಳು ಮೇಲ್ತರಗತಿಯವಾಗಿರಲಿಕ್ಕಿಲ್ಲ. ಆ ನಗೆ ಸಂಭಾವಿತ,

ಸಜ್ಜನಿಕೆಯ ನಗೆಯಾಗಿರಲಿಕ್ಕಿಲ್ಲ. ಆದರೆ ಅದು ಶುದ್ಧ ನಗೆ, ಕಪಟವರಿಯದ ಹೃದಯದಿಂದ ನೇರವಾಗಿ ಹರಿದು ಬಂದ ನಗೆ–ಗಂಗೆ ಅದು. ಈ ನಗೆಯಲ್ಲಿ ಅದ್ಭುತ ಶಕ್ತಿಯಿದೆ. ದುರ್ಬಲನಿಗೆ ಬಲ ಕೊಡುವ, ಅಸಹಾಯಕನಿಗೆ ಸಹಾಯ ನೀಡುವ ಸಂಜೀವಿನಿ ವಿದ್ಯೆಯದು. ತಾರಕಮಂತ್ರ, ಇದನ್ನು ಉಳಿಸಿ ಬೆಳಸಿ ಕೊಳ್ಳುವುದರಲ್ಲಿಯೇ ನಮ್ಮ ವಿದ್ಯಾ ಮಂದಿರಗಳ ಭವಿತವ್ಯವಡಗಿದೆ.

ಕೊನೆಯದಾಗಿ ಒಂದು ಮಾತು ವರ್ಗದಲ್ಲಿಯ ನಗೆ ಶಿಕ್ಷಕನನ್ನೇ ಹೆಚ್ಚಾಗಿ ಕೂಡಿದೆ. ಆತನಲ್ಲಿ ಹಾಸ್ಯ ಪ್ರವೃತಿ. ವಿನೋದಗಾರಿಕೆ ಇಲ್ಲದೆ ಹೋದರೆ ನಗೆಯ ಸೆಲೆ ಬತ್ತಿ ಹೋಗಬಹುದು. ಆತ ಸರ್ವಾಧಿಕಾರಿಯಂತೆ ಗದರಿಸಿ ಮಕ್ಕಳ ಸಹಜ ಪ್ರವೃತ್ತಿಯನ್ನು ಹತ್ತಿಕ್ಕಕೂಡದು. ಲಗ ಶಿಕ್ಷಣಶಾಸ್ತ್ರದ ಮೊದಲ ಸೂತ್ರವನ್ನೆ ಕಡೆಗಾಣಿಸಿದಂತಾದೀತು. ಸಾಮಾನ್ಯವಾಗಿ ಎಲ್ಲ ಶಿಕ್ಷಣ ತಜ್ಞರು ಶಿಕ್ಷಕನಲ್ಲಿ ಆಶಿಸುವುದು sense of humour ! ವಿನೋದ ವೃತ್ತಿ. ಈ Sense of humour ಆತನಲ್ಲಿಯ ಅತಿ ಗಾಂಭೀರ್ಯತೆಯನ್ನೂ, ಅತಿ ಸಂಪ್ರದಾಯ ಬದ್ಧತೆಯನ್ನೂ (Priggishness) ಹೋಗಲಾಡಿಸಿ, ಕಲಿಯುವವರಲ್ಲಿ ಕಲಿಸುವವನ ಬಗೆಗೆ ಸದ್ಭಾವನೆಯನ್ನೇ ಹುಟ್ಟಿಸುತ್ತದೆ. ಆದುದರಿಂದ ಗುರುಗಳಾದವರು ಇದನ್ನೇ ಸಾಧಿಸಬೇಕು. ಪ್ರಸಂಗಾನುಸಾರ ವಾಗಿ ವಿನೋದ–ಹಾಸ್ಯಗಳನ್ನು ಬೆರಸಿದಲ್ಲಿ ವರ್ಗದ ಕಾರ್ಯ ಸುಗುಮವಾಗಿ, ಶ್ರಮ ಪರಿಹಾರವಾಗುತ್ತದೆ. ಆದರೆ ಆತನ ವಿನೋದದಲ್ಲಿ ಸಭ್ಯತೆ—ಸಹಜತೆ ಬೇಕು. ಚುಚ್ಚುನಗೆ, ಹುಚ್ಚುನಗೆ, ಅಸಹ್ಯ—ಅಸಭ್ಯನುಡಿ, ಮೂದಲಿಕೆ ಇವು ಗಳಿಂದುದ್ಭವಿಸುವ ನಗೆಯಿಲ್ಲದಷ್ಟು ಒಳಿತು. ವರ್ಗದಲ್ಲಿಯ ನಗೆಯಲ್ಲಿ ನವುರೂ ನಾಜೂಕೂ ಬೇಕು. ಇಂಥ ವಾತಾವರಣದಲ್ಲಿ ಕಲಿಯುವುದೂ, ಕಲಿಸುವುದೂ ಸ್ವರ್ಗ–ಸುಖ. ಆ ಸುಖವನ್ನಾಶಿಸದವರಾರು ?

—ಎನ್. ಪಿ. ಕುಲಕರ್ಣಿ

# ತೆರೆಯ ಹಿಂದೆ

ನಾಟಕಗಳೊಳಗ ಎಷ್ಟೋ ತರ ಅವ ಅಂತ ಕಲಿತವರು ಹೇಳ್ತಾರ, ನಾಟಕ ನೋಡಿದ ನೀವೂ ಹಾಗೇ ಹೇಳಬಹುದು. ಐತಿಹಾಸಿಕ ಅಂತ, ಪೌರಾಣಿಕ ಅಂತ, ಸಾಮಾಜಿಕ ಅಂತ, ಟ್ರಾಜೆಡಿ ಅಂತ, ಕಾಮೆಡಿ ಅಂತ! ಇಷ್ಟು ಯಾಕ? ನಟರು ಸಹಿತ ಹೇಳಿಕೋತಾರ—ತಾವು ರೌದ್ರ ನಟರು, ಹಾಸ್ಯ ನಟರು, ಗಂಭೀರ ನಟರು, ಮತ್ತ ಎಂಥೆಂಥೊ ನಟರು ಅಂತ. ಇದನ್ನೆಲ್ಲ ಕೇಳಿ ನಿಮಗನ್ನಿಸಬಹುದು—ನಾಟಕದ ತಿಕೀಟದೊಳಗೂ ಕಾಂಪ್ಲಿಮೆಂಟರಿ, ಟ್ರಾಜೆಡಿಮೆಂಟರಿ ಅಂತ ತಿಕೀಟ ಸಹಿತ ಬ್ಯಾರೇ ಬ್ಯಾರೇತರದ್ದು ಇರ್ತಾವೇನೊ ಅಂತ. ಆದರೆ ಹೀಗೆಲ್ಲಾ ತಿಳಿಯೋದು ತಪ್ಪು. ಇಂಥಾ ವಿಚಾರಗಳನ್ನೆಲ್ಲ ಬ್ರಿಟಿಶರೆ ನಂ ತಲೀ ವಳಗ ಹಾಕಿದರು. ಈಗ ಬ್ರಿಟಿಶರು ಹೋದರು; ಆದರೂ ಅವರು ಕಲಿಸಿದ್ದು ಮರೆತಿಲ್ಲ. ನೋಡ್ತಾರ್ದಿ? ನನ್ಗೇ ಈಹೊತ್ತು "ಗ್ರೀನ್-ರೂಮ್" ಅಂಬೋದರ ಬಗ್ಗೆ ಮಾತಾಡ್ಲಿಕ್ಕೆ ಹೇಳ್ಯಾರ. ಗ್ರೀನ್ ರೂಮ್ ಅಂದರೆ ಕನ್ನಡದೊಳಗ "ಹಸರು-ಕೋಣೆ." ಇಂಗ್ಲಿಶ ಜನ ಬಿಳಿ ಬಣ್ಣದವರು. ಅವರು ನಾಟಕ ಮಾಡಬೇಕಾದರ ಹಸರು ಬಣ್ಣ ಬಡೆದುಕೋತಿದ್ದರೋ ಏನೋ! ಆದರೆ ನಮ್ಮಲ್ಲಿ ನಾಟಕ ಮಾಡೋದಾದರ ಬಿಳಿ ಇಲ್ಲ ಕೆಂಪು ಬಣ್ಣ ಹಚ್ಚಿಕೋಬೇಕು. ಅದಕ್ಕ ನಮ್ಮಲ್ಲಿ ಗ್ರೀನ್ ರೂಮ್ ಅಂಬೋದೇ ಇದ್ದಿರಲಿಲ್ಲ. ಒಂದು ರೀತಿಯಿಂದ ಹೇಳೋದಾದರ ನಮ್ಮಲ್ಲಿ ಗ್ರೀನ್ ಆಗಲಿ, ರೆಡ್ ಆಗಲಿ ರೂಮೇ ಬೇಕಾಗಿರಲಿಲ್ಲ ಬಣ್ಣ ಹಚ್ಚಿಕೊಳ್ಳಲಿಕ್ಕೆ. ನಮ್ಮದೇನು ಚಳಿಯ ದೇಶ ಅಲ್ಲ. ಇದಲ್ಲದೆ ಬಹಾಳ ಹಿಂದಿನ ಕಾಲದಾಗ ನಮ್ಮ ಹಿರೇರು ಹಗಲೊತ್ತೇ ನಾಟಕ ಮಾಡತಿದ್ದರು. ಆದರೇನು? ಮೊದಲಿಗೇ ಹೇಳಿದೆನಲ್ಲ? ಸಾಹೇಬ್ರು ಕಲಿಸಿದರು, ನಾವೂ ಕಲಿತಿವಿ; ನಾಟಕ ಮಾಡುವಾಗ ಬಣ್ಣ ಹಚ್ಚಿಕೊಂಡಿವಿ. ನಮ್ಮ ಬಣ್ಣದಾಗ ಆ ಬಣ್ಣ ಕೂಡಿ ಹಸರು ಬಣ್ಣ ಆಯ್ತು—ನಮ್ಮದೂ ಒಂದು ಗ್ರೀನ್-ರೂಮ್ ತಯಾರಾಯ್ತು!

ಇಷ್ಟೆಲ್ಲ ಹೇಳೋದಕ ಕಾರಣ ಅಂದ್ರ ನಾಟಕದೊಳಗ ಬ್ಯಾರೆ ಬ್ಯಾರೆ ತರ ಅನ್ನೋದು ಮುಖಕ್ಕ ಹಚ್ಚಿಕೊಂಡ ಬಣ್ಣದ ಹಾಂಗ ತೋರಿಕೆಗೆ ಮಾತ್ರ. ನಾಟಕದೊಳಗ ಇದ್ದದ್ದು ಒಂದೇ ತರ. ಅದು ಅಂದ್ರ—ಕಾಮೆಡಿ....ನಗಿಸೋ ನಾಟಕ. ಈ ಮಾತಿನ ಖಾತ್ರಿ ಬೇಕಾಗಿದ್ದರ ನಾವು ಬಣ್ಣ ಹಚ್ಚಿಕೊಳ್ಳೋವಲ್ಲಿ ಬಂದು ನೋಡಿರಿ. ಪಡದೇದ ಮುಂದೆ ನಡೆದದ್ದನ್ನ ನೋಡಿ ನೀವು ಅಳಬಹುದು, ಹುಬ್ಬಿಗೆ ಗಂಟು ಹಾಕಬಹುದು. ನಿಂಮ್ಮೈಗೆ ಮುಳ್ಳು ಬರಬಹುದು. ಆದರೆ ನನ್ನ ವಶೀಲಿಯಿಂದ ನೀವು ಮೆಲ್ಲಗೆ ಎದ್ದು ಒಂದಿಷ್ಟು ಒಳಗ ಬಂದು ನೋಡಿರಿ. ಬರ್ರಿ. ಗ್ರೀನ್‌ರೂಮ್ ದೊಳಗ ಬರ್ರಿ. ಹೆದರೋ ಕಾರಣಿಲ್ಲ. ಇದೇನು ಗರಡೀಮನಿ ಅಲ್ಲ. ಗ್ರೀನ್‌ರೂಮ್ ಇದು. ಜನ ಎಲ್ಲ ಪೈಲವಾನರ ಹಾಂಗ ಕಾಣಿಸ್ತಾರ ಅಲ್ಲ ಅಂತೀರೇನು ? ಅವರೇ ನಟರು ; ಈಗ ಬಣ್ಣ ಹಚ್ಚಿಕೊಳ್ಳೋವವರಿದ್ದಾರ, ವೇಷ ಮಾಡುವವರಿದ್ದಾರ, ಅವರ ಪೂರ್ವಸಿದ್ಧತೆ ಇದು. ಇಲ್ಲಿ ಕೂಡಬರ್ರಿ. ನಿಮಗ ಹೇಳ್ತೀನಿ ಮೋಜು ಎಲ್ಲ.

ನಮ್ದು ಕಂಪನೀ ನಾಟಕ ಅಲ್ಲ. ಸಂಜನ ಪಗಾರಕ್ಕಲ್ಲ, ಪ್ರೇಮಕ್ಕಾಗಿ ಪಾರ್ಟ ಮಾಡುವವರು. ಇಂಗ್ಲಿಶದೊಳಗ ಅಮೆಚುರ್ — ಕನ್ನಡದೊಳಗ ಯಮ್ಯಾಚೂರ ಅಂತಾರಲ್ಲರಿ ?—ಅಂಥ ಜನ ನಮ್ಮದು. ಒಮ್ಮೆ ಒಂದು ನಾಟಕಾ ಮಾಡತಿದ್ದಿವಿ. ರಾಜಾ–ರಾಣಿ ಪಾರ್ಟ ಇದ್ದವು. ಅದರೊಳಗ ಹೊಸ ನಾಟಕ. ಜನಾ ತುಂಬಿ ಬಂದಿತ್ತು. ಮಳಿಗಾಲದ ದಿನ. ಮದುವೆ–ಮುಂಜಿವಿ ಮುಹೂರ್ತ ಇದ್ದಿರಲಿಲ್ಲ. ಊರೊಳಗ ಖಾಲಿ ಬಿದ್ದ ಜರದ ಸಾಮಾನು ಎಲ್ಲಾ ತಂದಿದ್ದಿವಿ. ಎರಡು ಗಂಟೆ ಬಾರಿಸಿದಿವಿ. ಮೂರನೆಯ ಗಂಟೆಗೆ ಒಂದು ಮಿನಿಟು ಉಳಿದಿರಬೇಕು, ರಾಜಾ ಗಡಬಡಿಸಿ ಓಡತಾ ಬಂದು, " ಒಂದಿಷ್ಟು ಒಳಗ ಬರ್ರಿ " ಅಂದ. ಒಳಗ ಹೋದಿವಿ. " ಎಲ್ಲಾ ತಯಾರಿ ಆಗೇದಿಲ್ಲೊ ? ಗಂಟೆ ಹೊಡೀತೀವಿ " ಅನ್ನುವಾಗ ಯಾರೋ ಒಬ್ಬರು " ನೀವು ಗಂಟೆ ಹೊಡೆದರ ರಾಣಿ ಸಡ್ತು ಹೋಡೀತಾಳ " ಅಂದರು. ರಾಣೀನ್ನ ನೋಡಿದರ ಬರೇ ಮೈಮ್ಯಾಲೆ ಒಂದು ಚಡ್ಡಿ. ಮುಖಕ್ಕ ಬಣ್ಣ. ಇದೇನಾಯ್ತು ಅಂತೀರಾ ? ರಾಣಿ ಆಗೋವವನ ಮನಸಿಗೆ ತಕ್ಕ ಜರದ ಸೀರೆ ಸಿಕ್ಕಿರಲಿಲ್ಲ. ಅದಕ್ಕ ಅವ ಸೀರೆ ಉಟ್ಟುಗೊಳ್ಳೋದಿಲ್ಲ ಅಂತ ಸತ್ಯಾಗ್ರಹ ಹಿಡಿದಿದ್ದ ! ಮುಂದೆ ಮಾಡೋದೇನು ? " ನಮ್ಮ ನಾಟಕದ ರಾಣಿ ವೀರಪತ್ನಿ

ಇದ್ದಾಳೆ, ಹೀಗೇ ಇದ್ದರ ಶೋಭಿಸತದ. ಏನು ಅಡ್ಡಿ ಇಲ್ಲ, ಗಂಟೆ ಕೊಡೀರಿ ” ಅಂಥೇಳಿ ಧೈರ್ಯ ಮಾಡಿ ಗಂಟೆ ಕೊಡೆದಿವಿ. ಅಷ್ಟು ಮಾಡಿದವ್ಯಾಲೆ ರಾಣಿ ಮುಖ ಕಿಪ್ಪಚ ಸೀರೆ ಉಟ್ಟುಗೊಂಡು ಬಂದ ಅನ್ನಿರಿ. ಅದಕ್ಕ ಹೇಳೋದು— ನಿಮಗ ಹೊರಗ ಕೂತು ನೋಡಿದಾಗ ಇದು ಐತಿಹಾಸಿಕ ನಾಟಕ ಅನ್ನಿಸಿದರೂ ಒಳಗ ನಮಪಾಲಿಗೆ ಎಲ್ಲಾ ನಾಟಕ ಒಂದೇ ತರ.

ನಾವು ಸಣ್ಣವರಿದ್ದಾಗ ಗ್ರೀನ್‌ರೂಮಿನ ವ್ಯವಸ್ಥಾ ಒಳ್ಳೇದಿತ್ತು ಅಂತ ಅನ್ನಿಸ್ತದ. ನಮ್ಮ ಹಳ್ಳಿಯ ಹೊರಗ ಬೀರಪ್ಪನ ಗುಡಿ ಇತ್ತು. ಬಣ್ಣ ಹಚ್ಚಿ ಕೊಳ್ಳೋದು ಆ ಗುಡಿಯೊಳಗ. ಆಟದ ಅಟ್ಟ ಅಲ್ಲಿಂದ ಅರ್ಧ ಮೈಲು. ಬಣ್ಣ ಹಚ್ಚಿದವ್ಯಾಲೆ ಗುಡಿಯಿಂದ ಆಟದ ಅಟ್ಟದ ತನಕ ಹಲಿಗೆ–ಕಹಳೆಗಳ ಮೇಳವಾದ್ಯದ ಜೋಡಿ ಕುಣಿಯೋತ ಬರೋದು. ಹೀಗೆ ಮಾಡಿದರ ಕಡೆಗೆ ಏನಿಲ್ಲೆಂದರೂ ಹಚ್ಚಿದ ಬಣ್ಣ ಸ್ಟೇಜಿಗೆ ಬರೋದರೊಳಗೆ ಆರ್ತದ, ಕೂಡಿ ಕೋತವ ಇಲ್ಲಾ ಅಂದ್ರ ನಮ್ಮಲ್ಲಿ ಒಬ್ಬರದಾಧಾಂಗ ಫಜೀತಿ ಆಗೋದು. ಒಮ್ಮೆ ನಮ್ಮಲ್ಲಿ ಹೀಗ ಆಯ್ತು: ಮುಖಕ್ಕ ಬಣ್ಣ ಹಚ್ಚಿಕೊಂಡವ್ಯಾಲೆ ಕೈಗೂ–ಕಾಲಿಗೂ ಬಣ್ಣ ಹಚ್ಚಿಕೋಬೇಕಾಗತದ. ಇದು ನಿಮಗ ಗೊತ್ತದನೊ ಇಲ್ಲೊ. ಕೈಕಾಲಿಗೆ ಹಚ್ಚಿಕೊಳ್ಳೋದು ನೀರೊಳಗ ಕಲಿಸಿದ ಬಣ್ಣ, ನಮ್ಮ ಗೆಳೆಯರು ಮುಖಕ್ಕ ಯಾವಾಗೊ ಬಣ್ಣ ಹಚ್ಚಿಕೊಂಡಿದ್ದರು, ಅದು ಆರಲಿಕ್ಕೆ ಸಾಕಷ್ಟು ವ್ಯಾಳ್ಯಾ ಸಿಗಲಿ ಅಂತ. ಆದರೆ ಮುಂದ ಸ್ಟೇಜಿಗೆ ಹೋಗಲಿಕ್ಕೆ ಅವಸರ ಆಯಿತು. ಕೈಕಾಲಿಗೆ ಬಣ್ಣ ಹಚ್ಚಿಕೊಳ್ಳೋದು ಮರೀಬಾರ್ದು ಅಂತ ತಟ್ಟನೆ ಅದನ್ನೆ ಮೊದಲು ಹಚ್ಚಿಕೊಂಡರು. ಆಮ್ಯಾಲ ಅವಸರವಸರಲೆ ಶರ್ಟ ತೊಟ್ಟು ಕೊಂಡರು, ಧೋತರ ಉಟ್ಟುಕೊಂಡರು, ಸ್ಟೇಜಿನ ಮ್ಯಾಲೆ ಬಂದರು. ಅವರನ್ನ ನೋಡಿದ ಕೂಡಲೆ ಜನ ನಗಲಿಕ್ಕೆ ಹತ್ತಿದರು. ಯಾಕೆ ಅನ್ನೋದು ಸ್ವಲ್ಪ ಹೊತ್ತು ಯಾರಿಗೂ ತಿಳೀಲಿಲ್ಲ. ಮುಂದೆ ಗೊತ್ತಾಯಿತು, ಅವಸರವಸರಲೆ ಅರಿವೆ ಹಾಕಿಕೊಳ್ಳುವಾಗ ಕೈಕಾಲುಗಳ ನೀರ–ಬಣ್ಣ ಅಳಿಸಿಹೋಗಿತ್ತು; ಮ್ಯಾಲೆ ಮುಖ ಬಿಳ್ಳಗೆ, ಕೆಳಗೆ ಕಾಲು ಕಪ್ಪು–ರೇಲ್ವೇದ ತಾರ ಕಂಬದ ಹಾಗ ಕಂಡರು ಪಾಪ!

ಇವನ್ನೆಲ್ಲ ಕೇಳಿ ನಾಟಕ ಮಾಡೋದು ಮೋಜಿನ ಕೆಲಸ ಅಂತ ನಿಮಗ ಅನ್ನಿಸಿರಬಹುದು. ಅದೇನೂ ಸುಳ್ಳಲ್ಲ. ನಾಟಕ ಮಾಡೋವವರಿಗೆ ಯಾವಾ

ಗಲೂ ಪ್ರತಿಯೊಂದು ನಾಟಕದೊಳಗೂ ಏನಾದರೂ [illegible] ಸಂಗತಿ ಕಂಡ್ರೇ ಕಾಣಸ್ತದ. ನನು ಒಬ್ಬ ಗೆಳೆಯರು ಮುಂದಿನ ನಾಟಕ ಮಾಡುತ್ತಿದ್ದರು, ಪಾರ್ಟಿ ಆಯ್ತು, ಬಗ್ಗ ಆಯ್ತು, [illegible] ಆಯ್ತು. [illegible] ಒಪ್ಪೋ ಹಾಂಗೇ ಮಾಡತ್ತಿದ್ದರು. ಬಿಳಿ ಮುತ್ತು ಕರಿ [illegible] ಪಾರ್ಟಿ ಗಾಗಿ ತಕ್ಕ ಮೀಸ ತಯಾರ ಮಾಡಿಕೊಂಡಿದ್ದರು [illegible] ಸಂಧಿನಲಿ ಅಂತ ಮುಖದ ಮ್ಯಾಲೆ ಕರೆ ಗೆರೆನೂ ತೀಡಿಕೊಂಡಿದ್ದರು [illegible] ಪ್ರವೇಶ ಸುರು ಆಯ್ತು. ಹೊರಗಿನಿಂದ ಅವರು ಮನೀಗೆ ತಿರುಗಿಬರೋ ದೃಶ್ಯ ಒಂದದು. ಕೈಯೊಳಗಿನ ಬಡಗೀ ತೆಗೆದಿಟ್ಟರು, [illegible] ತೆಗೆದಿಟ್ಟರು, ಜನ ಮೊಟಕಿಗೆಯಿಂದ [illegible] ಮ್ಯಾಲಿನ ರುಮಾಲು ತೆಗೆದಿಟ್ಟರು ಒಂದೇಟಿಗೆ [illegible] ಒಂದೇ ಉಸಿರಿಗೆ [illegible] ಅಂತ ನಕ್ಕರು! [illegible] ೨೫ ವಯಸ್ಸಿನ ತಮ್ಮ ತಲೆಕೂದಲಿಗೆ [illegible] ಬಿಟ್ಟಿದ್ದರು !

[illegible] ಎಲ್ಲಾ ನಾಟಕಗಳೂ ಕಾಮೆಡಿನ್ ಅಂತ [illegible] ಇಲ್ಲ, ಸ್ಟೇಜಿನ ಮ್ಯಾಲೆ ಒಂದು [illegible] ನಾಟಕ [illegible] ಏನೇ ಆ [illegible] ಗಾದ್ರೂ ಸಾಗಿಸಿಕೋಬಹುದು, ನೋಡುವವರಿಗೆ [illegible] ಅನ್ನೋ ಆತ್ಮೀಯತೆ [illegible] ಗಳಿಗೆ ತಮ್ಮ [illegible] ಬುದ್ಧಿವಂತ [illegible] ನಮ್ಮ [illegible] ಗಂಟೆಗೆ ನಾಟಕ. ನಮಗೂ [illegible] ೮॥ ಗಂಟೆಗೆ ಅಲ್ಲಿ [illegible] ರಿಗೆ [illegible] ತಯಾ ರಾದವು. ಅದರ ಮುಂದ ಮಾಡೋದು! [illegible] ಮುಖ ತೊಳೆದುಕೋಬೇಕು, ಅದಕ್ಕ [illegible] ಆ [illegible] ರಾತ್ರಿ

ನಳಕ್ಕ ನೀರಿಲ್ಲ; ನೀರಿದ್ದರೂ ನಮಗೆ ಒಂದು ಪಾತ್ರೆ ಇಲ್ಲ, ಕಡೆಗೆ Fie ಅಂತ ಬರೆದು ಕೆಂಪು ಬಣ್ಣದ ಬಕೀಟು ಇಟ್ಟಿರ್ತಾರ ನೋಡಿರಿ, ಅದರೊಳಗಿನ ಉಸಕು ಸುರುವಿ, ಭಾವಿ ಹುಡುಕಿ ಒಂದು ಬಕೀಟು ನೀರು ಸೇದಿಕೊಂಡು ಬಂದು, ಬೆವರೊರೆಸಿಕೊಂಡೇ ಬಣ್ಣ ಹಚ್ಚಿಕೊಳ್ಳಬೇಕಾಯಿತು.

ಒಂದೇ, ಎರಡೇ, ಇಂಥಾ ಮೋಜಿನ ಎಷ್ಟೋ ಪ್ರಸಂಗ ನೆನಪಿಗೆ ಬರ್ತಾವ. ಇದೆಲ್ಲ ತ್ರಾಸು, ಮೋಜಲ್ಲ ಅಂತ ಅನ್ನೋಹಾಂಗಿಲ್ಲ; ಯಾಕಂದ್ರ ತ್ರಾಸು ಅಂತ ತಿಳಿದುಕೊಂಡರ ಮುಂದ ನಾಟಕ ಕೆಟ್ಟೀತು ಅಂತ ಹೆದರಿಕೆ. ನನ್ದೇ ಒಂದು ಅನುಭವ ಹೇಳ್ತೀನಿ. ಕೇಳಿರಿ; ಅದು ತ್ರಾಸೊ, ಮೋಜೊ ನೀವೇ ನೋಡಿರಿ. ನಾವು ಆಡೋ ಒಂದು ನಾಟಕದ ನಾಯಕ ಬಡವ ಅಂತ ಇತ್ತು, ನಾಟಕದ ಪುಸ್ತಕದೊಳಗ. ಆದರ ಆ ಪಾರ್ಟ ಮಾಡುವವಗ ಅದು ಸೇರಲಿಲ್ಲ. ಪುಸ್ತಕದೊಳಗ ಬಡವ ಇರಲಿ ಬೇಕಾದ್ದಿರಲಿ, ಸ್ಟೇಜಿನ ಮೇಲೆ 'ಡೌಲದಾರ' ಇರಬೇಕು ಪಾರ್ಟು ಅಂತ ಅವನ ಅಭಿಪ್ರಾಯ. ಇವಲ್ಲದೆ ಮುಂದೆ ನಾಟಕ ನೋಡಲಿಕ್ಕೆ ಊರೊಳಗಿನ ಪ್ರತಿಷ್ಠಿತ ಮಹಿಳರೂ ಮಹಿಳೆಯರೂ ಕೂತಿದ್ದರು. ಅವರ ಮುಂದ ಹರಕ ಪರ್ಟ ಹಾಕಿಕೊಂಡು ಹೋಗೋದು ಹ್ಯಾಂಗ? ಅಂತೂ ಒಳ್ಳೇ ಸೂಟು–ಹ್ಯಾಟು ಹಾಕಬೇಕು ಅಂತ ಹಟದಿಂದ ಅವ ತನ್ನ ಪಾರ್ಟ ಹಾಗೇ ತಯಾರ ಮಾಡಿದ. ಆ ವೇಷದೊಳಗ ಅವನ್ನ ಹೋಗಗೊಡಬಾರದು ಅಂತ ನಮ್ಮ ಹಟ. ಅವ ನಮ್ಮನ್ನ ತಪ್ಪಿಸಲಿಕ್ಕೆ ಸುರು ಮಾಡಿದ. ನಾವು ಈ ವಿಂಗಕ್ಕ ಬಂದರ ಅವ ಆ ವಿಂಗಕ್ಕ ಹೋಗುವವ. ಕಡಿಗೊಮ್ಮೆ ಕೈಗೆ ಸಿಕ್ಕಬಿಟ್ಟ ಅನ್ನೋವಷ್ಟರೊಳಗ ಅವ–ಬುದ್ಧಿ ಕಡಮೆ ಆಯಿತೋ ಧೈರ್ಯ ಹೆಚ್ಚಾಯ್ತೋ— ಸ್ಟೇಜಿನ ಮ್ಯಾಲೇ ಹೋಗಿಬಿಟ್ಟ. ಅಲ್ಲಿ ನಾವು ಬರೋದಿಲ್ಲ ಅಂತ ಖಾತ್ರಿ ಅವನಿಗೆ.

ನಮ್ಮ ಕಂಪನಿ ಜನ ಯಾರೂ ಈ ನನ್ನ ಮಾತು ಕೇಳಲಿಕ್ಕಿಲ್ಲ ಅನ್ನೋ ಧೈರ್ಯದಿಂದ ನಾನು ಹೇಳತಾ ಇದ್ದೇನಿ. ಅಪ್ಪಿತಪ್ಪಿ ಯಾರಾದರೂ ಕೇಳಿದರ ಈ ನನ್ನ ನೆನಪುಗಳಿಗೆ ನಗುವರು ಅಂತ ಆಶಾ ನನಗ. ಎಷ್ಟೋ ಸಲ ಮಾಡಿದ ನಾಟಕಕ್ಕಿಂತ ನಾಟಕ ಮಾಡಿದಾಗ ಅನ್ನೋದಿಷ್ಟೆ ನೆನಪು ಉಳಿದಿರತದ. ಅಂಥಾ ಎರಡು ನೆನಪುಗಳನ್ನ ಇಲ್ಲಿ ಹೇಳಬಹುದು. ನಮ್ಮದು ಕ್ರಾಂತಿಕಾರಕ ನಾಟಕ. ಪ್ರಯೋಗ, ಪದ್ಧತಿವಳಗೂ ಕ್ರಾಂತಿ ಇರಲಿ ಅಂತ ಒಮ್ಮೆ ಎರಡು ಪ್ರಯೋಗ

ಮಾಡಿದಿವಿ. ಮೊದಲನೆಯದು–ಮುಂಚಿನ ದಿವಸ ಮಧ್ಯಾಹ್ನದೊಳಗ, ಸ್ತ್ರೀಯರ ಅನುಕೂಲತೆಗಾಗಿ, ಎರಡನೇದು ಮರುದಿವಸ ರಾತ್ರಿ. ಮೊದಲನೆಯ ಪ್ರಯೋಗಕ್ಕೆ ಸ್ತ್ರೀಯರು ತುಂಬ ಬಂದರು; ಅವರಿಗೆ ಒಂದಾಣೆ ಪ್ರವೇಶ ಧನ. ಆದರೆ ಒಟ್ಟಿನವ್ಯಾಲೆ ದುಡ್ಡಿಗೆ ಇಬ್ಬರು ಅನ್ನೋ ಲೆಕ್ಕಕ್ಕ ಬಂತು; ಯಾಕೆಂದರೆ ಒಬ್ಬ ಮಹಿಳೆಯ ಕೂಡ ಕನಿಷ್ಠ ಐದಾರು ಮಕ್ಕಳು. ಏನೆ ಇರಲಿ. ನಾಲ್ಕು ಹೆಣ್ಮಕ್ಕಳು ಕೂಡಿದರ ಮನೇತ ಕೆಲಸ ಕಸ–ಮುಸುರೆ ಮಾತಾಡುವವರು. ಸಾವಿರ ಜನರು ಕೂಡಿದರ ಬಿಟ್ಟಾರೆ? ಅವರು ತಂತಮ್ಮೊಳಗೆ ಮಾತಾಡೋ ಗದ್ದಲದಾಗ ಸ್ಟೇಜಿನ ವ್ಯಾಲಿನ್ನ ಎರಡು ಪಾರ್ಟಿಗಳಿಗೆ ತಂತಮ್ಮ ಮಾತು ಕೇಳಿಸಧಾಂಗ ಆಯ್ತು. ಕಡೆಗೆ ಹತ್ತಿರ ಹತ್ತಿರ ಬಂದು ಇಬ್ಬರೂ ಪಾರ್ಟಿದವರೂ ತಂತಮ್ಮ ಖಾಸಗೀ ಮಾತು ಸುರೂ ಮಾಡಿದರು. ಹತ್ತು ಮಿನೀಟು ಮಾತಾಡಿ ಒಳಗಿನವರಿಗೆ ಸನ್ನೆಮಾಡಿ ಪರದೆ ಬಿಳಿಗೀಸಲಿಕ್ಕೆ ಹೇಳಿದರು. ಈ ಅನುಭವದ ವ್ಯಾಲಿಂದ ಮರುದಿನ ರಾತ್ರೀಯ ನಾಟಕದ ಗತಿ ಏನು ಅನ್ನೋ ಹೆದರಿಕೆ ಆಯ್ತು ನಮಗ. ಆದರೆ ಕಡೆಗೆ ಏನಾಯ್ತು ಅಂತೀರಿ, ಗ್ರೀನ್‌ರೂಂಕ್ಕ ಚಹಾ ತಂದು ಕೊಡೋ ಮಾಣಿ, ಮಾಲೆಯಿಂತೆ ಗೇಟಿನವ ಜೊತಗ ಬಂದ ಟಾಂಗಾ ವಾಲಾ ಇವರ್ನ ಒಳಗ ಕರಿಸಿ ಕೂಡಿಸಿದಿವಿ, ನಾವು ಸ್ಟೇಜಿನ ವ್ಯಾಲಿದ್ದಾಗ ಮುಂದೆ ಯಾರಾದರೂ ಇರಲಿ ಅಂತ. ಇದು ಮೋಜು? ನಾವು ತಿಳಿದದ್ದೊಂದು, ಆಗೋದು ಮತ್ತೊಂದೆ!

ಬಣ್ಣ–ವೇಷ ಆಯ್ತು ಅಂದರ ನಾಟಕಕ್ಕ ಪ್ರಾರಂಭ ಅಂತೀರೇನು? ಕೂಡಿರಿ, ಕೂಡಿರಿ— ಇನ್ನೂ ಪ್ರಾರಂಭ ಆಗಬೇಕಾದ ಒಂದು ಮೋಜು ನಡೆ ದಾವು. ನಾವೆಲ್ಲಾ ಮುಂಚೆ ನಿರ್ಧಾರ ಮಾಡಿ ಮಾಡಿಕೊಂಡಿದ್ದೆವು, ಗ್ರೀನ್‌ರೂಂ ದೊಳಗಿನ ಗಡಿಯಾರ ಮುಂದಿತು ಅಂದ್ರ ನಾಟಕಕ್ಕ ಸುರು, ಅಂತ ಗಂಟೇನೂ ನಂಕ್ಕೈಯಾಗ ಇತ್ತು. ಗಂಟೆನೂ ಹಿಡಿದಿವಿ. ಆದರೆ ಪರದೆ ಯಾರೂ ಎತ್ತಲೇ ಇಲ್ಲ. ಬಾಡಿಗೆ ಪರದೆ ಅವು. ಬಾಡಿಗೀನೂ ಮುಂಚೇ ಕೊಟ್ಟಿದ್ದಿವಿ ಅನ್ನಿರಿ. ಆದರೂ ಆ ಮನುಷ್ಯ ಪರದೆ ಎತ್ತಲಿಲ್ಲ. ಅವನ ದಿಂದ, ಅಧಿಕಾರ ದಿಂದ ಅವನಿಗೆ ಹೇಳಿದಿವಿ. "ಹಾಂಗ ಹ್ಯಾಂಗ ಪರದೆ ಎತ್ತಾರ್ರಿ" ಅಂದ. "ಅಂದ್ರ ಏನಾಗ್ಬೇಕು?" ಅಂತ ಕೇಳಿದ್ವಿ. 'ಪೂಜೆ ಮಾಡಬೇಕ್ರಿ, ಒಂದು ಕಾಯಿ ಒಡೀಬೇಕು" ಅಂದ. "ಆಗಲಿ" ಅಂದಿವಿ, ಆಗೋದು

ಹ್ಯಾಂಗ ? ಯಾಕಂದ್ರ ಅಂಗಡಿ ಬಂದಾಗಿದ್ದುವು, ಕಾಯಿ ಸಿಗೋ ಹಾಂಗಿಲ್ಲ ; ಕಾಯಿ ಒಡೆಯದೇ ಪಡದೆ ಏಳೋ ಹಾಂಗಿಲ್ಲ. ಮುಂದ ಕೂತ ನಿಮಗ ಈ ನಾಟಕ ಗೊತ್ತಾಗ್ತದ ಏನು ಹೇಳಿರಿ. ಕಡೆಗೆ ಸುರೂಮಾಡಿದಿವಿ ಅನ್ನಿರಿ ; ಅವನ ಕೈಯೊಳಗ ನಾಲ್ಕಾಣೆ ಕೊಟ್ಟು ಕಾಯಿತಗೊಂಡು ಬಾ, ಲಗೂ ಅಂತ ಹೇಳಿದಿವಿ ; ಅವ ಹೊರಬಿದ್ದ ಕೂಡಲೆ ಪಡದೆ ನಾವೇ ಮ್ಯಾಲಕ ಜಗ್ಗಿದಿವಿ. ಅದ್ಕೇ ಹೇಳೋದು, ನಾಟಕಾ ಮಾಡಬೇಕಾದರ ಎಲ್ಲಾ ತರದ ಬುದ್ಧಿವಂತಿಕೆ ಬೇಕು ಅಂತ.

ಇನ್ನೂ ಬೇಕಾದಷ್ಟು ಇಂಥಾ ನಮ್ಮ ಅನುಭವ ಹೇಳಬಹುದು. ಆದರೆ ಇವನ್ನೆಲ್ಲ ನೀವು ನೆನಪಿನಾಗ ಇಟ್ಟುಗೊಂಡು ನಾಳೆ ಮುಂದೆ ಕೂತು ನಾಟಕ ನೋಡೋದು ಬಿಟ್ಟು ಗ್ರೀನ್‌ರೂಂದಾಗೇ ಬಂದೀರಿ ಅನ್ನೋ ಹೆದರಿಕೀಗೆ ನಾನು ಹೆಚ್ಚು ಹೇಳೋದಿಲ್ಲ. ಯಾಕಂದ್ರ ಗ್ರೀನ್‌ರೂಂದ ನಾಟಕ ನೋಡೋ ಅಧಿಕಾರ ಎಷ್ಟು ರೊಕ್ಕಕೊಟ್ಟರೂ ಬರೋದಿಲ್ಲ, ಯಾಕ ಅಂತ ಕೇಳಿದರ ಏನು ಹೇಳ್ಬೇಕು ? ನಮ್ದ ಇನ್ನೊಂದು ಅನುಭವ ಹೇಳ್ತೀನಿ—ಅದನ್ನ ಕೇಳಿರಿ—ಆಮ್ಯಾಲೆ ಹೊರಗಿನವರನ್ನ ನಾವು ಯಾಕ ಒಳಗ ಬಿಡೋದಿಲ್ಲ ಅನ್ನೋದು ನಿಮಗೇ ತಿಳೀತದ. ನಮ್ದೊಂದು ನಾಟಕ ನಡೆದಾಗ ಸ್ಟೇಜಿನ ಮ್ಯಾಲೆ ಎರಡು ಪಾತ್ರಗಳು ಇದ್ದುವು. ಇಬ್ಬರಿಗೂ ಮಾತು ಮರೀತು. ಆದರೆ ಒಬ್ಬರು ಧೈರ್ಯಸ್ಥರಿದ್ದರು. ಮುಂದಿನ ಮಾತು ಮರೆತರೂ ಹಿಂದಿನ ಮಾತೇ ತಿರುತಿರುಗಿ ಅನ್ನಲಿಕ್ಕೆ ಹತ್ತಿದರು. ಇದರಿಂದ ಎರಡನೇಯವರು ಇನ್ನಿಷ್ಟು ಗಾಬರಿಯಾಗಿ "ಗಾಂಭೀರ್ಯದಿಂದ ಶತಪಥವನ್ನು ಹಾಕುವವರಂ"ತೆ ನಡೆದ್ಬಂದು ಒಳಗಿನವರಿಗೆ ಪಡದೆಬಿಡಿರಿ ಅಂತ ಹೇಳಿದರು. ಆದರ ಪಡದೆ ಆದರೂ ಬಿಡೂದು ಹ್ಯಾಂಗ, "ನೀವು ಕಡೀಮಾತು ಅನ್ನಿರಿ, ನಾವು ಪಡದೆ ಬಿಡ್ತೀವಿ" ಅಂದರು ಒಳಗಿನವರು. "ಕಡೀ ಮಾತೂ ಮರ್ತದ, ಅದು ಯಾವುದು ಹೇಳಿರಿ" ಅಂದರು ಸ್ಟೇಜಿನ ಮ್ಯಾಲಿನವರು. ಆದರ ಮುಂದ ಕೂತ ನಿಮಗ ಈ ಸಂಭಾಷಣದೊಳಗಿನ ಒಂದೂ ಶಬ್ದ ಸಹ ಕೇಳಿಸಿಲ್ಲ.

ಕಡೆಗೆ ಒಂದ್ಮಾತು ಹೇಳ್ತೀನಿ. ನನ್ನ ನೆನೆಪುಗಳನ್ನ ಹೇಳಿದೆ. ಇದನ್ನ ಕೇಳಿ ನಮ್ಮ ನಾಟಕಗಳದೆ ಹಣೆಬರಹ ಹೀಂಗ ಅಂತ ತಪ್ಪು ತಿಳೀಬ್ಯಾಡಿರಿ ಜಗತ್ತಿನೊಳಗ ಸ್ಟೇಜಿನ ಮ್ಯಾಲೆ ನಾಟಕ ನಡೆಯೋತನಕ ಸ್ಟೇಜಿನ ಹಿಂದನೂ

ಇಂಥಾ ನಾಟಕ ನಡೆಯೋವೆ. ಯಾಕಂದ್ರ, ಸ್ಟೇಜದ ಹೊರಗಿದ್ದಾಗ ನಾಟಕ ಮಾಡುವವರು ಎಲ್ಲಾರಹಾಂಗ ಮನುಷ್ಯರೆ ಅಹುದಲ್ಲೋ ? ನಾನು ಕಣ್ಣುಮುಟ್ಟಿ ನೋಡಿದ ಇನ್ನೊಂದು ಕಂಪನಿಯ ಒಂದು ನೆನಪು ಹೇಳ್ತೀನಿ ಕೇಳಿರಿ ? “ ಮನುಷ್ಯರು ” ಅಂದ ಮಾತಿಗೆ ನೆನಪಾಯ್ತು. ನಾನು ನೋಡಿದ್ದು ಶಕುಂತಲಾ ನಾಟಕ. ನಾಟಕದೊಳಗ ದುಷ್ಯಂತ ಸುರುವಿಗೇ ಹಾಡಿಕೋತ ಬರ್ತಾನ. ಹಾಡಿನ ಸಲುವಾಗಿ ಗಂಟಲು ಸಡಿಲಾಗಲಿ ಅಂತ ಬರೋ ಮುಂಚೆ ಗೇನೆ ಬಿಸಿಬಿಸಿ ಚಹ ಕುಡಿದಿದ್ದ. ನಾಟಕದಾಗ ದುಷ್ಯಂತ ಆದರೂ ಹೊರಗ ಮನುಷ್ಯನೆ ಅಹುವಲ್ಲೋ ? ಬಿಸಿ ಚಹ ಗಂಟಲೊಳಗ ಸುರುವಿಕೊಂಡವನೆ ಹಣೆ ತುಂಬ ಬೆವರ ಹನಿ ಸುರಿಸಿಕೋತ ಸ್ಟೇಜಿನ ಮ್ಯಾಲೆ ಬಂದು “ ಈ ಆಶ್ರಮವು ಎಷ್ಟು ತಂಪಾಗಿದೆ ” ಅಂದ !

ನೋಡಿದಿರಿಲ್ಲೋ ? ನೀವೂ ನಗ್ತೀರಿ. ನಗೀ ತಡೀರಿ, ನಾಟಕಾ ಸುರು ಆಯ್ತು, ಹೊರಗ ಹೋಗಿ ಮುಂದ ಕೂತು ನೋಡಿರಿ, ನಾನೂ ನನ್ನ ಮಾತು ಬಂದ ಮಾಡ್ತೀನಿ.

— ಆದ್ಯ ರಂಗಾಚಾರ್ಯ

*

# ಡಾಕ್ಟರ ಕನ್ಸಲ್ಟಿಂಗ ರೂಮು

ಬಾನುಲಿಯ ಸಂಚಾಲಕರು ಒಮ್ಮೆ ನನ್ನ ರೂಮಿಗೆ ಬಂದು ಅರ್ಧ ಗಂಟೆ ಕುಳಿತು ರೋಗಿಗಳು ನರಳುವುದನ್ನು ರೋಗಿಯ ನೆಂಟರ ನೊಂದ ಮುಖವನ್ನು ನೋಡಿ, ಡ್ರೆಸಿಂಗ ರೂಮಿನಲ್ಲಿ ಹುಡುಗರ ಕಣ್ಣು ತೊಳೆವಾಗ ಅಳುವ ಧ್ವನಿಯನ್ನು ಕೇಳಿ "ಡಾಕ್ಟರರೆ ಒಂದು ಮಾತನ್ನು ನಿಮಗೆ ಕೇಳುವದಿದೆ. ಅಲ್ಲ; ಮುಂಜಾನೆಯಿಂದ ಸಂಜೆಯವರೆಗೆ ನೀವು ಇಂಥ ವಾತಾವರಣದಲ್ಲಿ ಕೆಲಸ ಮಾಡಲು ಜಿಗುಪ್ಸೆಯಾಗುವದಿಲ್ಲವೇ, ನನಗಂತೂ ಇಲ್ಲಿ ಅರ್ಧ ಗಂಟೆ ಕಳೆಯಲು ಕಷ್ಟವಾಯಿತು" ಅಂದರು. "ಮಹಾಶಯರೆ ಸ್ವಲ್ಪ ನಿಧಾನಿಸಿ. ನನ್ನ ರೂಮಿನಲ್ಲಿ ಕಾಣುವ ಮೋಜು ನೀವೆಲ್ಲಿಯೂ ಕಾಣಿರಿ. ಅದೊಂದು ವಿಚಿತ್ರ ಸಾಮ್ರಾಜ್ಯವೇ. ಜನಗಳು ತಾವು ಗಟ್ಟಿಯಾಗಿದ್ದು ಮನೆಯಲ್ಲಿಯ ಜನರು ನಿರೋಗಿಯಾಗಿದ್ದಾಗ ಅವರು ಮಾತಾಡುವದನ್ನು ಕೇಳಬೇಕು. ತಾವು ಜಗಜಟ್ಟಿ, ಪುರಾಣದ ಭೀಮ ಹನುಮರನ್ನು ಕೂಡ ಮರೆಸಿಬಿಡುವಂತೆ ಮಾತಾಡುವರು."

"ಏನ್ರೀ ಡಾಕ್ಟರರೆ ನೀವು ಪಥ್ಯಪಥ್ಯ ಅನ್ನುವಿರಿ—ಚಕ್ಲಿ ತಿನಬಾರದು, ಚೂಡಾ ತಿನಬಾರದು, ಭಜಿ ತಿನಬಾರದು, ಚಹಾ ಕುಡಿಯಬಾರದು, ಅಂತ. ಇದೆಲ್ಲ ಬಿಟ್ಟಮೇಲೆ ನೀವು ಔಷಧಕೊಡುವುದೂ ರೋಗಿಯನ್ನು ಗುಣಪಡಿಸುವುದೂ ಏನು ಮಹಾ ಹೇಳುವಿರಿ? ನಾವು ತಿನಬೇಕಾದ ಸಾಮಾನಿನಲ್ಲಿಯೇ ನೀವು ಔಷಧಕೊಟ್ಟರೆ ಸೈ. ನೀವು ಹೇಳುವ ಪಥ್ಯೆಗೆಲ್ಲ ನಾವು ವಿರುದ್ಧವೇ. ನಮಗೆ ಏನು ತಿಂದರೂ ದಕ್ಕುತ್ತದೆ. ನಮಗೂ ಡಾಕ್ಟರರ ಔಷಧಕ್ಕೂ ವೈರ—ನೋಡಿರಿ" ಎಂದು ಕ್ಲಬ್ಬಿನಲ್ಲಿ ನಾಲ್ಕೈದು ಮಂದಿ ಕುಳಿತಾಗ ಗಪ್ಪಾ ಹೊಡೆದುಕೊಳ್ಳ ಎಂದು ನಗಿಸುವವರು ಬಹಳ ಮಂದಿ, ಆಗ ಎಲ್ಲರೂ ಪಾಪ ಆ ಬಡ ಡಾಕ್ಟರರನ್ನು ನೋಡಿ ನಗುವವರೇ, ಆದರೆ ಅದೇ ಗೃಹಸ್ಥರು ಹದಿನೈದೇ ದಿವಸದ ಮೇಲೆ ಹೊಟ್ಟೆ ಹಿಡಿದುಕೊಂಡು ನರಳುತ್ತ ನಮ್ಮ ರೂಮಿಗೆ ಬಂದಾಗ ಏನು ಹೇಳುವದು! "ಅಯ್ಯೋ ಡಾಕ್ಟರರೆ ನಾನು ಸತ್ತೆ, ಹೊಟ್ಟೆನೋವು ಹೇಗೆ

ತಡಿಯಲಿ, ಹೊಟ್ಟೆ ಮುರಿಯುವುದು. ಮಲದಲ್ಲಿ ರಕ್ತ, ಕೀವು, ತಡೆಯಲಾರೆ. ಮೈ ಕಾದಿದೆ, ಬಾಯಾರಿಕೆ, ಏನಾದರೂ ಮಾಡಿರಿ. ಬದುಕಿಸಿರಿ" ಎನ್ನುತ್ತ ಬಂದರು, ಅವರನ್ನು ಚೆನ್ನಾಗಿ ಪರೀಕ್ಷೆ ಮಾಡಿ "ರಾಯರೇ ಭಯಪಡಬೇಡಿ, ನಿಮಗಾದುದು ಆಮಾಂಶೆ. ನಿಧಾನಿಸಿರಿ. ಇಂಜೆಕ್ಶನ್ ಕೊಡುವೆ, ಔಷಧಿ ಪುಡಿ ಕೊಡುವೆ. ಬೆಣ್ಣೆ ತೆಗೆದ ಮಜ್ಜಿಗೆ, ಚಹಾ–ಕಾಫಿ–ಹಾಲನ್ನು ಸ್ವಲ್ಪವೇ ಬೆರೆಸುವುದು, ಬಿಸಿ ನೀರು ಇಷ್ಟೇ" ಎಂದು ಹೇಳಿದಾಗ "ಡಾಕ್ಟರರೇ ನೀವು ಹೇಳಿದಂತೆ ಮಾಡುವೆ. ಒಂದಲ್ಲ ಇನ್ನೂ ಎಂಟು ಹತ್ತು ದಿವಸವೂ ನೀರ ಮೇಲೆ ಇರಬೇಕೆಂದರೂ ಇರುವೆ. ಸಧ್ಯ ಕಡಿಮೆಯಾಗಿ ನಾನು ಬದುಕಿದರೆ ಸಾಕು" ಎಂದರು. ಆ ನಮ್ಮ ಜಗಜಟ್ಟಿ ಅವರು ಕ್ಲಬ್ಬಿನಲ್ಲಿ ಅಂದು ಹಾಸ್ಯಮಾಡಿದ್ದು ಮರೆತಿದ್ದರೋ ಏನೋ ಪಾಪ! ನಾನಾದರೂ ಅವರು ಇಷ್ಟು ಬಳಲುತ್ತ ಬಂದಾಗ ಹಿಂದಿನ ಮಾತಿನ ನೆನಪು ಕೊಡುವದು ಒಳಿತೆ! ಆಗಲೆ ಅವರಿಗೆ ಔಷಧಿ, ಇಂಜೆಕ್ಶನ್ ಕೊಟ್ಟು, ಸಾಂತ್ವನ ಮಾಡಿ ಮನೆಗೆ ಕಳುಹಿದೆ.

"ಜಡ್ಡಿನ ಪ್ರಸಂಗ ಮೈಮೇಲೆ ಬಂದಾಗ ಮನುಷ್ಯನ ನಿಜಸ್ವರೂಪವು ಹೊರಬೀಳುವುದು. ಅದು ಆ ಮಹಾಶಯರಿಗೇ ಗೊತ್ತು; ಮತ್ತು ಇಂಥ ಪ್ರಸಂಗಗಳನ್ನು ಕಾಣುವ ಡಾಕ್ಟರರಿಗೇ ಗೊತ್ತು."

"ಇಂಥವೇ ಇನ್ನೂ ಎಷ್ಟೋ ಮೋಜಿನ ಸಂಗತಿಗಳು ನೆನಪಿಗೆ ಬರುವವು" ಎಂದೆ. "ಹಾಗಾದರೆ ನಮಗೆ ಒಂದೆರಡು ಪ್ರಸಂಗಗಳನ್ನು ಹೇಳುವಿರಾ" ಎಂದು ಕೇಳಿದರು ಬಾನುಲಿಕಾರರು. "ನಾವು ಈಗ ಒಂದೆರಡು ತಿಂಗಳುಗಳಿಂದ ಬೇರೆ ಬೇರೆ ನಾಲ್ಕು ಸ್ಥಳಗಳಿಗೆ ಹೋಗಿ ನಗೆಯಿರದ ಎಡೆಯುಂಟೇ ಎಂದು ನೋಡಿ ಬಂದದ್ದಾಯಿತು. ಅವುಗಳಲ್ಲಿಯೇ ಮುಂಜಾನೆಯಿಂದ ಸಂಜೆಯವರೆಗೂ ಆ ಆ ಕಾರ್ಯರಂಗದಲ್ಲಿ ದುಡಿದವರು ಕೆಲವು ಮೋಜಿನ ಸನ್ನಿವೇಶಗಳನ್ನು ಹೇಳಿ ನಮ್ಮನ್ನು ನಗೆಗಡಲಲ್ಲಿ ಮುಳುಗಿಸಿ ತೇಲಿಸಿಬಿಟ್ಟರು. ಕಡೆಗೆ ನಿಮ್ಮಲ್ಲಿ ಬಂದಿದ್ದೇವೆ, ಇಲ್ಲಿ ಮಾತ್ರ ನಗೆಯ ಸುಳಿವೇ ಸಿಗದು ಎಂದು ದೃಢವಾಗಿ ನಂಬಿದ್ದೇವೆ. ಈ ಅರ್ಧಗಂಟೆಯ ಕಾಲ ನಿಮ್ಮಲ್ಲಿ ಕುಳಿತಿರಲು ನಮ್ಮ ನಂಬಿಗೆಯು ದೃಢವಾಗುತ್ತಿದೆ. ಆದರೆ ನೀವೇನೋ ಹೇಳುತ್ತೀರಿ. ನಿಮ್ಮ ವ್ಯವಸಾಯದಲ್ಲಿಯೂ ಬೇಕಾದಷ್ಟು ನಗೆ ಇದೆ—ಮೋಜು ಇದೆ ಎಂದು. ಎಲ್ಲಿ ತೋರಿಸಿರಿ ನೋಡೋಣ" ಎಂದರು.

ನಾನು ಇಲ್ಲಿ ಹೇಳುವುದು ನನ್ನ ಅನುಭವಕ್ಕೆ ಬಂದ ಎರಡು ಮೂರು ಪ್ರಸಂಗಗಳು, ನಾನು ಹೇಳುವ ಮುಂದೆ ಯಾವ ವ್ಯಕ್ತಿಗಳನ್ನೂ ನನ್ನ ಮುಂದಿಟ್ಟುಕೊಂಡು ಹೇಳುವದಿಲ್ಲ. ಆದರೆ, ಕಂಡ ಪ್ರಸಂಗಗಳನ್ನು ಮಾತ್ರ ಇವಕ್ಕಾಗಿ ಯಾರೂ ತಮ್ಮನ್ನೇ ಆಡಿ ತೋರಿಸಿದರೆಂಬ ಅರ್ಥವನ್ನು ಮಾತ್ರ ದಯವಿಟ್ಟು ಮಾಡಬೇಡಿರಿ. ತಪ್ಪು ತಿಳಿಯಬೇಡಿರಿ, ಯಾಕಂದರೆ, ನಮ್ಮ ವ್ಯವಸಾಯದಲ್ಲಿ ನಾನು ಕಂಡು ಕೇಳಿದ ನಮ್ಮ ರೋಗಿಗಳ ವಿಷಯವನ್ನು ಗೌಪ್ಯ ವಾಗಿ ಇಡಬೇಕು, ಅದು ಒಂದು ಕಟ್ಟು, ನೇಮ. ಆದರೆ ಮೋಜಿನ ಪ್ರಸಂಗ ಗಳು ನಡೆಯುವುದು ಡಾಕ್ಟರ ಮತ್ತು ರೋಗಿಯ ನಡುವೆ ಮೂರನೆಯವರ ಸಂಪರ್ಕವಿಲ್ಲ. ನಾನು ಇವನ್ನೊತ್ತು ನಿಮಗೆ ಹೇಳುವುದು ಕಿವಿಮಾತು. ಯಾರ ಮುಂದಾದರೂ ಹೇಳಬೇಡಿರಿ ಮತ್ತೆ. ನನಗೇನು ಗೊತ್ತು ಬಾನುಲಿಕಾರರ ಮುಂದೆ ಮಾತಾಡುವದೆಂದರೆ ಕಾಳಿಗೆ ಮುದ್ದು ಕೊಟ್ಟಂತೆ ಎಂಬುವದು, ನೀವು ಈ ಸುದ್ದಿಯನ್ನು ಕೇಳಿದರೂ ನಿಮ್ಮನ್ನಕ್ಕೇ ಇಟ್ಟುಕೊಳ್ಳಿರಿ. ಯಾರ ಮುಂದೂ ಆಡಬೇಡಿರಿ. ಇಲ್ಲವಾದರೆ ನಾನು ನನ್ನ ರೋಗಿನ್ನಂದದ ಕೋಪಕ್ಕೆ ಗುರಿ ಯಾಗಬೇಕಾದೀತು.

ಇದೊಂದು ಒಬ್ಬ ಹಳ್ಳಿಯ ರೋಗಿಯ ವಿಷಯ. ಒಬ್ಬ ರೋಗಿಗೆ ಕಾಲಿಗೆ ಹುಣ್ಣಾಗಿತ್ತು. ಹಳ್ಳಿಯಲ್ಲಿ ಸಿಕ್ಕ ಔಷಧಿ ಮತ್ತು ಕಂಡವರು ಹೇಳಿದ ತೊಪ್ಪಲ ಗಡ್ಡೆ ತಿಕ್ಕಿ ತೈದು ಹಚ್ಚಿದ್ದಾಯಿತು. ಹುಣ್ಣು ಮಾತ್ರ ಬೆಳೆಯುತ್ತಲೇ ಇತ್ತು. ಒಟ್ಟಿನ ಪಟ್ಟಿಯನ್ನು ಬಿಚ್ಚಿಹೇಳಿದೆ. ಹೊಲಸು ಹೊಲಸಾದ ಆರಿವೆ ಮತ್ತು ದುರ್ಗಂಧಸೂಸುವ ನೀರಿನ ಕೀವು ರಕ್ತಗಳಿಂದ ಕೂಡಿದ ಹುಣ್ಣು. ರೋಗಿ ನೋವಿ ನಿಂದ ಯಪ್ಪೋ ಎಂದು ಒದರುತ್ತಿದ್ದನು, ದೂರದಿಂದಲೆ ಆ ಹುಣ್ಣನ್ನು ನೋಡಿ, ಅದಕ್ಕೆ ದಿನಾಲು ತೊಳೆದು ಔಷಧ ಹಾಕಿ ಪಟ್ಟಿ ಕಟ್ಟಿದರೆ ಗುಣವಾಗುವು ದೆಂದು ಹೇಳಿದೆ. ಆದರೆ ನಾನು ಆ ರೋಗಿಯನ್ನು ಮುಟ್ಟಿರಲಿಲ್ಲ. ಮುಟ್ಟಿ ಪರೀಕ್ಷೆ ಮಾಡುವ ವಿಷಯವೂ ಇದ್ದಿಲ್ಲ. ಕಣ್ಣಿಗೇ ಕಾಣುವ ವಿಷಯ. ನನ್ನ ವರ್ತನೆಯು ಆ ರೋಗಿಯ ಅಪ್ಪನಿಗೆ ಮಾತ್ರ ಸರಿಬರಲಿಲ್ಲ. " ಯಪ್ಪಾ ನಮ್ಮ ಹುಡುಗನ್ನ ಛಲೋ ಪರೀಕ್ಷಾಮಾಡಿರಿ, ಲಾದಿ ಹ್ಯಾಂಗದ ನೋಡ್ರಿ, ಬಹಳ ನೊರಗ್ಯಾನ. ಒಂದು ತಿಂಗಳ ಹೊತ್ತಾಯ್ತು. ಕೂಳಿಲ್ಲ ನೀರಿಲ್ಲ. ರಾತ್ರಿ ನಿದ್ದೆ ಮಾಡೋದಿಲ್ಲ. ಒಂದೀಟು ಆ ಕಿವಿ ಕೊಳವಿ ಹಚ್ಚಿ ಹುಣ್ಣಾದ ಕಾಲ ಪರೀಕ್ಷಾ

ಮಾಡ್ರೀ, ಇಂಗ್ಲೀಶ ಬೇಕಾದರ ಮಾಡ್ರಿ. ಅದಕ್ಕ ಎಷ್ಟು ರೊಕ್ಕ ಬಿದ್ದರೂ ಕೊಡತೇನಿ" ಎಂದು ಹೇಳಿದ, "ಅಲ್ಲೋ ಆ ಕೊಳವಿ ಕೆಲಸ, ಎದೆನೋವು ಕಫ, ಜ್ವರ ಮೊದಲಾದು ಪ್ರಗಳಿಗೆ. ಅಲ್ಲದೆ, ಕೈಕಾಲು, ಮುಖ, ತಲೆ, ನೋಡ ಲಿಕ್ಕೆ ಅಲ್ಲಪ್ಪೋ" ಎಂದೆ. ಅವನು ಒಪ್ಪಲಿಲ್ಲ. "ಅದ್ಯಾಕ್ರಿ ನಮ್ಮೂರಾಗ, ನಮ್ಮ ಸಿದ್ರಾಮಪ್ಪನ ಮಗ. ಅದೇ ಊರಾಗಿನ ಸರಕಾರಿ ದವಾಖಾನ್ಯಾಗ ಅವರ ಅಪ್ಪಗ ಜಡ್ಡಾದಾಗ, ೩-೪ ತಿಂಗಳು ಅಲ್ಲೇ ಇದ್ದನಂತ. ಅಲ್ಲಿಯು ಎಲ್ಲ ಕೆಲಸ ನೋಡಿಕೊಂಡು ಇಂಗ್ಲೀಶ ಮಾಡೋದು ಕಲಿತಾನ. ಎರಡು ವರ್ಷ ಆತು ದವಾಖಾನಿ ತೆರದು, ಏನ ಪರೀಕ್ಷಾ ಮಾಡತಾನ್ರಿ ವಸ್ತಾದ, ತಲಿ ನೋಯಲಿ, ಕಿವಿ ಸೋರಲಿ, ಕಾಲು ಹರೀಲಿ, ಆ ಜಾಗಾದ ಮ್ಯಾಗ ಕಿವಿ ಕೊಳವಿ ಹಚ್ಚಿ ಸೋಡೊವನ. ಬಗಲಾಗ ಡಿಗ್ರಿ ಇಡವನ, ಅಂದ್ರ ಅಡ್ಡಿ ಇಲ್ಲರೆಪ್ಪಾ ಹಾಂಗ ಪರೀಕ್ಷಾ ಮಾಡಿದರ, ಎಂಥ ರೋಗಾದರೂ ತಿಳಿದೀತು. ನೀವೇನೋ ದೂರಿ ನಿಂದ ನೋದಿ, ದಿನಾ ಪಟ್ಟಿ ಕಟ್ಟಿದರ ಗುಣಾ ಆಗತದ ಅಂತೀರಿ, ನೀವು ಬೇಕಾ ದರ ನಿಮ್ಮ ಪರೀಕ್ಷಾದ ರೊಕ್ಕ ಬ್ಯಾರೆ ತಗೊಳ್ರಿ. ಪಾಡಾಗಿ ನೋಡ್ರಿ" ಅಂದ ಅವನಿಗೆ ಏನು ಹೇಳಬೇಕು!"

ಮತ್ತೊಂದು ಪ್ರಸಂಗ! ಬಾಣಂತಿ ನೋಡಲಿಕ್ಕೆ ಹೋಗಿದ್ದೆ. ಹಡೆದು ೩ ದಿನಗಳಾಗಿದ್ದವು. ಬಾಣಂತಿಗೆ ಸ್ವಲ್ಪ ಜ್ವರ. ಮೈಮೇಲೆ ಹೋಗುವ ಸ್ರಾವ, ಕಡಿಮೆಯಾಗಿತ್ತು. ತಲೆಯ ಕಡೆಯ ಹೊರಸಿಗೆ ಎರಡೆರಡು ಇಟ್ಟಂಗಿ ಇಡಲು ಹೇಳಿ ಕೆಲವು ಗುಳಿಗೆಗಳನ್ನು ಮತ್ತು ಇಂಜೆಕ್ಶನ್ನು ಕೊಟ್ಟು ಹೋದೆ. ಮರುದಿನ ಮುಂಜಾನೆ ಹೋಗಿ ನೋಡಲು ಹೊರಸು ಸರಿಯಾದ ಲೆವ್ಹಲ್ಲಿಗೆ ಇತ್ತು. ಇಟ್ಟಂಗಿ ಕಾಣಲಿಲ್ಲ. ನನಗೆ ಸ್ವಲ್ಪ ಸಿಟ್ಟು ಬಂತು. ಮುದ್ದಾಂ ಇವರಿಗೆ ನಿನ್ನೆ ರಾತ್ರಿ ಇಟ್ಟಂಗಿ ಇಡಲು ಹೇಳಿ ಹೋದರೂ ಇನ್ನೂ ಇವರು ಇಟ್ಟಂಗಿ ಇಟ್ಟಿರಲಿಲ್ಲ. ಡಾಕ್ಟರರ ಮಾತೆಂದರೆ, ಇವರಿಗೆ ಇಷ್ಟು ತಾತ್ಸಾರವೇ ಎಂದು ಎನಿಸಿತು. ಆದರೆ ಆ ಬಾಣಂತಿಯ ಅತ್ತೆ ಭಾಗೂಬಾಯಿ, ರೋಗಿಯ ತಲೆಯ ಹತ್ತಿರಿನ ಅರಿವೆ ಯನ್ನು ಸರಿಸಿ ತಲೆಗಿಂಬಿಗಿಟ್ಟ ಇಟ್ಟಂಗಿಯನ್ನು ತೋರಿಸಿದರು. ಹೊರಸಿನ ಕಾಲಬುಡಕ್ಕೆ ಇಡಬೇಕೆಂದು ಹೇಳಿದ ಇಟ್ಟಂಗಿಗಳನ್ನು ಅವರು ತಲೆಗಿಂಬಿಗೆಂದು ತಿಳಿದಿದ್ದರಂತೆ, ಇದೇನು ಅವರದೇ ತಪ್ಪೋ, ಅಥವಾ ನಾನು ಕಡೆಯವರೆಗೂ ನಿಂತು ಹೊರಸು ಎತ್ತಿ ಇಟ್ಟಂಗಿ ಇಡದಿದ್ದುದು ನನ್ನ ತಪ್ಪೋ.

ನಾನು ಈಗ ಹೇಳುವುದು ೭–೮ ವರ್ಷಗಳ ಹಿಂದಿನ ಸಂಗತಿ. ನನ್ನ ವ್ಯವಸಾಯ ಸುರುವು ಮಾಡಿ ಅದೇ ಒಂದು ವರುಷವಾಗಿತ್ತು. ನನ್ನ ಕೆಲಸ ಮುಗಿಸಿ ಮನೆಗೆ ಹೋಗುವದರಲ್ಲಿದ್ದಾಗ ಒಬ್ಬರು ಗಾಬರಿಯಾಗಿ ಧಾವಿಸಿ ವ್ಹಿಜಿಟ್ಟಿಗೆ ಕರೆಯಲು ಬಂದರು. "ನಮ್ಮ ಮನೆಯಲ್ಲಿ ಒಬ್ಬರು ಹೇಗೇಗೊ ಮಾಡುತ್ತಿದ್ದಾರೆ ಕೂಡಲೆ ಬನ್ನಿರಿ" ಎಂದರು. ಅವರನ್ನು ಹಿಂಬಾಲಿಸಿದೆ. ನಮ್ಮ ಟಾಂಗಾ ಅವರ ಮನೆಯ ಮುಂದೆ ನಿಂತಾಗ ಅವರ ಮನೆಯಲ್ಲಿ ಜನರ ಸಮುದಾಯವೇ ಕೂಡಿತ್ತು. ಎಲ್ಲರ ಮೋರೆಯ ಮೇಲೆಯೂ ಗಾಬರಿಯ ಕಳೆ. ನಾನು ಒಳಗೆ ಹೋದೆ. ನಡುಮನೆಯ ಮಧ್ಯದಲ್ಲಿ ಒಬ್ಬ ರೋಗಿಯನ್ನು ಮಲಗಿಸಿದ್ದರು. ಕೂಡಿದವರಲ್ಲಿ ಒಬ್ಬರು ಉರುಳೇಗಡ್ಡೆಯನ್ನು ಜಜ್ಜಿ ಮೂಸಿ ತೋರಿಸುತ್ತಿದ್ದರು; ಒಬ್ಬರು ಅಂಗಾಲಿಗೆ ಬೂದಿ ತಿಕ್ಕುತ್ತಿದ್ದರು. ಮತ್ತೊಬ್ಬರು ಬೆಚ್ಚನ್ನ ಅರಿವೆಯಿಂದ ಕೈಕಾಲು ಕಾಸುತ್ತಿದ್ದರು. ನಾನು ರೋಗಿಯ ಮೈ ನೋಡಿದರೆ ತಣ್ಣಗಾಗಿದೆ, ನಾಡಿ ಹತ್ತಲೊಲ್ಲವು, ಹೃದಯಕ್ರಿಯೆಯು ನಿಂತಿದೆ, ನಾನು ಈಗ ನೋಡುವುದು ಜೀವಂತ ರೋಗಿಯಲ್ಲ. ಜೀವನಯಾತ್ರೆ ಮುಗಿಸಿದ ದೇಹವು. ಆದರೆ ಸುತ್ತಲಿನ ಆಪ್ತ ಬಾಂಧವರ ಕಲ್ಪನೆಯೆಂದರೆ ಇದೊಂದು ಮೂರ್ಛೆಯೆಂದು! ರೋಗಿಯು ಸತ್ತುದು ವಿಚಿತ್ರವಾಗಿಯೇ. ಅದೇ ಸಂಡಾಸಿಗೆ ಹೋಗಿ ಬಹಳ ಹೊತ್ತಾದರೂ ಬಾರದ್ದರಿಂದ ಮನೆಯವರು ಗಾಬರಿಯಾಗಿ ಬಾಗಿಲಿನ ತಿರುಗಣಿ ತಪ್ಪಿಸಿ ಅವಾತವಾಗಿ ತಂದು ಮಲಗಿಸಿದ್ದರು. ಈ ಪ್ರಸಂಗದಲ್ಲಿ ರೋಗಿ ಸತ್ತಿರುವರೆಂದು ಹೇಳುವುದು ಹೇಗೆ? ಹಾಗೆ ಹೇಳಿದರೆ ಕೂಡಿದ ಜನರು ನನ್ನನ್ನು ಸುಸೂತ್ರವಾಗಿ ಬಿಟ್ಟಾರೆ! ಆಗ ಒಂದು ಸಂಗತಿ ನೆನಪಾಯಿತು. ಒಮ್ಮೆ ನಮ್ಮ ಹಿರಿಯ ಡಾಕ್ಟರರೊಬ್ಬರು, ವ್ಹಿಜಿಟಿಗೆ ಹೋಗಿ ಕುಳಿತ ಕುಳಿತಲ್ಲಿಯೇ ತೀರಿಕೊಂಡ ಒಬ್ಬ ವ್ಯಕ್ತಿಗೆ ಇವನು ಸತ್ತಿರುವನೆಂದು ಹೇಳಿದ್ದಕ್ಕೆ ಹತ್ತಿರವೇ ನಿಂತ ಅವರ ಅಣ್ಣ ನೇರವಾಗಿ ಕಪಾಳಿಗೆ ಹೊಡೆದು ಬಿಟ್ಟನಂತೆ. ಈಗ ನನ್ನ ಗತಿ ಏನು ಎಂದೆ. ಆದರೂ ಧೈರ್ಯ ತಂದುಕೊಂಡೆ. ಕೈಕಾಲು ಕಾಸುವುದಕ್ಕೂ ಉರುಳೇಗಡ್ಡೆಯನ್ನು ಜೋರಾಗಿ ಮೂಸಿ ತೋರಿಸುವದಕ್ಕೂ ಹೇಳಿದೆ; ಮತ್ತೂ ಎದ್ದೆ. "ಯಾಕ್ರಿ ಡಾಕ್ಟರರೇ ಇಂಜೆಕ್ಷನ್ ಕೊಡುವದಿಲ್ಲವೆ" ಎಂದರೊಬ್ಬರು.

"ಎಷ್ಟು ರೊಕ್ಕ ಬಿದ್ದರೂ ಚಿಂತೆಯಿಲ್ಲ, ಚುಚ್ಚುಮದ್ದನ್ನು ಹಾಕಿರಿ"

ಎಂದರು ಮತ್ತೊಬ್ಬರು " "ಇದೊ ಬಂದೆ ದವಾಖಾನೆಗೆ ಹೋಗಿ ಇಂಜೆಕ್ಶನ್ ಟ್ಯೂಬ ತರುವೆ. ಅಂದವನೆ ಬ್ಯಾಗನ್ನು ಎತ್ತಿಕೊಂಡು ನೇರವಾಗಿ ಟಾಂಗಾ ಹತ್ತಿರ ಹೋದೆ. ಎಲ್ಲರ ಮಿಕಿಮಿಕಿ ನನ್ನ ಮೋರೆ ನೋಡಹತ್ತಿದರು. ಅವರಲ್ಲಿ ಯೊಬ್ಬರು ನನ್ನನ್ನು ಟಾಂಗಾದ ವರೆಗೆ ಹಿಂಬಾಲಿಸಿ "ನಾನು ಬರಲೆ" ಎಂದರು. ಆಗ ಅವರನ್ನು ಕರೆದು "ರೋಗಿ ಸತ್ತಿರುವನು ಇದಕ್ಕೆ ಯಾವ ಉಪಾಯವೂ ಇಲ್ಲ" ವೆಂದು ಹೇಳಿದೆ. ಇಷ್ಟು ಕೇಳಿದವರೇ ಅವರು ಗಕ್ಕನೆ ತಿರುಗಿ ಎದೆಎದೆ ಬಡಕೊಳ್ಳುತ್ತ ಅಳುತ್ತ ಚೀರುತ್ತ ಮನೆಯತ್ತ ಓಡಿದರು. ನನ್ನ ಟಾಂಗಾ ಆ ಸಂದಿಯನ್ನು ತಿರುಗುತ್ತಲೆ ಆ ಇಡೀ ಸಮುದಾಯವೇ ಹೋ ಎಂದು ಕಿವಿ ಗಡಚಿಕ್ಕುವಂತೆ, ಗೋಳಿಟ್ಟಿತು. ನನ್ನ ಮೈ ನಡುಗಿತು. ಅವರ ಮಧ್ಯದಲ್ಲಿಯೇ ಇದ್ದಾಗ ಸತ್ತ ಸುದ್ದಿಯನ್ನು ಉಸುರಿದ್ದರೆ ನನ್ನ ಗತಿ ಏನಾಗುತ್ತಿತ್ತೋ ಎಂದು.

ಇನ್ನೊಂದು ಪ್ರಸಂಗ. ಇದು ಕಲಿತವರ ವಿಷಯ. ಇದು ಇತ್ತೀಚಿನ ಸಂಗತಿ. ರೋಗಿಯು ಮನೆಯಲ್ಲಿ ಟೈಫಾಡ್ ಆಗಿ ಮಲಗಿದ್ದಾನೆ. ವಯಸ್ಸು ೨೮-೩೦. ಔಷಧ ಮುಂತಾದವನ್ನು ತರುವವನು ಅವರ ತಮ್ಮ. ಅಣ್ಣನ ಮೇಲೆ ಪ್ರೇಮ ಬಹಳ. ಅವರ ಸ್ವಭಾವ ಬಹಳೇ ಗಾಬರಿಯದು. ಮುಂಜಾನೆಯಿಂದು ಸಂಜೆಯ ವರೆಗ ರೋಗಿಗೆ ಆಗುವ ವೇದನೆಗಳನ್ನೆಲ್ಲ ಮತ್ತು ಅವನ ಬೇರೆ ಬೇರೆ ಗುಣಗಳನ್ನು ಚಾಚೂ ತಪ್ಪದೆ ಬರೆದುಕೊಂಡು ನನ್ನ ಮುಂದೆ ಓದಿಬಿಡುವನು. ನಾನು ಕೊಟ್ಟ ಸಲಹೆಗಳನ್ನು ಟಿಪ್ಪಣಿ ಮಾಡಿಕೊಂಡು ಮನೆಯಲ್ಲಿ ಬರುತ್ತಿದ್ದನೋ ಏನೋ. ಜಡ್ಡಿನ ಮೊದಲನೆ ವಾರ. ಜ್ವರ ದಿನದಿನಕ್ಕೆ ಏರುತ್ತ ಹೋದಿ, ಇದರಿ, ತಮ್ಮನು ಗಾಬರಿಯಾಗಿ ಡಾಕ್ಟರರೇ ಏನಾದರೂ ಮಾಡಿರಿ ಅಣ್ಣನನ್ನು ಉಳಿಸಿರಿ, ಜ್ವರ ಏರುತ್ತ ನಡೆದಿದೆ, ಇಂಜೆಕ್ಶನ್ ಬೇಕಾದರೂ ಕೊಡಿರಿ" ಎಂದನು. "ರಾಯರೇ ಧೈರ್ಯ ಬಿಡಬೇಡಿರಿ ಈ ವಾರದಲ್ಲಿ ಜ್ವರ ಏರುವದೇ, ಯಾವ ಕಾಂಪ್ಲಿಕೇಶನ್ಸೂ ಇಲ್ಲ. ಮುಂದೆ ತಾವೇ ಇಳಿಯುವವು. ಇದೊ ಒಂದು ಎಂಟಿ ಟೈಫಾಡ್ ವ್ಯಾಕ್ಸಿನ್ 10 c c. ಟ್ಯೂಬನ್ನು ಕೊಂಡು ಬರ್ರಿ" ಎಂದು ಚೀಟಿ ಬರೆದು ಕೊಟ್ಟೆ. ಇಂದು ಸಂಜೆ ೫ ಗಂಟೆಗೆ ಬರುವೆನೆಂದು ಹೇಳಿದೆ. ಮನೆಯವರಿಗೆಲ್ಲ ಪ್ರತಿಬಂಧಕ ಚುಚ್ಚು ಮದ್ದನ್ನು ಕೊಡುವ ಉದ್ದೇಶವಿತ್ತು. ಅವರ ಮನೆಗೆ ಸರಿಯಾಗಿ ೫

ಗುಟಿಗೆ ಹೋದೆ. ರೋಗಿಯನ್ನು ನೋಡಿ, ಜ್ವರ ಏರಿದ್ದರಿಂದ ಹಣೆಗೆ ಕೋಲನ್‌ವಾಟರ ಪಟ್ಟಿ ಹಾಕಲು ಹೇಳಿದೆ. ಸ್ಟೊ ಹಚ್ಚಲು ತಿಳಿಸಿ, ವ್ಯಾಕ್ಸಿನ್‌ಟ್ಯೂಬನ್ನು ಕೊಡಲು ಕೇಳಿದೆ. ನಮ್ಮ ಕಾಲೇಜಿನ ಮಿಸ್ಟರರು ಎಲ್ಲಿಯೂ ಅಲ್ಲಿ ಕಾಣಲಿಲ್ಲ. ಮನೆಯವರು ಹಿಂದು ಮುಂದೆ ನೋಡಹತ್ತಿದರು. ಆಶ್ಚರ್ಯವಾಯಿತು. ನನಗಾವುದೂ ತಿಳಿಯಲಿಲ್ಲ. ಅವರ ನೆರೆಹೊರೆಯ ಗೃಹಸ್ಥರು ನನ್ನ ಗೆಳೆಯರು. ನನ್ನನ್ನು ಹೊರಗೆ ಕರೆದು "ನೀವು ಮುಂಜಾನೆ ಬರೆದುಕೊಟ್ಟ ಟ್ಯೂಬನ್ನು ಅವರು ತಂದಿಲ್ಲ. ತಂದು ಕೊಟ್ಟರೆ 10 c. c. ಮದ್ದನ್ನು ಎಲ್ಲ ರೋಗಿಗೆ ಕೊಟ್ಟು ಬಿಡುವಿರೆಂದು ಗಾಬರಿ" ಎಂದು ಹೇಳಿದರು. ಆಗ ನನಗೆ ಸಿಟ್ಟುಬರಲಿಲ್ಲ. ಮೋಜು ಎನಿಸಿತು. ನಾನು ಔಷಧಿಯನ್ನು ತರಹೇಳಿದ್ದು ಮನೆಯವರಿಗೆಲ್ಲ ಪ್ರತಿಬಂಧಕ ಇನಾಕ್ಯುಲೇಶನ್ ಕೊಡಲಿಕ್ಕೆ ಅಲ್ಲದೆ ಒಮ್ಮೆ ಜ್ವರ ಸುರುವು ಆದಮೇಲೆ, ಈ ಔಷಧಿಯನ್ನು ರೋಗಿಗೆ ಚುಚ್ಚುವದಕ್ಕಲ್ಲೆಂದು ಹೇಳಿದ್ದಕ್ಕೆ ನನ್ನ ಗೆಳೆಯರು ನಕ್ಕರು. ಹಿತ್ತಲ ಮನೆಯಲ್ಲಿ ಅಡಗಿ ಕುಳಿತ ನಮ್ಮ ಕಾಲೇಜ ಗೆಳೆಯರನ್ನು ಕರೆದು ಈ ವಿಷಯವನ್ನು ತಿಳಿಸಿದಾಗ ತಮ್ಮ ತಪ್ಪನ್ನು ಒಪ್ಪಿ ಕ್ಷಮೆ ಕೇಳಿದರು.

ಇವರೇ ಮುಂದೆ ಕೆಲವು ದಿವಸಗಳ ಮೇಲೆ ಮೈಯಲ್ಲಿ ಅಶಕ್ತತೆಯಾಗಿದೆ ಒಂದು ಟಾನಿಕ್ ಬರೆದುಕೊಡಿರಿ ಎಂದು ಹೇಳಿದರು. ಅಣ್ಣನಿಗೆ ಆರೈಕೆ ಮಾಡಿ ದಣಿದಿದ್ದರೂ ಪಾಪ, ಔಷಧಿ ಬರೆದುಕೊಟ್ಟೆ. ೨-೩ ದಿವಸಗಳಲ್ಲಿಯೆ ಬಂದಿತು ಸ್ವಾರಿ. ಮೋರೆ ಕಳೆಗುಂದಿದೆ. ಹುಚ್ಚಿಟ್ಟಿದೆ. "ಡಾಕ್ಟರರೆ ಏನು ಹೇಳಲಿ" ಎಂದರು. ನನಗೂ ಅವರ ನೆನಪಾಗಿ, ಮತ್ತೆ ಏನಾಯಿತೊ ಎಂದು ಗಾಬರಿಯಾಗಿ "ನಿಮ್ಮಣ್ಣನಿಗೆ ಸೌಖ್ಯವೇ" ಎಂದು ಕೇಳಿದೆ. ಅವರು ನೆಟ್ಟಗಿದ್ದಾರೆ. ನನಗೆ ಹೊಟ್ಟೆಯುರಿ, ಇಂದು ಮುಂಜಾನೆ ಹೊರಕಡಿಯಲ್ಲಿ ರಕ್ತ ಬಿತ್ತು, ಟಾನಿಕ್ ಸುರುವು ಮಾಡಿ ೨ ದಿನಗಳಾದವು. ಅದರಿಂದಲೇ ಹೀಗಾಯಿತೋ ಏನೋ! ಸೇವನೆಯನ್ನು ಬಂದು ಮಾಡಲೆ ಎಂದರು. "ಎರಡು ದಿವಸ ಬಂದು ಮಾಡಿರಿ. ರಾತ್ರಿ Liquid Paraffin ತಕ್ಕೊಳ್ಳಿರಿ. ಎಲ್ಲವೂ ಸರಿಹೋಗುವುದು ಎಂದು ನನ್ನ ಕೆಲಸದಲ್ಲಿ ತೊಡಗಿದೆ. ಅವರು ಹೊರಬಾಗಿಲವರೆಗೂ ಹೋಗಿ ಮತ್ತೆ ನನ್ನ ಕಡೆಗೆ ಬಂದರು. ಕೈಚೀಲದಿಂದ

ಟಾನಿಕ್ ಬಾಟ್ಲಿಯನ್ನು ತೆಗೆದು ನಾನು ಬರೆದುಕೊಟ್ಟ ಚೀಟಿಯನ್ನು ನನ್ನ ಮೇಜಿನ ಮೇಲೆಇಟ್ಟು 'ಇದು ಸರಿಯಾಗಿಡೆಯೆ' ಎಂದರು. ನನಗೆ ಅರ್ಥ ವಾಗಲಿಲ್ಲ. 'ಯಾಕೆ ಸರಿಯಾಗಿದೆ' ಎಂದು ಮೋರೆ ನೋಡಿದೆ. ಅವರು ನಡಗುವ ಕೈಯಿಂದ ಆ ಬಾಟ್ಲಿಯ ಮೇಲೆ ಕೆಂಪಕ್ಷರದಿಂದ ಬರೆದ "Poison" ಶಬ್ದವನ್ನು ತೋರಿಸಿದರು. ಆಗ ತಿಳಿಯಿತು. ಅವರ ಪೇಚಾಟ, ಪಾಪ ವಿಷವನ್ನೇ ತಕ್ಕೊಂಡಿದ್ದರೆಂದು ಅವರ ಭಯ, ಇಷ್ಟು ನಡುಗು !

ಸಾಮಾನ್ಯ ಜನರು ಅರ್ಥಾತ್ ನಮ್ಮ ಕಲಿತ ಬಾಂಧವರು ಡಾಕ್ಟರರ ಸಲಹೆ ಇಲ್ಲದೆ ಜಾಹೀರಾತುಗಳನ್ನು ನೋಡಿ ಸಿಕ್ಕಾಪಟ್ಟೆಯಾಗಿ ಔಷಧಿ ಯನ್ನು ಸೇವಿಸಬಾರದೆಂದು ಈ ರೀತಿಯಾಗಿ ಕಂಪನಿಯವರು ಬರೆಯುವ ದುಂಟು. ನನ್ನಲ್ಲಿಯ ಇಂಥ ೨-೩ ಬಾಟ್ಲಿಯನ್ನು ಅವರಿಗೆ ತೋರಿಸಿದಾಗ ಸಮಾಧಾನವಾಗಿ 'ಹಾ ಬದುಕಿದೆ' ಎಂದು ಉಸುರೆಳೆದರು ಇದಕ್ಕೆ ನಗಬೇಕೆ ಇಲ್ಲವೆ ಅಳಬೇಕೆ ? ಇವೇ ಮೊದಲಾದ ವಿಷಯಗಳು ನಮಗೆ ಬಹಳೇ ಮನೋ ರಂಜಕವಾಗಿರುವವು. ಇವುಗಳಿಂದ ನಮ್ಮ ದುಗುಡಾದ ಮನಸ್ಸು ಕೂಡ ಹಗುರಾಗುವದು. ನೀವು ತಿಳಿದುಕೊಂಡಂತೆ ನಮ್ಮ ರೂಮು ಹೊರಗೆ ಅಷ್ಟು ವಿರಸವಾಗಿ ಕಂಡರೂ ಅದರಲ್ಲಿ ಜೀವಕಳೆ ತುಂಬಿ ತುಳುಕುತ್ತಿದೆ. ನಿಮಗೆ ಆ ದೃಷ್ಟಿ ಬೇಕು, ಎಂದೆ. ಆಗ ಬಾನುಲಿಕಾರರಿಗೆ ಮನದಟ್ಟಾಯಿತು, ಇಲ್ಲಿಯೂ ನಗೆ ಇದೆ, ಜಗತ್ತಿನಲ್ಲಿ ನಗೆ ಇರದ ಎಡೆಯು ಇಲ್ಲವೇ ಇಲ್ಲ ಎನ್ನುವುದು.

—ಡಾಕ್ಟರ ಕಮಲಾಪೂರ ಬಿಂದೂರಾವ

# ಸುದರ್ಶನ ಪ್ರಕಟನೆಗಳು

ಮೊದಲ ನೋಟ
ಅಭಯ
ಸ್ವಯಂವರ
ಬಾಳ ಬಂಧನ
ಕಲಾವಿದ
ಮಂಗಳ ದೀಪ
ರಷ್ಯಾದ ಕತೆಗಳು
ನಪುಂಸಕ
ಮಸಣದ ಹೂವು
ಅಪವಾದ
ಸತದೃಷ್ಟಿ
ಶಕ್ತಿ ಪೂಜೆ
ಸೇಡಿನ ಕಿಡಿ
ಸಾಕ್ಷಾತ್ಕಾರ
ಮಾವನ ಮನೆ
ಹೊಸ ಬಾಳು
ಮಂತ್ರಶಕ್ತಿ
ಪ್ರೇಮ ಬಂಧನ
ಪುಸ್ತಕ ಹೇಳಿದ ಕಥೆ
ಜೀವನಾದ
ಹೃದಯಗೀತ
ಧರ್ಮದೇವತೆ
ಮದುವೆಯ ಹಾಡು
ಬಿರಿದ ಭೂಮಿ
ಬನಶಂಕರಿ
ಕಾರ್ಕೋಟಕ
ಗಂಗಾ—ಗೌರಿ
ನಕ್ಷತ್ರ ಗಾನ
ಹೇಮಂತನ ಮಗಳು
ಬೆಳದಿಂಗಳು
ಕಣ್ಣು ತೆರೆಯಿತು
ಭಜಗೋವಿಂದಂ
ಮುಕ್ತಿ
ಸ್ವರ್ಣಮೂರ್ತಿ
ಕಣ್ಣು ಮುಚ್ಚಾಲೆ
Love ಮ್ಯಾರೇಜ್
ಫರ್ಸ್ಟ್‌ಕ್ಲಾಸ ವೇಟಿಂಗ ರೂಮು

ನುಡಿಮುತ್ತು
ಮೋಡ ಚದುರಿತು
ಸಂಸ್ಕೃತಿ
ಮಂಡುಳ
ಒಬ್ಬಟ್ಟಿನ ಕಂಟ್ರಾಕ್ಟು
ಗೃಹಪ್ರವೇಶ
ಸಾಹಿತ್ಯ ಸ್ವರೂಪ
ಕೇದಿಗೆ ವನ
ಅಳಿಯ ದೇವರು
ವಿಶ್ವರಂಗ
ರಾಜೇಶ್ವರಿ
ಕವಲುದಾರಿ
ತೆರೆದ ಕಣ್ಣು
ಪ್ರಜಾತಂತ್ರ
ತಂಬೂರಿ ತಮ್ಮಯ್ಯ
ಮಾವನ ಮಗಳು
ಮಂಗಲಾಕ್ಷತೆ
ಪುಸ್ತಕ ಭಂಡಾರಗಳು
ಕೀಚಕ
ತುಂಬಿದ ಮನೆ
ಪಕೋಡಪ್ರಿಯ
ಗಾನಯೋಗಿ
ಕೊನೆಯ ದಾರಿ
ಅಡಿಗೆ ಮನೆ
ಟೀಪು ಪೈಗಂಬರ್
ಹಸಿರು ನೆಲ
ಪರದೇಶಿ
ಸತ್ತವನು ಎದ್ದು ಬಂದಾಗ
ಮುಗಿಲ ಮಲ್ಲಿಗೆ
ಮುಚ್ಚಿದ ಬಾಗಿಲು
ಸಿಲೀಕ್ ಮತ್ತು ಮಾರ್ಕ್ಸ್ ಕಾರ್ಡ್
ಮೊರೆನಾಸಿ
ತಿಂಮನ ತಲೆ
ಗೆಳೆಯನ ಮಡದಿ
ತಿಂಮ ರಸಾಯನ
ಮಿಸ್ India
ದೇವರ ಕಾಸು


ಸುದರ್ಶನ
ಪ್ರಕಾಶನ